# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ನಳ ಚರಿತ್ರೆ

ಕವಿ

## ಧ್ವಜಪುರದ ನಾಗಪ್ಪಯ್ಯ


ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜುಲೈ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@co.gmailm, yakshavahini@co.gmailm Blog: www.yakshaprasangakosha.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ.  ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್,  ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

# ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

# ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**
ಪೌರಾಣಿಕ

**ಆಧಾರ ಗ್ರಂಥ:**
ಮಹಾಭಾರತ

**ಭಾಷೆ:**
ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ

**ಹಕ್ಕುಸ್ವಾಮ್ಯ ವಿವರ:**
ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**
೬೨೪

**ಪಾತ್ರಗಳು:**
ನಳಚಕ್ರವರ್ತಿ, ಮಂತ್ರಿ, ದೇವೇಂದ್ರ ಮುಂತಾದ ದಿಕ್ಪಾಲಕರು, ಹಂಸ, ಭೀಮ (ವಿದರ್ಭದೇಶದ ದೊರೆ), ದಮ ಋಷಿ, ದಮಯಂತಿ, ಗಿಳಿ, ಬ್ರಾಹ್ಮಣರು, ಸರಸ್ವತಿ, ಶನಿ, ಪುಷ್ಕರ, ಶೂರ್ಪಜಿಹ್ವ, ಬೇಡರವ, ಛಪ್ಪನ್ನದೇಶದ ದೊರೆಗಳು, ಇವರ ದೂತರು, ಬೇಟೆಗಾರರು, ಸುಲೋಚನ (ಮಾದ್ರದೇಶಾಧಿಪತಿ), ಈತನ ಮಂತ್ರಿ, ಪದ್ಮಗಂಧಿ (ಮಲಯಾಳ ದೇಶದ ರಾಣಿ), ಈಕೆಯ ಪರಿಚಾರಕೆಯರು, ವರ್ತಕರು, ಚೈದ್ಯೇಶನ ರಾಣಿ, ಕಾರ್ಕೋಟಕ, ಋತುಪರ್ಣ(ಅಯೋಧ್ಯಾಧಿಪತಿ)

**ಕಥಾ ಸಾರಾಂಶ:**
ನಿಷಧ ದೇಶದ ರಾಜ ನಳ ಅವನಿಗೆ ಸಿಕ್ಕಿರುವ ಮಾತನಾಡುವ ಹಂಸ, ಕನ್ಯೆಯನ್ನು ಹುಡುಕಲು ಹೊರಡುತ್ತದೆ. ಹಂಸದ ದೌತ್ಯದಿಂದಾಗಿ ವಿದರ್ಭ ದೇಶದ ಭೀಮಕನ ಮಗಳಾದ ದಮಯಂತಿಯೊಂದಿಗೆ ವಿವಾಹ ನಿಶ್ಚಯವಾಗುತ್ತದೆ. ನಳ ವಿದರ್ಭಕ್ಕೆ ದಿಬ್ಬಣದೊಂದಿಗೆ ಬರುತ್ತಿರಲು ದೇವತೆಗಳು ಎದುರಾಗಿ, ತಮ್ಮ ಪರವಾಗಿ ದಮಯಂತಿಯನ್ನು ಒಲಿಸುವಂತೆ ಕೋರುತ್ತಾರೆ. ಒಪ್ಪಿದ ನಳ ಅದಕ್ಕೆ ಪ್ರಯತ್ನಿಸುತ್ತಾನೆ. ಆತನ ವರ್ತನೆಗೆ ದೇವತೆಗಳು ಅವನಿಗೆ ಕೆಲವೊಂದು ವರಗಳನ್ನು ದಯಪಾಲಿಸುತ್ತಾರೆ. ದೇವತೆಗಳು ವಿವಾಹ ಮಂಟಪದಲ್ಲಿ ನಳನಂತೆ ಕಂಡರೂ ದಮಯಂತಿಯನ್ನು ಮದುವೆಯಾಗಲು ವಿಫಲರಾಗುತ್ತಾರೆ. ಸೋತ ದೇವತೆಗಳು ನಳನ್ನು ದರಿದ್ರನನ್ನಾಗಿ ಮಾಡುವುದಾಗಿ ಶಪಥ ಮಾಡುತ್ತಾರೆ. ಮುಂದೆ ದಯಮಂತಿ ನಳನೊಂದಿಗೆ ಮದುವೆಯಾಗುತ್ತಾಳೆ ಮತ್ತು ಎರಡು ಮಕ್ಕಳನ್ನು ಪಡೆಯುತ್ತಾಳೆ.

ಒಂದು ದಿನ ಒಡ್ಡೋಲಗದಲ್ಲಿರುವ ನಳನನ್ನು ಶನಿ ಹಿಡಿಯುತ್ತಾನೆ. ತಮ್ಮ ಪುಷ್ಕರನ ಮೂಲಕ ಶನಿ ನಳನನ್ನು ಪಗಡೆಯಾಟಕ್ಕೆ ಪ್ರೇರೆಪಿಸುತ್ತಾನೆ. ನಳ ಸೋತು ರಾಜ್ಯ ಭ್ರಷ್ಟನಾಗಿ ದೇಶ ತೊರೆಯುತ್ತಾನೆ. ದಯಮಂತಿ ನಳನೊಂದಿಗೆ ಕಾಡಿಗೆ ಬರುತ್ತಾಳೆ. ಕಾಡಿನಲ್ಲಿ ಮಲಗಿದ್ದ ಸಮಯದಲ್ಲಿ ದಮಯಂತಿಯನ್ನು ನಳ ಕಾಡಿನಲ್ಲಿ ಬಿಟ್ಟು ಹೊರಟು ಹೋಗುತ್ತಾನೆ. ವರ್ತಕರ ನೆರವಿಂದ ದಮಯಂತಿ ಚೇದಿ ದೇಶವನ್ನು ಸೇರಿಕೊಳ್ಳುತ್ತಾಳೆ. ಇತ್ತ ನಳನಿಗೆ ಕಾರ್ಕೋಟಕವೆಂಬ ಸರ್ಪ ಕಚ್ಚಿದ್ದರಿಂದ ಅವನ ರೂಪ ವಿಕಾರವಾಗುತ್ತದೆ. ಅಯೋಧ್ಯೆಯ ಅರಸನಾದ ಋತುಪರ್ಣನಲ್ಲಿ ಬಾಹುಕನೆಂಬ ಹೆಸರಿನಿಂದ ಆಶ್ರಯವನ್ನು ಪಡೆಯುತ್ತಾನೆ.

ದಮಯಂತಿ ಸುದೇವ ಬ್ರಾಹ್ಮಣನ ಕಾರಣದಿಂದ ಮತ್ತೆ ತಂದೆಯ ಮನೆಯನ್ನು ಸೇರಿಕೊಳ್ಳುತ್ತಾಳೆ. ನಳನನ್ನು ಹುಡುಕುವ ಸಲುವಾಗಿ ದಮಯಂತಿ ಪುನರ್ ಸ್ವಯಂವರವನ್ನು ಭೀಷ್ಮಕ ಮಹಾರಾಜ ಘೋಷಿಸುತ್ತಾನೆ. ಋತುಪರ್ಣನಿಗೆ ಮಾತ್ರ ನಾಳೆ ಸ್ವಯಂವರ ಎನ್ನುವಾಗ ಆಮಂತ್ರಣ ನೀಡುತ್ತಾನೆ. ಈ ಧರ್ಮ ವಿರೋಧಿ ಕ್ರಮವನ್ನು ಋತುಪರ್ಣ ವಿರೋಧಿಸುತ್ತಾನೆ. ಬಾಹುಕ ನಿಶ್ಚಿತ ಸಮಯದೊಳಗೆ ಮುಟ್ಟಿಸುವೆನೆಂದು ಹೇಳಿದ್ದರಿಂದ ಭೀಷ್ಮಕನನ್ನು ಖಂಡಿಸಲು ಋತುಪರ್ಣ ಹೊರಡುತ್ತಾನೆ. ದಾರಿಯಲ್ಲಿ ಬಾಹುಕ ಯಾರು ಎಂಬ ಸತ್ಯ ಋತುಪರ್ಣನಿಗೆ ತಿಳಿಯುತ್ತದೆ. ಮುಂದೆ ದಮಯಂತಿಯ ಪರೀಕ್ಷೆಗೆ ಒಳಗಾದ ಬಾಹುಕ ನಳನೊಂದು ಗುರುತಿಸಿ ಮತ್ತೆ ಒಂದಾಗುತ್ತಾರೆ.

**ಕವಿ ಪರಿಚಯ: (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**
ಧ್ವಜಪುರದ ನಾಗಪ್ಪಯ್ಯನ ಕಾಲ ಕ್ರಿ.ಶ. ೧೬೦೦ ರಿಂದ ೧೬೫೦. ಇವರ ಪ್ರಸಂಗಗಳಲ್ಲಿ ಕೋಟಿಲಿಂಗೇಶ್ವರನ ಸ್ತುತಿಯಿದ್ದು, ಡಾ.ಶಿವರಾಮ ಕಾರಂತರು ಇವರು ಕೋಟೇಶ್ವರದವರೆಂದು ಗುರುತಿಸಿದ್ದಾರೆ. ಇವರು ತನ್ನನ್ನು ನಾರಾಯಣಾರ್ಯನೆಂಬ ವಿಪ್ರನ ಮಗನೆಂದು ಹೇಳಿಕೊಂಡಿದ್ದಾರೆ.

ಇವರು ಬರೆದ ಪ್ರಸಂಗಗಳು: ಚಂದ್ರಾವಳಿ, ಘಟೋತ್ಕಚಕಾಳಗ, ಇಂದ್ರಕೀಲಕ, ಸೌಗಂಧಿಕಾಹರಣ ಮತ್ತು ಜಟಾಸುರ ವಧೆ ಹಾಗೂ ನಳ ಚರಿತ್ರೆ

**ಟಿಪ್ಪಣಿ:**
ಪ್ರಸಂಗದ ಉತ್ತರ ಭಾಗ ದಮಯಂತಿ ಪುನರ್ ಸ್ವಯಂವರ ಪ್ರಸಂಗವಾಗಿ ಹೆಚ್ಚು ಜನಪ್ರಿಯಗೊಂಡಿದೆ.

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತಂ**
ಶ್ರೀಮತ್ಸುಂದರರಾಮಾಮುಖಾಬ್ಜತರಣಿಂ ಮೌನೀಮನೋಮಂದಿರಂ
ಕ್ಷೇಮಾರೋಗ್ಯಸುಖಾಸ್ಪದಂ ಸುಲಲಿತಂ ಬಾಲಾರ್ಕಕೋಟಿಪ್ರಭಮ್ |
ಕಾಮಾರಾತಿಸಖಂ ಕರೀಂದ್ರವರದಂ ಕಾರುಣ್ಯರತ್ನಾಕರಂ
ಪ್ರೇಮಾಲಂಕೃತಶೋಭಿತಂ ಸುರನುತಂ ಧ್ಯಾಯಾಮಿ ಶ್ರೀವೆಂಕಟಂ ||

**ನಾಟಿ - ಮಟ್ಟೆ**
ನಂದಿಧ್ವಜಸುಕುಮಾರನೆ | ಇಂದಿರೆಯರಸನ ಪ್ರೀತನೆ |
ಚಂದನ ಕುಂಕುಮ ಲೇಪನೆ | ಸುಂದರವಿಗ್ರಹನೆ ||
ಕುಂದಣರತ್ನವಿಭೂಷನೆ | ಸಿಂಧು ಸಮಗಂಭೀರನೆ |
ಇಂದ್ರಾದ್ಯಖಿಳಸುಪೂಜ್ಯನೆ | ಚಂದಿರಮದಹರನೆ || ೧ ||
ಶರಣಾಗತ ಪರಿಪಾಲನೆ | ನಿರತಾನಂದಸುಶೀಲನೆ |
ವರ ಸಿತಮೂಷಿಕವಾಹನನೆ | ಪರತರ ಪಾವನನೆ ||
ಕರಿಮುಖ ಕೋಮಲಕಾಯನೆ | ಮೆರೆವ ಚದುರ್ಭುಜದೇವನೆ |
ಕರದಲಿ ಪಾಶಾಂಕುಶವನೆ | ಹರುಷದಿ ಧರಿಸಿಹನೆ || ೨ ||
ದುರುಳರ ವಂಶಕುಠಾರನೆ | ಸರಸಿಜಸಖಮಿತ ಭಾಸನೆ |
ಭರಿತ ವೇದಾಂತವಿಚಾರನೆ | ಸುರಮುನಿವಂದಿತನೆ ||
ಸ್ಮರಶರಕೃತಕವಿದೂರನೆ | ಉರುತರ ಶೌರ್ಯ ಮಹಾತ್ಮನೆ |
ವರಧ್ವಜ ನಗರ ನಿವಾಸನೆ | ಶರಣು ಗಣಾಧಿಪನೆ || ಜಯ ಜಯ || ೩ || 3 ||

**ಸುರುಟಿ - ಆದಿ**
ಪಾಲಿಸಜನ ರಾಣಿ | ಕೀರ್ತಿವಿ | ಶಾಲೆ ಪುಸ್ತಕಪಾಣಿ ||
ಲೋಲನಯನೆ ಖಳಜಾಲವಿದಾರಿಣಿ |
ನೀಲಾಳಕಿ ಗುಣಶೀಲೆ ಕಲಾಪಿನಿ || ಪಾಲಿಸಜನ || ೧ ||
ಇನಶತಸಂಕಾಶೆ | ಮಣಿಗಣ | ಕನಕರುಚಿರಭೂಷೆ ||
ಘನತರ ತ್ರಿಜಗತ್ರಾಣ ವಿಲಾಸೆ |
ಸನಕಸನಂದನವಂದಿತೆ ತೋಷೆ || ಪಾಲಿಸಜನ || ೨ ||
ನಂಬಿದೆನೆಲೆ ತಾಯೆ | ಮತಿಯನು | ಬೆಂಬಿಡದೆನಗೀಯೆ ||
ಸಂಭ್ರಮದಲಿ ಶೃಂಗನಗರದಿ ನೆಲಸಿಹ |
ಕಂಬುಕಂಧರೆ ಶ್ರೀಶಾರದೆ ಸಲಹೌ || ಪಾಲಿಸಜನ || ೩ || 6 ||

**ಕಾಂಭೋಜಿ - ಅಷ್ಟ**
ಕ್ಷೀರಸಾಗರವಾಸ | ಭೂರಿಮಂಗಲತೋಷ | ವೆಂಕಟೇಶ ||
ವಾರಿಜದಳ ನೇತ್ರ | ಮಾರಾರಿಗತಿ ಮಿತ್ರ | ವೆಂಕಟೇಶ || ೧ ||
ದುರುಳಕುಲಾಂತಕ | ಶರಣರುದ್ಧಾರಕ | ವೆಂಕಟೇಶ ||
ಮರೆಯ ಹೊಕ್ಕೆನು ನಿನ್ನ | ಕರುಣದಿ ಸಲಹೆನ್ನ | ವೆಂಕಟೇಶ || ೨ ||
ಇಂದಿರೆಯರಸ ಗೋ | ವಿಂದ ಕೌಸ್ತುಭಭೂಷ | ವೆಂಕಟೇಶ ||
ಬಂದು ಮನದೊಳೀಗ | ನಿಂದು ನುಡಿಸು ಬೇಗ | ವೆಂಕಟೇಶ || ೩ || 9 ||

**ಶಂಕರಾಭರಣ - ರೂಪಕ**
ತಾರಕಾರಿಜನಕ ವೃಷಭರೂಢ ದೇವನೆ |
ಮಾರವೈರಿ ಪಂಚವದನ ಗೌರಿಯರಸನೆ ||
ವಾರಿಜಾಸನಾದಿವಿನುತ ಪಾರಮಹಿಮನೆ |
ಚಾರು ಚರಿತ ಪುಣ್ಯನಾಮ ಘೋರರೂಪನೆ || ೧ ||
ಫಾಲನಯನ ನೀಲಕಂಠ ವ್ಯಾಳ ಭೂಷನೆ |
ಕಾಲಕಾಲ ಶೂಲಪಾಣಿ ಸ್ಫಟಿಕಭಾಸನೆ ||
ಬಾಲಹಿಮಕರಾಂಕಜೂಟ ಭಸಿತಲೇಪನೆ |
ಶ್ರೀ ಲತಾಂಗಿರಮಣ ಮಿತ್ರ ಸಲಹೊ ಧರ್ಮನೆ || ೨ ||
ಸುರ ನರೋರಗಾದಿ ಸಕಲ ಲೋಕಸೂತ್ರನೆ |
ಶರಣಜನರಭೀಷ್ಟವಿತ್ತು ಪೊರೆವ ಪಾತ್ರನೆ ||
ಮೆರೆವ ಶೃಂಗಪುರದ ಮಧ್ಯಗಿರಿಯವಾಸನೆ |
ನಿರತ ಮಲ್ಲಿಕಾರ್ಜುನಾಭಿಧಾನ ಲಿಂಗನೆ || ೩ || 12 ||

**ಭಾಮಿನಿ**
ಹರಗೆ ಗಿರಿಜೆಗೆ ಮಾರಜನಕಗೆ | ಸಿರಿಗೆ ಸರಸಿಜಭವಗೆ ಪಾಣಿಗೆ |
ಕರಿವದನ ಗುಹ ಮುಖ್ಯ ಸುರರಿಗೆ ಸಕಲಮುನಿಗಳಿಗೆ ||
ತರಣಿ ಶಶಿಗುರುಹಿರಿಯರಂಘ್ರಿಗೆ | ವರ ಕವೀಶ್ವರ ನಿಪುಣಜನರಿಗೆ |
ಪರಮ ಭಕ್ತಿಗಳಿಂದಲೆರಗುವೆ ಮತಿಯ ಪಾಲಿಪುದು || ೧ || 13 ||

**ದ್ವಿಪದಿ**
ಇನಿತೆಲ್ಲ ದೇವರನು ಭಜಿಸಿ ದೃಢದೊಳಗೆ |
ಘನಮಹಿಮ ವ್ಯಾಸರಿಂಗೆರಗಿ ಮನದೊಳಗೆ || ೧ ||
ವಿನಿಯದಿಂ ನೆನೆದು ಸದ್ಗುರುಪದಾಬ್ಜವನು |
ಅನುನಯದಿ ಬಲಗೊಂಡು ಕವಿಗಳೆಲ್ಲರನು || ೨ ||
ವರ ಮಹಾಭಾರತಪುರಾಣದೊಳಗಿರುವ |
ಸಿರಿಸಹೋದರವಂಶ ನಳನ ಚಾರಿತವ || ೩ ||
ಧರೆಯ ಜನರರಿವಂತೆ ಯಕ್ಷಗಾನದೊಳು |
ವಿರಚಿಸುವೆನಿದರೊಳಗೆ ಇರಲು ತಪ್ಪುಗಳು || ೪ ||
ತಿಳಿದವರು ತಿದ್ದಿ ಮೆರೆಸುವುದು ಕೃಪೆಯಿಂದ |
ಸಲೆ ಭೇದವಿಡದೆ ಯೆನ್ನೊಳಗೊಲುಮೆಯಿಂದ || ೫ ||
ಒಳವನರಿತವನಲ್ಲ ಕವಿಚಮತ್ಕೃತಿಯ |
ನಳಿನನಾಭನ ದಯದಿ ಪೇಳ್ವೆನೀ ಕೃತಿಯ || ೬ || 19 ||

**ಸೌರಾಷ್ಟ್ರ - ತ್ರಿವುಡೆ**
ಪ್ರೇಮದಿಂದಲೆ ಶೌನಕಾದ್ಯರಿ |
ಗಾ ಮಹೋತ್ತಮ ಸೂತಮುನಿಪನು |
ರಾಮಣೀಯಕದಿಂದ ನಳನ ಕ | ಥಾನುಭವವ || ೧ ||
ತಾ ಮನೋಹರನಾಗುತಿತ್ತಲು |
ಪ್ರೇಮದಿಂದಲಿ ಪೇಳುತಿರಲಾ |
ಭೂಮಿಪತಿ ಧರ್ಮಜನು ಧೌಮ್ಯಾ | ಶ್ರಮದೊಳಂದು || ೨ ||
ತರುಣಿಯನುಜರು ಸಹಿಸಲಿರುತಿರೆ |
ಹರನ ಮೆಚ್ಚಿಸುತೀಂದ್ರಕೀಲದಿ |
ಶರವ ಪಡೆದಾ ನರನು ಶಕ್ರನ | ಪುರಕೆ ತೆರಳಿ || ೩ ||
ದುರುಳರಾದ ನಿವಾತಕವಚರ |
ಧುರದಿ ಸಂಹರಿಸುತ್ತ ನಾಕದಿ |
ಇರಲು ಧರ್ಮಜನಿಂಗೆ ಸುದ್ದಿಯ | ನರುಹಲಾಗಿ || ೪ ||
ಸುರಪನಾಜ್ಞೆಯೊಳಿಳೆಗೆ ರೋಮಶ |
ಬರಲು ಕಾಮ್ಯಕವನಕೆ ವಹಿಲದಿ |
ಭರದೊಳಿದಿರಯ್ತಂದು ಸತ್ಕರಿ | ಸುತಲೆ ಯಮಜ || ೫ ||
ದುರುಳ ಕೌರವನಿಂದ ಕಾನನ |
ದೊರಕಿತೆನೆ ಮುನಿನಾಥನೆಂದನು |
ಬರಿದೆ ಶೋಕಿಪೆ ನಿನಗೆ ಬಂದಿಹ | ಕೊರತೆಯೇನೈ || ೬ ||
ಹರಿಯು ಪೊರೆವನು ನಿಮ್ಮನದರೊಳು |
ತರಣಿಯಕ್ಷಯ ಪಾತ್ರವಿತ್ತಿಹ |
ನರುಹಿದುದ ಶಿರವಾಂತು ನಡೆಸುವ | ಅನುಜರಿಹರು || ೭ ||
ಅರಸಿಯಿರ್ಪಳು ಮತ್ತೆ ವಿಪ್ರರ |
ನೆರವಿಯಗಣಿತವಿಹುದು ಸಂಗಡ |
ಮರುಳೆ ಕೇಳ್ ನಳ ಪಟ್ಟ ಕಷ್ಟಕೆ | ಸವಿಗಳುಂಟೆ || ೮ || 27 ||

**ಭಾಮಿನಿ**
ಅರುಹಬೇಕೆಲೆ ಜೀಯಯೆನಗೋ | ಸ್ಕರದಿ ನಳನೃಪನೆಂದರಾವನು |
ದೊರಕಿದುದೆಯೆನ್ನಂತೆ ಪಿರಿದಾಯಸವರಣ್ಯದಲಿ ||
ಭರಿತ ಸಿರಿಸಂಪದಗಳೆಲ್ಲವ | ಹರಿಸಿ ಕೊಂಡವನಾರು ಪೇಳೆಂ |
ದೆರಗೆ ಭೂಪನ ಶಿರವ ನೆಗಹುತಲೊರೆದನಾ ಮುನಿಪ || ೧ || 28 ||

**ಶಂಕರಾಭರಣ - ರೂಪಕ**
ಪೃಥ್ವಿಪತಿಯೆ ಲಾಲಿಸಾದ | ಡರ್ತಿಯಿಂದ ಪೇಳ್ವೆ ನಾನು |
ಮತ್ತೆ ನಿಮ್ಮ ವಂಶದರಸು ವೀರಸೇನನು ||
ಸತ್ಯವಂತ ನೆನಿಸಿಕೊಂಡು | ಸತ್ವದಿಂದ ನಿಷಧ ನಗರ |
ವೃತ್ರವೈರಿಗ್ ಹತ್ತು ಮಡಿಯೊಳಾಳುತಿರ್ದನು ||೧||

ಮೆರೆವ ವಜ್ರಮಯದ ಕೋಟೆ | ಶಿರದೊಳಿರ್ಪ ಕೊತ್ತಳಗಳು |
ಪರಮತೇಜದಿಂದಲೆಸೆವ ಪುರದ ವೀಥಿಯಂ ||
ವರ ಸುರತ್ನ ಕನಕಮಯದೊ | ಳಿರುವ ದ್ವಾರ ನಾಲ್ಕು ಕಡೆಗೆ |
ತರಣಿಯನ್ನು ತುಡುಕುತಿರ್ಪ ಕಲಶಗೋಪುರ || ೨ ||
ಎಲ್ಲಿ ನೋಡೆ ಕರಿರಥಾಶ್ವ | ವೆಲ್ಲಿ ನೋಡೆ ಭಟರ ಬೊಬ್ಬೆ |
ಯೆಲ್ಲಿ ನೋಡಲಲ್ಲಿ ಹೊಳೆವ ಆಯುಧಂಗಳು ||
ಎಲ್ಲಿ ನೋಡೆ ವಾದ್ಯಘೋಷ | ವೆಲ್ಲಿ ನೋಡೆ ಗೀತನೃತ್ಯ |
ವೆಲ್ಲಿ ನೋಡೆ ವೇದ ಶಾಸ್ತ್ರ ಯಜ್ಞಶಾಲೆಯು || ೩ ||
ಪೊಗಲಸಾಧ್ಯವವನ ನಗರ | ವಗಣಿತಾದ್ಯರಿಂಗೆ ಕೇಳು |
ಸುಗುಣಗಿದಿರು ಕಾಣೆ ಭೂಪಕುಲದಿ ಜಗದೊಳು ||
ಚಿಗುರು ಲತೆಯು ಸುಮಗಳಿಂದ | ಬಗೆಬಗೆಯ ಫಲಗಳಿಂದ |
ಸೊಗಸು ಬೀರುತಿರ್ಪ ವನಗಳಗಣಿತಂಗಳು || ೪ ||
ಪರರ ನಿಂದೆ ಪುಸಿಯ ವಚನ | ದುರುಳತನವಧರ್ಮ ಡಂಭ |
ತರಳೆ ಅನ್ಯಾಯ ಮೋಸ ಮತ್ಸರಂಗಳು || ನಿರತಸೂಯ ಗನ್ನಗತಕ |
ದೊರಕದವನ ರಾಷ್ಟ್ರದೊಳಗೆ | ಇರುವರಲ್ಲಿ ಅಷ್ಟ ಲಕ್ಷ್ಮಿಯರು ಸರಾಗದಿ || ೫ || 33 ||

**ಮಧ್ಯಮಾವತಿ - ತ್ರಿವುಡೆ**
ಇನಿತು ವಿಭವದಿ ವೀರಸೇನನು |
ಘನತೆಯಲಿ ಬಹುಕಾಲ ರಾಜ್ಯವ |
ವಿನಯದಿಂದಲೆ ಆಳಿ ಕಡೆಯೊಳು |
ಅಣುಗನಾಗಿಹ ನಳನಿಗೆ | ತೋಷದಿಂದ || ೧ ||
ವಿರಚಿಸಲು ಪಟ್ಟವನು ಮತ್ತಾ |
ಪರಮ ತೇಜದಿ ನೈಷಧಾಪುರ |
ದರಸುತನದಲಿ ಮೆರೆಯೆ ಪಿತನಿಗೆ |
ಯೆರಡು ಮಡಿ ಸದ್ಗುಣದೊಳು | ಶೌರ್ಯದಿಂದ || ೨ ||
ಇರುತಿರಲು ದಿನದಿನಕೆ ಭುಜಬಲ |
ಶೌರ್ಯದುನ್ನತ ನಳನೃಪಾಲಗೆ |
ಭೂರಿ ಸಂತಸದಿಂದಲೊಂದಿನ |
ವೀರ ಸಚಿವನೊಳೆಂದನು | ಭೂಪನಂದು || ೩ || 36 ||

**ಆನಂದಭೈರವಿ - ಅಷ್ಟ**
ಲಾಲಿಸೊಯೆಲೆ ಮಂತ್ರಿ ನಿನ್ನೊಳು | ನಾನು |
ಪೇಳುವ ವಚನವ ಮುದದೊಳು ||
ಪಾಳೆಯ ಸಹಿತಲೆ ಭರದೊಳು | ಪೋಗಿ |
ಖೂಳ ನೃಪಾಲರ ಧುರದೊಳು || ೧ ||
ಮುರಿದವರುಗಳ ಸೊಕ್ಕುಗಳನ್ನು | ಈಗ |
ಹೊರಿಸಬೇಕಯ್ಯ ಕಪ್ಪಗಳನ್ನು || ಜಯ |
ಸಿರಿಯೇರಿಸದಿರ್ದಡೆ ತಾನು | ಹಿಮ |
ಕರಕುಲದಿ ಪುಟ್ಟಿ ಫಲವೇನು || ೨ ||
ತ್ವರಿತದಿಂ ಹೊಯಿಸು ಡಂಗುರಗಳು | ಸೈನ್ಯ |
ಹೊರಬೀಡು ಬಿಡಲೀ ಕ್ಷಣದೊಳು ||
ಪುರವ ಕಾವಲಿಗಿಡು ಜನಗಳು | ನಾಳೆ |
ನರುಣೋದಯಕೆ ಪಯಣಂಗಳು || ೩ || 39 ||

**ಭಾಮಿನಿ**
ಪೃಥ್ವಿಪನ ನುಡಿ ಕೇಳಿ ಸಚಿವನು |
ಮತ್ತೆ ಬಲಗಳ ನೆರಹಿ ತೋರಿದ |
ಹತ್ತುಸಾವಿರ ತುರಗ ಗಜವೊಂಭತ್ತು ಸಾವಿರವು ||
ಉತ್ತಮದ ರಥವೆಂಟು ಸಾವಿರ |
ಬತ್ತಿಸಾಯುಧ ಧರಿಸಿ ಪಟುಭಟ |
ಮೊತ್ತ ನಿಂದುದು ಏಳು ಲಕ್ಷವು ವೀರಕಲೆಗಳಲಿ || ೧ || 40 ||

**ಭೈರವಿ - ಝಂಪೆ**
ಸ್ಥಾಣುವಿನ ಬಲದಂತೆ | ಕ್ಷೋಣಿ ಫಣಿ ಕುಸಿವಂತೆ |
ಮಾನನಿಧಿ ನಳನು ಸು | ಮ್ಮಾನದಲಿ ಪೊರಡೆ || ೧ ||
ಭೇರಿವಾದ್ಯ ನಗಾರಿ | ಭೋರಿಡುವ ಕಹಳೆಗಳು |
ಬೀರಿದುದು ದಿಗ್ದೆಸೆಗೆ | ಭೂರಿ ಭಯರಭಸ || ೨ ||

ವರ ಛತ್ರ ಚಾಮರವು | ಮಕರತೋರಣ ಚೌರಿ |
ಪರಿಪರಿಯ ಬಿರುದಿನೊಳು | ತೋರದಿರೆ ನಭವು || ೩ ||
ಕುಶಲದಿಂ ಪೊಗಳುತಿರೆ | ಯೆಸೆವ ಪಾಠಕರೊಲಿದು |
ವಸುಧೆಪತಿ ರಥ ಹಯಕೆ | ನಮಿಸಿಯೇರಿದನು || ೪ ||
ಕರದ ಧನು ಝೇಂಕರಿಸಿ | ಹರಿಯ ನಾದದಿ ಭುಜವ |
ಭರದೊಳೊದರಿಸುತಾಗ | ತೆರಳಿದನು ಮುಂದೆ || ೫ || 45 ||

**ಘಂಟಾರವ - ತ್ರಿವುಡೆ**
ನಡೆದನಾಗ | ನಿಷಧಪುರೀಶ ಬೇಗ ||
ನಡೆದನಾ ದಿಗ್ವಿಜಯಕೆನುತಲೆ | ಕಡುಪರಾಕ್ರಮವೇರುತ |
ಘುಡುಘುಡುಸಿ ಮುಂಗಡೆಯೊಳಿರುತಿಹ | ಪಡೆಯ ಘರ್ಜನೆ ಮಾಡುತ ||
ಪಿಡಿದವಾಯುಧ ಧರಿಸಿ ದಿಗ್ದೆಸೆ | ಗೊಡನೆ ಭೀಕರದೋರುತ |
ಎಡಬಲದೊಳಿಹ ತುಂಡು ದೊರೆಗಳ |
ಬಿಡನೆ ತನ್ನೊಶಮಾಡಿಕೊಳ್ಳುತ || ನಡೆದನಾಗ || ೧ ||
ಧುರದಿ ನೇಪಾಳನನು ಭಂಗಿಸಿ | ಭರದಿ ಗುರ್ಜರವೀರನ |
ಗರುವ ಮುರಿದಾ ಕ್ಷಣದಿ ಮುಂದಕೆ | ನಡೆದು ಸಿಂಧುನೃಪಾಲನ ||
ಭರಿತ ಕೊಬ್ಬನು ನಿಲಿಸಿ ಸಿಂಹಳ | ಪುರವ ಮುತ್ತುತಲಾತನ |
ಸಿರಿಯನೆಲ್ಲಪಹರಿಸಿ ಬರ್ಬರ | ದೊರೆಯ ಶರಣೆಂದೆನಿಸುತಾ ಕ್ಷಣ || ನಡೆದನಾಗ || ೨ ||
ಅಂಗನನು ಸದೆಬಡಿದು ಮುಂದೆ ಕ | ಳಿಂಗರಾಜ್ಯವ ಜಯಿಸುತ |
ವಂಗನನು ಗೋಳಿಡಿಸಿ ಕಪ್ಪವ | ಸಾಂಗದಿಂದಲೆ ಸೆಳೆವುತ ||
ಸಂಗರದಿ ಕಾಶ್ಮೀರದರಸನ | ರಂಗುಗೆಡಿಸಲು ಗಜರುತ |
ಹಿಂಗದತಿ ಮಾಳವನ ಗೆಲಿದು | ತ್ರುಂಗ ಗೌಳನ ಕರುಳನುಗಿಯುತ || ನಡೆದನಾಗ || ೩ ||
ಒರಗಿಸಲು ಕಾಂಭೋಜ ಭೂಪನ | ಪರಮ ಸಾಹಸದಿಂದಲೆ |
ತ್ವರಿತದಿಂ ಸೌರಾಷ್ಟ್ರ ಕ್ಷಿತಿಪನ | ಸೆರೆಯ ಕೊಂಡನು ಭರದಲಿ ||
ಇರದೆ ಬಾಹ್ಲೀಕನನು ಸವರುತ | ದುರುಳ ಮಗಧನ ಕೊರಳಲಿ |
ಸರಳನಾಡಿಸಿ ಮಾದ್ರದೇಶಕೆ | ತೆರಳಿದರು ಆನಂದದಿಂದಲಿ || ನಡೆದನಾಗ || ೪ || 49 ||

**ಕಾಂಭೋಜಿ - ಝಂಪೆ**
ಭಾನುಸುತನಣುಗ ಕೇಳ್ | ಸೇನೆ ಸಹಿತುಪವನದಿ |
ಕ್ಷೋಣಿಪಾಲಕ ಬೀಡ ಬಿಡಲು ||
ಕಾಣುತಲೆ ಚರರುಗಳು | ಏನಿದಚ್ಚರಿಯೆಂದು |
ಸಾನುರಾಗದಿ ತಡೆದು ನಿಲಲು || ೧ ||
ಎಲೆಲೆ ನಮ್ಮುಪವನವ | ಸಲುಗೆಯಲಿ ಪೊಕ್ಕು ಬಹು |
ದಳದುಳವ ಮಾಳ್ಪ ಖೂಳರನು ||
ಚಳಕದಲಿ ಹೊಡೆದು ಕಾಲ್ |  ಮುರಿಯೆಂದು ಗರ್ಜಿಸುತ |
ನಿಲದೆ ಸುರಿದರು ಬಾಣಗಳನು || ೨ ||
ತಡೆಯದಪ್ರತಿಭಟರು | ಕಡುಕೋಪದಿಂದವರ |
ಪಿಡಿದು ತೋಳ್ಗಳನೆ ಬಂಧಿಸುತ ||
ಒಡನೆ ನಾಸಿಕಕೆ ಸು |  ಣ್ಣವ ತೊಡೆದು ನೂಕಿದರು |
ಪೊಡವಿಪನ ಕರೆತನ್ನಿರೆನುತ || ೩ || 52 ||

**ಕಂದ**
ಈ ತೆರನೆಸಗಲ್ ಬಳಿಕಾ |
ದೂತರ್ ತಾವ್ ಘನ ಭೀತಿಯೊಳಯ್ದುರುತಾಗಳ್ ||
ಭೂತಳಪತಿ ಸಭೆಯಂ ಪೊ |
ಕ್ಕಾತುರದಿಂದುಸಿರಿದರ್ ಪರನೃಪರುಪಟಳಂ || ೧ || 53 ||

**ಮುಖಾರಿ - ಆದಿ**
ಧರಣೀಶ ಲಾಲಿಸೆಮ್ಮ ನುಡಿಯ | ಬಂದಿದೆ ಸಪ್ತ |
ಶರಧಿಯಂದದಿ ಸೈನ್ಯ ಜೀಯ ||
ಕರಿ ರಥ ತುರಗವು ಪರಿಕಿಸಲಸದಳ |
ತರತರದಾಯುಧ ಧರಿಸಿ ಭಟಾವಳಿ |
ಉರುತರ ಶೌರ್ಯವ ಮೆರೆಸುತ ನಮ್ಮಯ |
ಭರಿತ ನಂದನವ ಮುರಿದೊಳಪೊಗಲು || ಧರಣೀಶ || ೧ ||

ಬಿಡದೆ ದ್ವಾರದೊಳ್ ತಡೆದೆವಯ್ಯ | ಲೆಕ್ಕಿಸದೆಮ್ಮ |
ಹೊಡೆದು ನೇಣಿನೊಳ್ ಬಿಗಿದು ಕಯ್ಯ ||
ಸಡಗರದಿಂದಲಿ ಹುಡಿಯೊಳು ನೂಕುತ |
ಒಡೆಯನಿಗೀಕ್ಷಣ ಬಿಡದೀ ದೂರನು |
ಕಡು ಬೇಗದಿ ನಮ್ಮೊಡನೆ ರಣಾಗ್ರವ |
ಕೊಡಹೇಳೆನುತಲೆ ಝಡಿದಟ್ಟಿದರು || ಧರಣೀಶ || ೨ ||
ನಿಷಧಪಟ್ಟಣದಧಿಪನಂತೆ | ಕೇಳಲು ಮತ್ತೆ |
ಪೆಸರು ನಳನತಿ ಖ್ಯಾತನಂತೆ ||
ಅಸಮ ಪರಾಕ್ರಮ ಪಸರಿಸಿ ಲೋಕದೊ |
ಳೆಸೆವ ಮಹೀಶರ ರಸಗಳ ನಡಗಿಸಿ |
ವಶಗೊಳುತೆಲ್ಲರ ಕುಶಲದಿ ನಮ್ಮೀ |
ವಸುಧೆಗೆ ಧಾಳಿಯನೆಸಗಿದರವರು || ಧರಣೀಶ || ೩ || 56 ||

**ಭಾಮಿನಿ**
ದೂತರಾಡಿದ ನುಡಿಯ ಲಾಲಿಸಿ |
ಭೂತಳೇಶ ಸುಲೋಚನಾಖ್ಯನು |
ಖಾತಿಯಲಿ ಕಿಡಿ ಸೂಸಿ ಮಂತ್ರಿಯ ಕರೆದು ನೇಮಿಸಿದ ||
ಚಾತುರಂಗವ ಬರಿಸು ಯುದ್ಧದೊ |
ಳೀ ತತುಕ್ಷಣ ವೈರಿವ್ರಜವನು |
ಧಾತುಗೆಡಿಸುವೆನೆನುತ ಪೊರಟನುಯೇರಿ ಮಣಿರಥವ || ೧ || 57 ||

**ಸುರುಟಿ - ಏಕ**
ಬಂದ ಸುಲೋಚನನು | ಸಮರಕೆ |
ಯಂದತಿ ಭುಜಬಲನು ||
ಮಂದಿ ಕುದುರೆ ಜಯ | ದುಂದುಭಿ ವಾದ್ಯಗ |
ಳಿಂದ ವಿಲಾಸದಿ || ೧ ||
ಇತ್ತಲು ನಳನವರ | ಪರಿಕಿಸಿ |
ಮುತ್ತಲು ಪದಚರರು ||
ಹತ್ತಿತು ಕಲಹಗಳೀ ತೆರದಲಿ ಬಲ |
ಸತ್ತು ಸಾರಿತು ರವಿಪುತ್ರನ ಪುರವನು || ೨ ||
ಕೋಪದಿ ಹೂಂಕರಿಸಿ | ನೈಷಧ |
ಭೂಪನು ಧನು ಧರಿಸಿ ||
ಭೂಪ ಸುಲೋಚನ ನಿಲ್ಲದಿರೆನುತಿರ |
ಲಾ ಪರಾಕ್ರಮಿ ಮುಂದರಿವುತಲೆಂದು || ೩ || 60 ||

**ಕೇದಾರಗೌಳ - ಮಟ್ಟೆ**
ಯಾರೊ ನೀನು ನಮ್ಮ ವನವ ಪೊಕ್ಕು ಚರರನು |
ಗಾರುಗೆಡಿಸಿದಧಮ ಉಸಿರು ನಿನ್ನ ಪೆಸರನು ||
ಭೂರಿ ಸೈನ್ಯ ಸಹಿತಲೀಗ ಪಯಣವಾಗಿರು |
ವಾರಿಜಾಪ್ತಸುತನ ಸಭೆಯ ತೋರ್ಪೆ ತಿಳಿದಿರು || ೧ ||
ಕ್ಷತ್ರಿಕುಲಕೆ ಬಾರದೆಲವೊ ಆತ್ಮಸ್ತುತಿಗಳು |
ಧೂರ್ತಯೆಲ್ಲಿ ಕಲಿತೆ ನಿನಗೆ ತಕ್ಕ ನುಡಿಗಳು ||
ಹೊತ್ತು ಕಳೆಯಲೇಕೊ ಕುನ್ನಿಯಂತೆ ಬಗುಳುತ |
ಅರ್ತಿಯಿಂದ ತೋರು ಶಸ್ತ್ರಸಾರವೆನ್ನುತ || ೨ ||
ಹತ್ತು ಶರವನೆಸೆಯಲಾಗ ನಳನೃಪಾಲನು |
ಕತ್ತರಿಸುತ ಬಿಸುಟನಾಗ ಮಾದ್ರಪಾಲನು ||
ಚಿತ್ರಚಾರಿಯಂತೆ ಕೋಪವೆತ್ತು ಮನದೊಳು |
ಪೃಥ್ವಿ ಕಾಣದಂತೆ ಸುರಿದ ವೈರಿಬಲದೊಳು || ೩ ||
ಕಲಿ ಸುಲೋಚನಾಖ್ಯನದರ ಸವರಿ ಪೇಳ್ದನು |
ಭಳಿರೆ ಭುಜಬಲಾಢ್ಯನಹುದೊ ನಿನ್ನ ಶಿರವನು ||
ಉಳಿಸಿಕೊಳ್ಳೆನುತ್ತ ಹೊಡೆಯೆ ಫಡ ಫಡೆನುತಲಿ |
ದಳಕೆ ಸೋಕದಂತೆ ಮಾಪು ಗೆಯ್ದು ಕ್ಷಣದಲಿ || ೪ || 64 ||

**ವಾರ್ಧಕ**
ಕುಂತಿಸುತ ಲಾಲಿಸೀ ಪರಿಯಿಂದ ಶರದಿಂದ |
ನಿಂತು ಕಾದಿದರಯ್ದು ದಿನದಿಂದ ಘನದಿಂದ |
ಅಂತರವ ತೋರದತಿ ಛಲದಿಂದ ಬಲದಿಂದ ಕಂತುಹರನೇತ್ರದಿಂದ ||
ದಂತಿ ಹಯ ಸೇನೆಗಳ್ ಸರಳಿಂದ ಬೀಳ್ವಂದ |
ವೆಂತು ಬಣ್ಣಿಪೆ ರುಧಿರಮಯದಿಂದ ಭಯದಿಂದ |
ಬಂತು ಜಯ ತಮಗೆಂಬ ಭ್ರಮೆಯಿಂದ ಕ್ರಮದಿಂದ ಪಂಥಪೌರುಷಗಳಿಂದ || ೧ || 65 ||

**ಭಾಮಿನಿ**
ಅರೆ ನಿಮಿಷವಾಲಸ್ಯವಿಲ್ಲದೆ |
ಧುರದಿ ಕಾದಿದರುಭಯ ವೀರರು |
ಮುರಿದನಾರನೆ ದಿನದಿ ನಳನು ಸುಲೋಚನನ ಧನುವ ||
ಧರಿಸೆ ಪ್ರತಿಚಾಪವನು ಆ ಕ್ಷಣ |
ತರಿದು ಸೂತನ ಕೆಡಹಿ ಹಯ ರಥ |
ಧರಣಿಗುರುಳಿಸೆ ವಿರಥನಾದನು ಮಾದ್ರ ಭೂಪಾಲ || ೧ || 66 ||

**ಮಾರವಿ - ಏಕ**
ಕಿಡಿಯಿಡುತಿಹ ಕೋಪದೊಳು | ಧೈರ್ಯ | ಗೆಡದಾ ಕ್ಷಣ ಖಡುಗದೊಳು ||
ಪಡೆಗಳ ಸವರುತ ಬರಲು | ತುಂಡು | ಗೆಡೆದನು ಕೋಲಯ್ದರೊಳು || ೧ ||
ಹೊಡೆಯಲು ಸಕಲಾಯುಧದಿ | ಅದ | ಪುಡಿಗೆಯ್ಯುತ ನಳ ಭರದಿ ||
ಪಿಡಿದನು ಕೈಸೆರೆಯೊಳಗೆ | ಸೈನ್ಯ | ನಡುಗಿ ಓಡಿತು ನಾಲ್ದೆಸೆಗೆ || ೨ ||
ತಿಳಿಯದೆ ಕೆಣಕಿದೆ ನಾನು | ಶಿರ | ವುಳುಹಬೇಕೆನುತೆರಗಿದನು ||
ನಿಲದೆ ಸಕಲವಿತ್ತು | ತನ್ನ | ದಳ ಸಹ ಬರೆ ಬೆಂಬಲಕೆ || ೩ || 69 ||

**ಮಾರವಿ - ಅಷ್ಟ**
ವರ ಸುಲೋಚನ ಸಹಿತಲೆ ಮಾದ್ರದೇಶದಿಂ | ತೆರಳಿ ಮತ್ಸ್ಯಾಧಿಪನ ||
ಗರುವವ ಭಂಗಿಸಿ ಭರದಿಂದ ಕೋಸಲ | ಪುರಕೆ ದಾಳಿಯನಿಡುತ || ೧ ||
ರಣದೊಳು ಸೆಣಸಿ ಮತ್ತವನ ದ್ರವ್ಯಗಳೆಲ್ಲ | ವಿನಯದಿ ಸೆಳೆಗೊಳ್ಳುತ ||
ಬಣಗು ಗೌಡಾಧಿಪನನು ಗೆಲ್ದು ಆಂಧ್ರರ | ಜನಪನ ಮರ್ದಿಸುತ || ೨ ||
ಅತಿ ಪರಾಕ್ರಮಿಯೆಂದು ತಿಳಿದು ಪಾಂಚಾಲನು | ಹಿತದಿ ಕಪ್ಪವನೀಯಲು ||
ಖತಿಯೊಳು ಪಾಂಡ್ಯನ ಮುರಿದೊತ್ತಿ ದ್ರಾವಿಡ | ಕ್ಷಿತಿಪನೊಳ್ ಕಾದಿದನು || ೩ || 72 ||

**ಭಾಮಿನಿ**
ತಂಗದಿರನನ್ವಯನ ನೃಪ ಕೇಳ್ | ತುಂಗಭುಜಬಲ ನಳನೃಪಾಲನು |
ಹಿಂಗದೀ ಪರಿಯಿಂದ ಭುಜಬಲಸತ್ವದಲಿ ನೃಪರ ||
ಭಂಗಗೊಳಿಸುತ ಕಪ್ಪವನು ಪಡೆ | ದಂಗನೆಯರಾಳ್ವಿಕೆಗೆ ಸೇರಿದ |
ಕಂಗೊಳಿಪ ತರುಣಿಯರ ಮಲೆಯಾಳಕ್ಕೆ ನಡೆತಂದ || ೧ || 73 ||

**ಕೇದಾರಗೌಳ - ಅಷ್ಟ**
ಆ ಪುರಕರಸಿ ಕೇಳ್ | ಭೂಪ ಪೇಳುವೆ ನಿನ | ಗಾ ಪದ್ಮಗಂಧಿಯೆಂಬ ||
ರೂಪಸಂಪನ್ನೆಯು | ತಾ ಪ್ರಜೆಗಳ ಮಕ್ಕ | ಳೋಪಾದಿ ಸಲಹುವಳು || ೧ ||
ಒಂದು ದಿವಸ ನಾರಿ | ವೃಂದವನೆಲ್ಲವ | ನೊಂದಾಗಿ ಸೇರಿಸುತ ||
ಅಂದದಿಂದೋಲಗ | ದಿಂದ ಶೋಭಿಸುತಿರೆ | ಬಂದೋರ್ವ ಚಾರಕಿಯು || ೨ ||
ಕೇಳಮ್ಮ ಪರರಾಯ | ರಾಳುತನವನಿಂದು | ಪೇಳುವೆನೆಂದೆನುತ ||
ಬಾಲೆಯು ಪೇಳಿದ | ಳಾಲಸ್ಯವಿಲ್ಲದೆ | ನೀಲಾಳಿಕುಂತಳೆಗೆ || ೩ || 76 ||

**ಸೌರಾಷ್ಟ್ರ - ಆದಿ**
ನಿಷಧ ಪುರಾಧಿಪ ನಳನೃಪನೆಂಬನು | ಲಾಲಿಸಮ್ಮ || ವೈರಿ |
ವಿಷಕೆ ಗಾರುಡಸಮನೆನಿಸುವ ವೀರನು | ಲಾಲಿಸಮ್ಮ || ೧ ||
ತುರಗಮೇಧವನೆಸಗುವನಂತೆ ತಾನೀಗ | ಲಾಲಿಸಮ್ಮ || ಬಂದು |
ಹರಿಯ ಬಿಟ್ಟಿಹನೆಮ್ಮ ಪುರಕೆ ಹರಿಯನಿಂದು | ಲಾಲಿಸಮ್ಮ || ೨ ||
ತೋಳ್ ತೀಟೆಯುಳ್ಳಡೆ ಕಟ್ಟಿ ತುರಗವನ್ನು | ಲಾಲಿಸಮ್ಮ || ತಾವು |
ಮೇಲ್ ಧುರವೆಸಗಲು ಬಿಡಿಸಿಕೊಳ್ಳುವನಂತೆ | ಲಾಲಿಸಮ್ಮ || ೩ ||
ಅರುಹಬೇಕಿದನೆಲ್ಲ ಯೋಚಿಸಿ ಮನದೊಳು | ಲಾಲಿಸಮ್ಮ ||
ಇರಿಸುತಪ್ಪಣೆಯನ್ನು ಕರುಣದಿಂದೆನಗೀಗ | ಲಾಲಿಸಮ್ಮ || ೪ || 80 ||

**ಭಾಮಿನಿ**
ಸಾರಸಾನನೆಯೊರ್ವ ಚಾರಕಿ | ವಾರತೆಯನೆಲ್ಲವನು ಪೇಳಲು |
ವಾರಿಜಾಂಬಕಿ ಪದ್ಮಗಂಧಿನಿಯಧಿಕ ವಿಸ್ಮಯದಿ ||
ಭೂರಮಣರೀವರೆಗೆ ನಮ್ಮೀ | ಚಾರು ನಗರಕೆ ಬಂದುದರಿಯೆನು |
ಭೂರಿ ವಿಕ್ರಮರಿರಲು ನೋಡುವೆನೆಂದು ಗರ್ಜಿಸುತ || ೧ || 81 ||

**ಕಾಂಭೋಜಿ - ಝಂಪೆ**
ಕೇಳಿದಿರೆ ಬಾಲೆಯರು | ಭೂಲೋಲ ನಳನೃಪನು |
ಮೇಲಾದ ಹಯಮೇಧವೆಸಗೀ ||
ಬಾಲೆಯರ ಬಲುಹ ತಾ | ನಾಲೋಕಿಸಲು ಬಂದ |
ಕಾಳಗದೊಳಹಹ ನಾವೀಗ || ೧ ||
ಕಟ್ಟಿದಿರಲಾ ಭೂಪ | ಬಿಟ್ಟ ಕುದುರೆಯ ನಾವು |
ಹುಟ್ಟಿ ಫಲವೇನು ಭೂತಲದಿ ||
ಬಿಟ್ಟು ಪೋಪುದು ಕೀರ್ತಿ | ಥಟ್ಟನೀ ಕ್ಷಣ ನಮ್ಮ |
ಕಟ್ಟಿಸುವೆನದರಿಂದ ಬಿಡದೆ || ೨ ||
ಧುರಕೆ ಬೆಂಗೊಟ್ಟು ಬದು | ಕಿರೆ ದೊರೆಯುವುದೆ ಸ್ವರ್ಗ |
ಮರೆಯಲಾಗದು ಮನದಿ ನೀವು ||
ಪುರುಷರಾಗಿಹರವರು | ತರುಣಿಯರು ನಾವೈಸೆ |
ಪರಿಕಿಸಲಿ ನಮ್ಮ ಕೈ ಗುಣವ || ೩ || 84 ||

**ವಾರ್ಧಕ**
ಎಂದೆನುತಲಾ ಬಾಲೆ ಮಿಂದು ಮಡಿಯುಟ್ಟು ಪೊ |
ನ್ನಂದುಗೆಯ ಮಿರುಗುತಿಹ ಒಡ್ಯಾಣಮಂ ಧರಿಸಿ |
ಬಂಧುರದ ಮೌಕ್ತಿಕದ ಹಾರಮಂ ತೊಟ್ಟು ಜಡೆ ಬಿಟ್ಟು ಹೂವಿಟ್ಟು ಮುದದಿ ||
ಸಿಂಧೂರತಿಲಕಮಂ ಫಣೆಗಿಟ್ಟು ವರ ಪದ್ಮ |
ಗಂಧಿ ಚತುರಂಗ ಬಲಮಂ ನೆರಹಿ ಬರುತಿರಲ್ |
ದುಂದುಭಿಯ ಘೋಷದಿಂ ತಾರಕೆಯ ಮಧ್ಯದೊಳ್ ಮೆರೆವ ಚಂದ್ರಮನಂದದಿ || ೧ || 85 ||

**ಮಾರವಿ - ಏಕ**
ಕೂರಸಿಯನು ಪಿಡಿ | ದಾರುಭಟಿಸಿ ಬರ | ಲಾರಾತಿಗಳಹರ ||
ತೋರಗಳವ ಕಡಿ | ದಾ ರಣಧರಣಿಗೆ | ಧಾರೆಯೆರೆಯಲೆಂದು || ೧ ||
ತರುಣಿಯರ್ ನಾನಾ | ಭರಣವ ಧರಿಸುತ | ಮರಣಕೆ ಹಿಂಗದೆಯೆ ||
ಧಾರಿಣಿ ಕಂಪಿಸ | ಲೋರಣದಲಿ ತಾ | ವಾ ರಣಕೈತರಲು || ೨ ||
ಈ ತೆರದಲಿ ಬರ | ಲಾ ತರುಣಿಯ ಕಂ | ಡಾತುರದಲಿ ನಳನು ||
ತಾ ತೆಗೆಯುತ ಧನು | ಖಾತಿಯೊಳಿರುತಿರೆ | ಮಾತಾಡಿದಳಾಗ || ೩ || 88 ||

**ಭೈರವಿ - ಅಷ್ಟ**
ನಳಭೂಪನಹುದೆ ಪೇಳ್ ನೀನು | ತರುಣಿಯ |
ರಳವಿಯ ಪರಿಕಿಸಿನ್ನು ||
ಚಲದಿಂದ ಕುದುರೆಯ | ನಿಲಿಸಿಕೊಂಡಿಹೆವೀಗ |
ಬಲುಹಿಂದ ಬಿಡಿಸುವೆಯ || ೧ ||
ಕೋಮಲಾಂಗಿಯರಹ ನಿಮಗೆ | ನಮ್ಮೊಳು ಬಿಡ |
ದಾ ಮಹಾಸಂಗ್ರಾಮದೊಳಗೆ ||
ಹೇಮಪುಂಖದ ಶರ | ದಾ ಮಹಾ ಝಡಿತಕೆ |
ತಾ ಮಡಿಯುವ ಮನವೆ || ೨ ||
ಪುರುಷರೊಡನೆ ಕಾದಿ ಧುರದಿ | ವಿಕ್ರಮ |
ಮೆರೆಸಿದ ಪರಿಯಲ್ಲ ಮನದಿ ||
ಸ್ಮರಿಸು ನೀ ಕುಲದೇವಿ | ವರವ ಕೊಡಲು ಮುಂದೆ |
ಧುರಕೆ ನಿಲ್ಲುವುದೆಂದಳು || ೩ ||
ಬಾಲೆಯರನು ಕೊಂದು ಬರಿದೆ | ನರಕದಿ |
ಬೀಳಲಾಗದುಯೆಂದು ತಿಳಿದೆ ||
ಪೇಳಿದೆ ನೀತಿಯ | ಕೇಳೆಯ ಸುಮ್ಮನೆ |
ಬಾಳುವೆ ಮುಗಿಯಿತೇನೆ || ೪ ||
ತುರಗವ ಬಿಡಿಸಿ ಪೋಗುವೆಯ | ಸುಮ್ಮನೆ ಬಿಟ್ಟು |
ಪುರಕೆ ನೀ ಮರಳಿ ಪೋಗುವೆಯ ||
ಅರುಹು ನೀನೇನ್ ಗೆಯ್ವೆ | ಭರದೊಳೆಂದೆನಲಾಗ |
ಧುರಪರಾಕ್ರಮಿಯುಸಿರಿದನು || ೫ || 93 ||

**ಮಾರವಿ - ಏಕ**

ಬಿಡು ಬಿಡು ತುರಗವ | ಮಡದಿಮಣಿಯೆ ನೀ | ಕೊಡದಿರು ಪ್ರಾಣವನು ||
ಮೃಡಸಮಬಲನೆ | ನ್ನೊಡನಿದಿರಾಡುವ | ಕಡುಹೇಂ ನಿನಗಿಹುದೆ || ೧ ||
ಧರಣಿಪ ಕೇಳ್ ನೀ ಧುರವೆಸಗದೆ ನಾ | ತುರಗವ ಕೊಡಲಾರೆ ||
ಭರವಸವಿದುಯೆಂ | ದರುಹುತ ಬಾಣವ | ಸುರಿಸಿದಳಾ ಕ್ಷಣದಿ || ೨ ||
ಪೊಸ ಮಸೆ ಶರದಿಂ | ದಸಮ ಸಹಸಿಯಾಗ | ತುಸ ಗಣಿಸದೆ ಮುರಿದು ||
ಬಿಸಜಾಂಬಕಿಯೊಡ | ನುಸಿರಿದನೀ ತೆರ | ವಸುಮತಿವಲ್ಲಭನು || ೩ || 96 ||

**ಶಂಕರಾಭರಣ - ಮಟ್ಟೆ**

ತರುಣಿಯರಸಿ ಕೇಳೆ ನಿನಗೆ | ಧುರವು ಬೇಡ ನಮ್ಮ ಕೂಡೆ |
ತುರಗವಿತ್ತು ಕಪ್ಪವೀಯೆ ನಿನ್ನ ಶಿರವನು ||
ಪೊರೆವೆ ವ್ಯರ್ಥ ಸಾಯಲೇಕೆ | ತರವಿದಲ್ಲ ತರುಣಿಯರ್ಗೆ |
ತರಿಸು ತುರಗವೆನಲು ಪೇಳ್ದಳಾಕೆ ಖತಿಯಲಿ || ೧ ||
ಬೇಡು ಪಾದಕೆರಗಿ ತುರಗ | ನೀಡೆನುತ್ತ ಕೊಡುವೆನೈಸೆ |
ರೂಢಿಪಾಲನಹಹ ನೀನು ಪೇಳಲೇನನು ||
ಗಾಢದಿಂದ ಶರದ ಸವಿಯ | ನೋಡೆನುತ್ತ ತಿಮಿರ ಶರವ |
ಹೂಡಲಾಗ ತರಣಿಯಿಂದ ತರಿದು ಪೇಳ್ದನು || ೨ ||
ದೋಷ ಬರಲಿ ಬಂದರೆನುತ | ಭೂಸತೀಶ ಖಾತಿಯಿಂದ |
ಲಾ ಸಮೀರಶರವ ತೆಗೆದು ಕೋಪದಿಂದಲಿ ||
ತಾ ಸರಾಗದಿಂದ ಹೊಡೆದ | ನಾ ಸಹಾಸಿ ತರುಣಿ ಕುಂಡ |
ಲೀಶ ಶರದೊಳದನು ತಾನು ತುಂಡುಗೆಯ್ದಳು || ೩ ||
ಬಳಿಕ ರೋಷದಿಂದ ತಾವು | ಹಳಚುತಿರ್ದರಿಂತು ಸುರರು |
ಕಳವಳಿಸುವ ತೆರದಿ ನಳನು ಬಳಿಕ ಕೋಪದಿ ||
ಪೊಳೆವ ಮೋಹನಾಸ್ತ್ರವನ್ನು | ಲಲನೆಗೆಸೆವೆನೆಂಬ ಸಮಯ |
ದೊಳಗೆ ನುಡಿದುದೊಂದು ವರ ನಭೋನಿನಾದವು || ೪ || 100 ||

**ಭಾಮಿನಿ**

ನಳನೆ ಬಿಡದಿರು ಶರವ ತರುಣಿಯ | ರಳವಿಯಿದು ಲೇಸಲ್ಲ ಸುಮ್ಮನೆ |
ಬಳಲದಿರು ನಿನಗೀಕೆ ಕಪ್ಪವ ಕೊಡುವಳೆನೆ ಕೇಳ್ದು ||
ಲಲನೆ ಯೋಚಿಸಿ ದೈವ ಕೃತವನು | ನಿಲಿಸಿ ಧುರವನು ವಾಜಿಯನು ಕೊ |
ಟ್ಟ ಲಘುಬಲನಿಂಗೆರಗಿ ಕಾಣಿಕೆಯಿತ್ತು ಕಳುಹಿದಳು || ೧ || 101 ||

**ಮಾರವಿ - ಅಷ್ಟ**

ಬಿಡದೆ ಆತನ ಜಯಿಸುತ ಸ್ತ್ರೀಯರಾಳುವ | ಪೊಡವಿಯ ಮುಸುಕಿ ಮತ್ತೆ ||
ಹುಡಿಗುಟ್ಟುತವರನ್ನು ಕಡು ತವಕದಿ ಸರ್ವ | ರೊಡವೆಯ ಹೊರಿಸಿದನು || ೧ ||
ಕೇರಳನಿಗೆ ಭಯದೋರಿ ತುಳುವನೊಳು | ಭಾರಿ ವಸ್ತುಗಳ ಕೊಂಡು ||
ಧೀರ ಚೋಳನ ಕೊಬ್ಬ ಹರಿಸಿ ಕೊಂಕಣದೇಶ | ಸೂರೆಯ ಮಾಡಿದನು || ೨ || 103 ||

**ವಾರ್ಧಕ**

ವಸುಧೀಶ ಲಾಲಿಸೀಪರಿಯಿಂದ ಛಪ್ಪನ್ನ |
ದೆಸೆಯೊಳಿಹ ಭೂವರರ ವಶಗೊಂಡು ವಹಿಲದಿಂ |
ದೆಸೆಯುವಮರಾವತಿಗೆ ನಡೆತಂದು ಸದೆಬಡಿಯೆ ಭರದಿಂದ ಸುಮನಸರನು ||
ಬಸವಳಿದು ಇಂದ್ರಂಗೆ ವಸಗೆ ಪೇಳಲು ಚರರು |
ಅಸಮಕೋಪವ ಧರಿಸಿಯೆಸಗುತಿರೆ ಸಮರವಂ |
ನಿಷಧಪತಿ ಸವರಿದಂ ಪೊಸಗಣೆಯೊಳಾದೇವಪ್ರಸರಮಂ ನಿಮಿಷದೊಳಗೆ || ೧ || 104 ||

**ಸೌರಾಷ್ಟ್ರ - ತ್ರಿವುಡೆ**

ಕರುಳ ಮಾಂಸದ ರುಧಿರದಿಂದಲೆ |
ಒರಗುತಿರಲಾ ಸೇನೆ ಧುರದೊಳು |
ಪರಿಕಿಸುತ ಜಂಭಾರಿ ಮನದೊಳ | ಗರಿತು ನುಡಿದ || ೧ ||
ಇತ್ತ ಬಾರೈ ನಳನೆ ಕಲಹವು |
ವರ್ತಿಸಿದರಿಂದೇನು ಫಲಗಳು |
ಮಿತ್ರನೈ ನೀನೆಮಗೆ ಬಿಡು ಈ | ಧೂರ್ತತನವ || ೨ ||
ಸ್ಥಿರವೆಯೆನಗೀ ಪದವು ಲಕ್ಷ್ಮೀ |
ವರನನುಜ್ಞೆಯೊಳಿರ್ಪೆನಲ್ಲದೆ |
ಯೆರಡನೆಯ ಮಾತಿಲ್ಲ ನೀನಿದ | ನರಿಯದವನೆ || ೩ ||

ಎಂದು ಈ ಪರಿಯಿಂದಲಾತನ |
ಚಂದದಿಂದುಪಚರಿಸಿ ಕಳುಹಲು |
ಮುಂದೆ ನಡೆದಗ್ನಿಯೊಳು ಕಪ್ಪವ | ನಂದು ಕೊಳುತ || ೪ ||
ಯಮನ ನಿಋುತಿಯ ವರುಣ ವಾಯುವ |
ಕ್ರಮದಿ ಗೆಲಿದು ಕುಬೇರನಲ್ಲಿಹ |
ಅಮಿತ ಧನವಾಕ್ರಮಿಸಿ ಇಳಿಯಲು | ಕ್ಷಮೆಗೆ ಮುದದಿ || ೫ || 109 ||

**ತೋಡಿ - ಅಷ್ಟ**
ಪೃಥ್ವಿ ಮೂರಕೆ ನಳನೃಪನು | ಚಕ್ರ |
ವರ್ತಿಯುಯೆಂಬ ಬಿರುದನು ||
ಅರ್ತಿಯೊಳ್ ಪಡೆದು ಮಾರ್ಬಲ ಸಹ ಮುಂದೊಂದು |
ಉತ್ತಮ ಸ್ಥಳದೊಳು ರಚಿಸಿ ಡೇರೆಗಳನ್ನು || ೧ ||
ಜನಪ ಬೇಟೆಯನಾಡುತಿರಲು | ಕಂ |
ಡನಿತರೊಳೊಂದು ಕೊಳದೊಳು |
ಘನಹಂಸ ಚರಣಗಳುಗಿದಿರೆ ಕೆಸರೊಳು |
ಮನದಾಯಾಸದಿ ಹೊರಳುತ ರೆಕ್ಕೆ ಬಡಿಯಲು || ೨ ||
ಪಿಡಿದು ತರಿಸೆ ದೂತರಿಂದ | ನಡ |
ನಡುಗಿ ಪಕ್ಷಿಯು ಭಯದಿಂದ |
ನುಡಿ ತೊದಲಿಸುತ ಪಾದದಿ ಬಿದ್ದು ಹೊರಳುತ್ತ |
ಝುಡಿವ ಕಂಬನಿಯಿಂದ ಬಿಡದುಸುರಿತು ಒಂದ || ೩ || 112 ||

**ತೋಡಿ - ರೂಪಕ**
ಕರುಣ ಸಾಗರ ನಿನ್ನ | ಮರೆಯ ಹೊಕ್ಕೆನು ಮುನ್ನ |
ಪೊರೆಯಬೇಕೆನ್ನನು | ಉಳುಹಿ ಪ್ರಾಣವನು || ೧ ||
ಮೆರೆವ ವ್ಯಾಘ್ರನು ಯೆಳೆ | ಗರುವ ಮುರಿವುದಕೆ |
ಹರಿತದಾಯುಧ ಬೇಕೆ | ಅರುಹು ಪರಾಕೆ || ೨ ||
ಕಡು ಚಿಗುರನು ಚಿವುಟೆ | ಕೊಡಲಿ ಹಣ್ಣಿಸಲೇಕೆ |
ಪೊಡವಿಪ ನಾನಿದಿರೆ | ಕಡುಭುಜಬಲಕೆ || ೩ ||
ಸೆರೆಸಿಕ್ಕಿದಾತನ | ಶಿರವ ಕೊಳ್ಳಲು ಸೈನ್ಯ |
ನೆರಹುವುದೇಕಯ್ಯ | ಧರಣೀಶ ಜೀಯ || ೪ ||
ಮದಗಜ ಇಲಿಗಳ | ವಧಿಸಬೇಕಾದರೆ |
ಬದಲು ಸತ್ವಗಳನ್ನು | ಪಡೆಯಬೇಕೇನೈ || ೫ ||
ಇರುವೆಯ ಪಿಡಿಯಲು | ಮೆರೆವ ಬಲಗಳನ್ನು |
ಹರಹಿ ಕೂಡಿಸಲೇಕೆ | ಬೇಟೆಗಾರರನು || ೬ || 118 ||

**ಭಾಮಿನಿ**
ವರಸುಧಾಂಶಕುಲಾಧಿಪತಿ ನೀ | ಪರಮ ಧಾರ್ಮಿಕ ಸುಪ್ರತಾಪನು |
ಪುರಹರಗೆ ಸಮಜೋಡಿ ಘನತರ ಚಕ್ರವರ್ತಿಗಳ ||
ಧುರದಿ ವೀರರ ಕೊಲ್ವ ಕರದಲಿ | ಮುರಿಯೆ ಜಗದಲಿ ಬಿನುಗುಪಕ್ಷಿಯ
ಸರಿಯವರು ನಿಂದಿಸುತ ನಗರೇ | ರಾಯ ತವ ಬಗೆಗೆ || ೧ || 119 ||

**ಕೇದಾರಗೌಳ - ಅಷ್ಟ**
ಘನಹಂಸೆ ಯೆಂದುದನು | ಲಾಲಿಸಿ ನಳ | ಮನದಿ ವಿಸ್ಮಿತನಾದನು ||
ವನದೊಳಗಿಹವಗಣಿತ ಪಕ್ಷಿ ಜಾತಿಗ | ಳಿನಿತು ಪ್ರಜ್ಞೆಯ ಕಾಣೆನು || ೧ ||
ಪರಿಕಿಸಲದರ ಬುದ್ಧಿ | ಸಲ್ಲುವುದು ನಮ್ಮ | ಅರಸುತನಕೆ ಪ್ರಸಿದ್ಧಿ ||
ಇರಿಸು ಪಂಜರದೊಳಗೆನುತ ಮಂತ್ರಿಗೆ ಪೇಳ್ದ | ವರಧೈರ್ಯಗಳನು ತಿದ್ದಿ || ೨ ||
ಮರುದಿನ ಶುಭಲಗ್ನದಿ | ತನ್ನಯ ನಿಜ | ಪುರಕಯ್ದಿ ಸಂಭ್ರಮದಿ ||
ತರತರದಾರತಿ ಬೆಳಗಲೂರೊಳಗೆಲ್ಲ | ಹರುಷಿಸುತಾನಂದದಿ || ೩ ||
ಅರಮನೆಗಯ್ತರುತ | ಸೇನೆಗೆ ವೀಳ್ಯ | ಕರುಣದಿಂ ಪಾಲಿಸುತ ||
ಸುರಪನ ಸಂಭ್ರಮಕೆರಡುಯಿಮ್ಮಡಿಯಾಗಿ | ಮೆರೆಯೆ ವೈಭವದಿ ಖ್ಯಾತ || ೪ || 123 ||

**ಸಾಂಗತ್ಯ - ರೂಪಕ**
ಈ ರೀತಿಯಲಿ ಸೈನ್ಯವಾರಿಧಿ ಸಹಿತಲೆ | ಧಾರಿಣಿಪತಿಯಿರುತಿರಲು ||
ಭೂರಿ ಮೋಹಗಳಿಂದ ಸಲಹಿಕೊಂಡಿಹ ಪಕ್ಷಿ | ಗೇರಲೊಂದಿನ ದುಗುಡಗಳು || ೧ ||
ಸುರಿವ ಕಂಬನಿಯಿಂದಲಿರೆ ಕಂಡು ನುಡಿಸಿದ | ಮರುಗುವದೇಕೆ ನೀನೆನುತ
ಚರಣದೊಳ್ ಶಿರವ ಚಾಚುತ ಬಲು ದೈನ್ಯದಿಂ | ದೊರೆದುದು ಬಿಕ್ಕಿ ಬಿರಿದಳುತ || ೨ ||
ಪಿತೃ ಮಾತೃವಂದದೊಳ್ ಸಲಹುವೆಯೆನ್ನನು | ಅತಿಸುಖದಿಂದ ಬಾಳುವೆನು ||
ಸತಿಸುತರೇನು ಕಷ್ಟದೊಳಿರುವರೊ ಯೆಂದು | ವ್ಯಥಿಸಿ ಕಾಣದೆ ಶೋಕಿಸುವೆನು || ೩ || 126 ||

**ಕಲ್ಯಾಣಿ - ಅಷ್ಟ**
ನುಡಿಯಲೀ ಪರಿಯಿಂದ ಹಂಸನು | ಮನ |
ಮಿಡುಕಿ ಭೂಪತಿಯದರ ಮೈಯನು || ಕಯ್ಯೊಳ್ |
ತಡವರಿಸುತಲೆಂದ | ಕಡು ಮಮತೆಗಳಿಂದ || ೧ ||
ಮರುಗಬೇಡೈ ಬ್ರಹ್ಮವಾಹನ | ನಿನ್ನ |
ಸೆರೆಯ ಬಿಡಿಸುವೆ ಕೇಳೀಕ್ಷಣ || ಪೋಗೀ |
ತರುಣಿ ಮಕ್ಕಳ ನೋಡು | ಪರಿಪಾಲನೆಯ ಮಾಡು || ೨ ||
ಎನುತ ಬಂಧನ ತೆಗೆಸೆ ತೋಷದಿ | ನಮಿಸಿ |
ವಿನಯದಿಂ ಪೊಗಳುತ್ತಾನಂದದಿ || ಹಾರಿ |
ಘನವೇಗದಿಂ ಬಂದಾ | ವನಿತೆ ಸುತರ ಕಂಡ || ೩ ||
ಹರುಷದಿಂದೋಲಾಡುತೆಲ್ಲರು | ಯಾಕೆ |
ಬರವಿಷ್ಟು ದಿನ ತಡವೆಂದರು || ಹಂಸ |
ನೊರೆದ ತನ್ನಯ ವ್ಯಥೆಯ | ದೊರೆ ಮಾಡಿದುಪಕೃತಿಯ || ೪ ||
ನುಡಿದ ಬವಣೆ ಕೇಳಿ ಕ್ಲೇಶವ | ತಾಳಿ |
ಯೊಡನೆ ಪೇಳ್ದರು ಒಂದು ವಾಕ್ಯವ || ನಳ |
ಕಡು ಪುಣ್ಯವರ್ಧನ | ಬಿಡಬಾರದಾತನ || ೫ ||
ತೆರಳಿ ನೀ ದಿನಕೊಂದು ಬಾರಿಯಾ | ಧರ್ಮ |
ಸೆರೆಯ ಬಿಟ್ಟಿಹ ಪ್ರಭು ಭೇಟಿಯ || ಮಾಡೆ |
ಪರಮ ಸಂತಸವವಗೆ | ಭರಿತ ನೀತಿಯು ನಮಗೆ || ೬ || 132 ||

**ಕಂದ**
ಸತಿ ಪುತ್ರರ ಮಾತಿಗೆ ಮೆ |
ಚ್ಚುತಲಹುದೆನುತಂ ಬರೆ ಮರುದಿನದುದಯದೊಳಂ ||
ಮತಿಯುತ ಬಹು ಚೋದ್ಯಂ ತಾ |
ಳುತ ಮೆಯ್ದಡವುತ ನುಡಿಸಿದನತಿ ಪ್ರೀತಿಯೊಳಂ || ೧ || 133 ||

**ಯರಕಲಕಾಂಭೋಜಿ - ತ್ರಿವುಡೆ**
ಏನು ಬಂದೆಯಯ್ಯ | ನೀ ಪುನಃ ಮ | ತ್ತೇನು ಬಂದೆಯಯ್ಯ ||
ಏನು ಬಂದೆ ನಿನ್ನ ಕಾಣದೆ ಬಹು ಚಿಂತೆ |
ನಾನು ಮಾಡುವ ವೇಳ್ಯದಿ | ನೀ ಭರದಿ || ೧ ||
ಪರಿಣಾಮವೇನೈ ನಿನ್ನ | ಮಾನಿನೀ ಸುತರ್ | ವರ ಬಂಧು ಬಳಗ ಮುನ್ನ ||
ಸೆರೆಯನಿಕ್ಕಿದ ಪಾಪಿಯೆಂದು ನೋಡದೆ ಬಂದು | ಪರಿಹಾರಗೆಯ್ದುದಯಲ್ಲ | ಕೊರತೆಯಿಲ್ಲ || ೨ ||
ನಾಡಪಕ್ಷಿಗಳಂತಲ್ಲ | ಈ ಗುಣ ಬುದ್ಧಿ | ರೂಢಿಯೊಳೆಲ್ಲೂ ಇಲ್ಲ ||
ಮಾಡದುದಾಸೀನವನು ಮಾತನೆನ್ನೊಳು | ಆಡಿ ಪೋಗೈ ನಿತ್ಯದಿ | ಸಂತಸದಿ || ೩ ||
ಹರ ಹರ ನಿಮ್ಮ ನಾನು | ದೂರಲು ಬಾಯೊಳ್ | ಸುರಿಯದೆ ಹುಳವು ತಾನು ||
ಚರಣಕಟಾಕ್ಷದಿ ಸುಕ್ಷೇಮಿಗಳು ಯೆಲ್ಲ | ಪರಮ ಕೃಪಾನಿಧಿಯೇ | ಕೇಳ್ ದೊರೆಯೆ || ೪ ||
ಪೋಗಲಿಲ್ಲೆಂದ ನಾನು | ನಿಮ್ಮಲಿ ಸುಖ | ಭೋಗದೊಳಿರ್ದುದನು ||
ಆಗ ಯೋಚಿಸೆ ಮನ ಕಳವಳಿಸುತ ಭ್ರಾಂತ | ನಾಗಿ ತೆರಳಿದೆ ಜೀಯ | ಎನ್ನೊಡೆಯ || ೫ || 138 ||

**ಸುರುಟಿ - ಆದಿ**
ಈ ತೆರದೊಳು ಮಾತ | ನಾಡುತ | ಪ್ರೀತಿಯೊಳೊಂದಿಸುತ ||
ನೀತಿಯೊಳಪ್ಪಣೆಗೊಂಡಾನಂದದೊ | ಳಾ ತತುಕ್ಷಣ ತನ್ನಾಲಯಕಯ್ದಲು || ೧ ||
ಬರುತಿರೆ ಪ್ರತಿದಿನದಿ | ಬ್ರಹ್ಮನ | ವರವಾಹನ ಮುದದಿ ||
ಮೆರೆವ ಮಂತ್ರಿಗಳಿಗೆ ಯೆರಡು ಇಮ್ಮಡಿಯಲಿ |
ಒರೆಯುತ ಅರಸಗೆ ಗುಣಯುಕ್ತಿಗಳನು || ೨ ||
ಒಂದಿನ ನಳ ತಾನು | ಕುಳ್ಳಿರೆ | ಬಂದನು ಹಂಸಕನು ||
ಇಂದುಕುಲೇಶನನಂದೀಕ್ಷಿಸಿ ದಯ | ದಿಂದಲೇಕಾಂತದೊಳೆಂದನು ನಮಿಸುತ || ೩ || 141 ||

**ಮಧ್ಯಮಾವತಿ - ಏಕ**
ಲಾಲಿಸೋ ಸ್ವಾಮೀ ಲಾಲಿಸೊ || ಪ ||
ಲಾಲಿಸು ಎಲೆ ಸ್ವಾಮಿ ದಯವಿಟ್ಟು ನೀನು |
ಆಲಸ್ಯವಿಲ್ಲದೆ ಬಿನ್ನಹಗಳನು || ಅ ||
ಧೀರ ನಿನ್ನಯ ರೂಪು ಮಾರನಿಗಿಲ್ಲ |
ಶೂರತನಕೆ ತ್ರಿಭುವನ ಇದಿರಿಲ್ಲ ||
ವಾರಿಧಿಶಯನಗಿಷ್ಟರ ಭೋಗವಿಲ್ಲ |
ಭೂರಿ ಸೌಖ್ಯವು ತವ ರಾಜ್ಯದೊಳೆಲ್ಲ || ಲಾಲಿಸೊ || ೧ ||

ನವರತ್ನವಿಲ್ಲದೆ ಪದಕ ಶೋಭಿಪುದೆ |
ರವಿಗೆ ತೋರದ ಲೋಕ ಘನ ಬೆಳಕಹುದೆ ||
ಅವನಿಯಿಲ್ಲದ ದೊರೆತನವು ರಂಜಿಪುದೆ |
ಪವನ ಸಂಚರಿಸದ ವನ ಹಿತವಹುದೆ || ಲಾಲಿಸೊ || ೨ ||
ಇಷ್ಟು ಸಂಪದವಿರೆ ಕಾಣಿಸದಂದ |
ದಿಟ್ಟ ಕೇಳ್ ಫಲವಿಲ್ಲ ಇದುವೊಂದರಿಂದ ||
ಸೃಷ್ಟಿ ಆಳುವೆ ಬಹು ಅಪಹಾಸ್ಯದಿಂದ |
ಪಟ್ಟದರಸಿಯಿಲ್ಲದಿರೆ ಯಾವ ಚಂದ || ಲಾಲಿಸೊ || ೩ ||
ಹರುಷವಾಯಿತು ನೀನು ಪೇಳಿದ ನುಡಿಗೆ |
ಧರಣಿ ಮೂರರೊಳಿಲ್ಲ ಹುಡುಕಿದರೆನಗೆ ||
ಸರಿಯಾದ ಕನ್ನೆ ಕಾಣದರಿಂದ ಹೀಗೆ |
ಇರುವೆ ಈ ಚಿಂತೆ ಯಾರಿಗು ತೋರದ್ ಹಾಗೆ || ೫ ||
ಈಗ ನಿನ್ನ ಮನಕೊಪ್ಪುವ ಸ್ತ್ರೀಯ |
ಪೋಗಿ ನಿಶ್ಚಯ ಮಾಡಿ ಬಹೆ ನೋಡಾ ಬಗೆಯ ||
ಬೇಗದಿ ಪಾಲಿಸಪ್ಪಣೆಯೆಂದು ಕೈಯ್ಯ |
ಆಗ ಮುಗಿದು ಹಾರಿ ಬೀಳ್ಕೊಂಡ ಸಭೆಯ || ಲಾಲಿಸೊ || ೬ || 146 ||

**ಮತ್ತೇಭವಿಕ್ರೀಡಿತಂ**
ವರಪಕ್ಷೀ ಪರಿಯಿಂದ ನೇಮಗೊಳುತಂ ಹಾರುತ್ತ ತಾ ವೇಗದಿಂ |
ತಿರುಗಲ್ ತ್ರೈಭುವನಂಗಳೆಲ್ಲ ನಳಗಂ ಈಡಾದ ಸೌಂದರ್ಯಮಂ |
ಧರಿಸಿರ್ಪಾ ಸತಿರತ್ನ ಕಾಣದಿರಲಾ ಮರುಗುತ್ತ ಬಹು ಚಿಂತೆಯಿಂ |
ಭರಿತಾಯಾಸದೊಳೊಂದು ವೃಕ್ಷದೊಳಗಂ ಕುಳ್ಳಿರ್ದ ವಿಶ್ರಾಂತಿಗಂ || ೧ || 147 ||

**ತೋಡಿ - ಅಷ್ಟ**
ಇತ್ತ ಕೇಳೈ ಧರ್ಮ ನಂದನ | ಚಿತ್ತ | ಶುದ್ಧ ಕೋಟಿಪುಣ್ಯವರ್ಧನ || ಪ ||
ಉತ್ತಮ ವೈದರ್ಭ ದೇಶದಿ | ಭೂ | ಪೋತ್ತಮ ಭೀಮಕ ತೋಷದಿ ||
ಪೃಥ್ವಿಯಾಳುತ್ತ ವಿಲಾಸದಿ | ಇರ | ಲಿತ್ತಲು ಚಿಂತಿಸೆ ಹೃದಯದಿ || ಇತ್ತ || ೧ ||
ದಮಋಷಿವರನಲ್ಲಿ ಬಂದನು | ನೀ | ನಿನಿತು ಚಿಂತಿಸಲ್ಯಾತಕೆಂದನು || ಮನ |
ಸಿನಭೀಷ್ಟವರವೀವೆಯೆಂದನು | ಎನ್ನೊಳ್ | ಘನತೋಷದಿ ಪೇಳೆಂದನು || ೨ ||
ಸುಲಲಿತ ಸಂತಾನ ವೃದ್ಧಿಯ | ಕಾಣ | ದಲಸಿಕೊಳ್ಳುವ ಚಿತ್ತಶುದ್ಧಿಯ ||
ನೆಲೆಗೆಯ್ದು ಕರುಣಸಮೃದ್ಧಿಯ | ಇಟ್ಟು | ಸಲಹೆಂದ ನೃಪತಿಯ ನೋಡಿ ಶ್ರದ್ಧೆಯ || ೩ || 150 ||

**ವಾರ್ಧಕ**
ಒಲಿದನುಗ್ರಹ ಗೆಯ್ದು ಮುನಿವರಂ ತೆರಳಲ್ಕೆ |
ಬಲಿದುದಾನಂದ ಭೂವರನ ಹೃದಯಾಂಗಣದಿ |
ಕುಲವಧುವಿನೊಳ್ ಗರ್ಭಚಿಹ್ನೆ ತೋರಿತು ದರಿದ್ರನಿಗೆ ಧನ ಸಿಕ್ಕಿದಂತೆ ||
ಸುಲಭ ಸಂತೋಷದಿಂದಾ ಸತಿಗೆ ನವಮಾಸ |
ಕಳೆದು ಸಂತಸದಿ ಶುಭಕರ ವರ ಮುಹೂರ್ತ ಮಂ |
ಗಳ ಸುಪುತ್ರೋತ್ಸವಂಗಳ ಕಾಣಿಸಿತು ದೈವಪುರುಷ ಪ್ರಸಾದದಿಂದ || ೧ || 151 ||

**ಸುರುಟಿ - ಏಕ**
ಬೆಸನಾದಳು ತರುಣೀ | ಮಕ್ಕಳ |
ಕುಶಲ ನಾರೀಮಣಿ ||
ಶಶಿಮುಖಿಯಾದ ಸುಪುತ್ರಿಯನೊಬ್ಬಳ |
ಕುಸುಮಶರನ ಸನ್ನಿಭ ಸುತನೋರ್ವನ || ೧ ||
ಭೀಮಕ ತೋಷದೊಳು | ಕಾಣುತ |
ಪ್ರೇಮದಿ ಮಂತ್ರಿಯೊಳು ||
ಕಾಮಿತ ಫಲ ಕೈಸೇರಿತು ಸುತರಿಗೆ |
ನಾಮಕರಣ ಸನ್ನಹಗಳನೊದಗಿಸು || ೨ ||
ಎಂದಾಚಾರ್ಯರನು | ಕರೆಸಲಾ |
ನಂದದಿ ಭೂವರನು ||
ಬಂದು ಬುಧರು ಜಾತ್ಯುಕ್ತದಿ ಸುತರಿಗೆ |
ಚಂದದಿ ಜಾತಕರ್ಮವ ರಚಿಸಿದರು || ೩ ||
ದಮಋಷಿ ಮತದೊಳಗೆ | ಹೆಸರಿಡೆ |
ದಮನೆಂದರ್ಭಕಗೆ ||
ದಮಯಂತಿಯೆಂದು ವನಿತಾಮಣಿಯನು ಸಂ |
ಭ್ರಮದಿ ಕರೆದು ತೊಟ್ಟಿಲ ತೂಗಿದರು || ೪ || 155 ||

**ಜೋಗುಳ**
ಜೋ ಜೋ ಕನ್ಯಾಕುಲಶಿರೋಮಣಿಯೆ |
ಜೋ ಜೋ ಪರಮ ಸೌಭಾಗ್ಯದ ಕಣಿಯೆ ||
ಜೋ ಜೋ ಭುವನಸುಂದರ ಮಾನಿನಿಯೆ |
ಜೋ ಜೋ ಮಾರನ ಮೋಹನ ಗಿಣಿಯೆ || ೧ ||
ನೀರಜಗಂಧಿ ನಿರ್ಮಲ ಚಂದ್ರವದನೆ |
ಚಾರು ಕೋಮಲ ಕುಂದಕುಟ್ಮಲರದನೆ |
ವಾರಣರಿಪುಮಧ್ಯೆ ವರ ಹಂಸಗಮನೆ |
ತೋರ ಮಂಜುಳ ಮೌಕ್ತಿಕ ರತ್ನಾಭರಣೆ || ೨ ||
ಕನ್ನಡಿ ಕದಪಿನ ಕಳಕೀರ ವಾಣಿ |
ಪನ್ನಗವೇಣಿ ಸುಂದರಿ ಗುಣಶ್ರೇಣಿ ||
ಚಿನ್ನದ ಬೊಂಬೆ ಚೆಲ್ವಿನ ಕಟ್ಟಾಣಿ |
ಚೆನ್ನಾಗಿ ಪವಡಿಸೆ ಪರಮ ಕಲ್ಯಾಣಿ || ಜೋ ಜೋ || ೩ || 158 ||

**ಭಾಮಿನಿ**
ಧರಣಿಪತಿ ಕೇಳಿಂತು ನೃಪಮಂ |
ದಿರದಿ ಬೆಳೆವುತ ರೂಪು ಗುಣ ವಿ |
ಸ್ತರದಿ ಬಣ್ಣಿಸಲಳವಡದೆ ನೋಡುವರ ಕಣ್ಮನಕೆ ||
ಇರುತಿರಲು ದಿನದಿನಕೆ ಯೌವನ |
ದಿರವು ಘಟಿಸಲು ನೋಡಿ ಮದನನು |
ಶರವನೆಸೆಯಲ್ಕಾಗ ತರಳೆಗೆ ತಾಗಿ ವಿರಹದಲಿ || ೧ ||
ಅರೆ ನಿಮಿಷ ಯುಗವಾಗಿ ನಾನಾ |
ತೆರದಿ ಸುಯ್ಯುತ ಮಲಗುತೇಳುತ |
ಪರಿಣಯವ ಪಿತನೇಕೆ ವಿರಚಿಸ ತನಗೆಯೆಂದೆನುತ ||
ಇರಗೊಡದು ಸ್ಮರಶರವು ಶಿವ ಶಿವ |
ಬರಿದೆ ಕೆಟ್ಟೆನು ಎಂದು ಸೊರಗಲು |
ತರಳೆ ಸಲಹಿದ ಶುಕನು ಪರಿಕಿಸಿ ಕೇಳ್ದನವಳೊಡನೆ || ೨ || 160 ||

**ರೇಗುಪ್ತಿ - ಅಷ್ಟ**
ಎಂದಿನ ಪರಿಯಲ್ಲವೆ | ತರುಣೀ ನಿನ | ಗಿಂದೇನು ಪೊಸ ಗುಣವೆ ||
ಕುಂದಿದೆ ಮುಖವೆಲ್ಲ | ನಂದಗೆಟ್ಟಿಹೆಯಲ್ಲ |
ಕಂದರ್ಪನುರುಬುವ | ನೆಂದು ತೋರ್ಪುದು ಭಾವ || ೧ ||
ವಂಚಿಸದಿರು ಸುಮ್ಮನೆ | ಲೋಕ ಪ್ರ | ಪಂಚವೆ ಹೀಗೆ ಜಾಣೆ ||
ಅಂಚು ಕಾಣಿಸಲೊಲ್ಲೆ | ಚಂಚಲಿಸುವೆಯಲ್ಲೆ |
ಮಿಂಚುತಿರುವ ಮೋರೆ | ಹಂಚಿನಂತಿದೆ ನೀರೆ || ೨ ||
ಮಾತಾಡಲೊಲ್ಲೆ ಯಾಕೆ | ಮಾನಿನಿ ನಿನ | ಗೇತರೊಳಿದೆ ಬಯಕೆ ||
ಪ್ರೀತಿಯುಳ್ಳಡೆ ಪೇಳೆ | ನಾ ತರಿಸುವೆ ನಾಳೆ |
ತಾತನಿಗರುಹುವ | ಭೀತಿಯೇನಿದಕವ್ವ || ೩ ||
ಉಲ್ಲಾಸಗೆಟ್ಟಿರುವೆ | ನೀ ನಿಂತಲ್ಲೆ | ನಿಲ್ಲುವದಿದು ತರವೆ ||
ಎಲ್ಲರೊಳಗೆ ಸಿಟ್ಟು | ಸೊಲ್ಲಿಸುವರೆ ಗುಟ್ಟು |
ವಲ್ಲಭನೊಳು ಚಿಂತೆ | ಯಲ್ಲವೇನಲೆ ಕಾಂತೆ || ೪ || 164 ||

**ದ್ವಿಪದಿ**
ಏನ ಪೇಳಲಿ ನಾನು ಕಡು ಮುದ್ದು ಶುಕನೆ |
ನೀನು ಮಾಡುವುದೇನು ಕೇಳಿ ಎನ್ನೊಡನೆ || ೧ ||
ನಡುಪಗಲಿನ ಸೂರ್ಯನಂದದೊಳೆನ್ನ |
ಸುಡುತಿಹನೇತಕೆ ಉಡುಪತಿ ಮುನ್ನ || ೨ ||
ಮಘಮಘಿಸುವ ಸುಮ ಗಂಧಗಳೆಲ್ಲ |
ಬಗೆಯಾಗಿ ತೋರ್ಪುದು ಸಟೆಯ ಮಾತಲ್ಲ || ೩ ||
ಅನ್ನಪಾನಗಳೆಂಬುದ್ವೈರವಾಗಿಹುದು |
ಕಣ್ಣಿಗೆ ನಿದ್ರೆಯು ಸರ್ವಥಾ ಬರದು || ೪ ||
ಅರೆಕ್ಷಣ ಯುಗವಾಗಿ ತೋರ್ಪುದು ಎನಗೆ |
ತರುಣಿ ಜನ್ಮದಿ ಪುಟ್ಟಿ ಕೆಟ್ಟೆ ನಾ ಹೀಗೆ || ೫ ||
ಯಾರಿಗೆ ಪೇಳುವೆ ವೇದನೆಯಲ್ಲ |
ಮಾರನೆನ್ನುವ ಪಾಪಿ ಕೊಲುತಿಹನಲ್ಲ || ೬ ||
ನಿನಗಿಂತ ಸ್ನೇಹಿತರಿಲ್ಲೆಂದು ಒರೆದೆ |
ತನುವನುಳುಹಿ ಕೀರ್ತಿ ಪಡೆಯಲು ಬರದೆ || ೭ || 171 ||

**ಕೇದಾರಗೌಳ - ಝಂಪೆ**

ಮುಗುದೆ ಬಿಡು ಶೋಕಗಳನೆ | ನೀನಿಷ್ಟು ಹಗರಣವ ಮಾಳ್ಪರೇನೆ ||
ಬಿಗುಹಿಡಿಯೆ ವೊಂದಿನವನು | ಈ ಕ್ಷಣದಿ | ಜಗ ಮೂರ ಹುಡಿಕಿ ನಾನು || ೧ ||
ನಿನಗಿಂತ ರೂಪದವನೆ | ದೊರಕುವನು | ಮನದೊಳಿಡದಿರು ಯೋಚನೆ ||
ಎನುತ ವಂದಿಸಿ ಹಾರಿತು | ಸಕಲವನು | ವಿನಯದಿಂದಲಿ ತಿರುಗಿತು || ೨ ||
ಎಲ್ಲಿ ನೋಡಿದರೀಕೆಗೆ | ಸಮನಾದ | ಚೆಲ್ವ ಪುರುಷರ ಕಾಣದೆ ||
ತಲ್ಲಣಿಸಿ ಹಂಸ ಕೂತ | ಮರಕಾಗ | ನಿಲ್ಲದಯ್ದಿತು ದಣಿಯುತ || ೩ || 174 ||

**ಕೇದಾರಗೌಳ - ಅಷ್ಟ**

ಹೇಗೆ ಮಾಡಲಿಯೀಯಸಂಗತಕೆ |
ಹೀಗೆ ಪೋದರೆ ಪ್ರಾಣ ಕಳಕೊಂಬಳಾಕೆ || ಪ ||
ಹೋಗಿ ನೋಡಿದರಿಲ್ಲ ಬ್ರಹ್ಮಸೃಷ್ಟಿಯೊಳೆಲ್ಲ |
ಆ ಗರುವೆಗೆ ತಕ್ಕ ಮೋಹದ ನಲ್ಲ ||
ಈಗ ಎನ್ನಯ ಕಷ್ಟ ವ್ಯರ್ಥವಾಯಿತುಯೆನುತ |
ಹೀಗೆ ಯೋಚಿಪ ಶುಕನೊಳ್ ಬೆಸಗೊಂಡ ಹಂಸ || ೧ ||
ಯಾರು ನೀನಿಲ್ಲಿಗೆ ಬಂದು ನಿನ್ನೊಳು ನೀನೆ |
ಭೂರಿ ದುಗುಡದೊಳು ನುಡಿಯುತಿಹೆ ||
ನಾರಿಗೆ ಸಲುವಂತ ಕಾಂತ ದೊರಕನೆಂಬ |
ಕಾರಣವೇನೀಗ ಅರುಹು ಎನ್ನೊಳು ಬೇಗ || ೨ ||
ಈ ತೆರದೊಳು ಕೇಳೆ  ಪ್ರೀತಿಯೊಳುಸುರಿತು |
ಖ್ಯಾತನಾಗಿಹ ಕುಂಡಿನ ||
ಭೂತಳೇಶನು ಭೀಮರಾಯನೆಂಬಾತನು |
ಆತಗಿಹಳು ಸುತೆ ದಮಯಂತಿ ನಾಮದಿ || ೩ ||
ಏರಿ ಪ್ರಾಯವು ಬಹು ಗಾರುಗೆಡುತಲೆನ್ನ |
ಭೋರನಟ್ಟಲು ಯೆಲ್ಲ ಹುಡುಕಿದೆನು ||
ವಾರಿಜಾಕ್ಷಿಗೆ ಸಮನಾದ ವರನ ಕಾಣ |
ದೀ ರೀತಿಯೊಳು ಕಳವಳದೊಳಿರುವೆನಯ್ಯ || ೪  || 178 ||

**ತೋಡಿ - ಅಷ್ಟ**

ಅಮಮಯೇನೆಂಬೆನೀ ಬಗೆಗೆ | ಸರಿ |
ಸಮನಾಯ್ತು ಸುಖದುಃಖದೊಳಗೆ ||
ಕ್ರಮದಿಂದ ನಿನ್ನಂತೆ ನಾನು ತಿರುಗಿ ಬಂದು |
ಶ್ರಮದಿ ಕುಳ್ಳಿರುವೆನು ಅಧಿಕ ಯೋಚನೆಯೊಳು || ೧ ||
ಒಲಿವ ನೈಷಧನಗರವನು | ಆಳ್ವ |
ನಳನೃಪನೆಂಬ ಸಹಸನು ||
ನೆಲೆಯಿಲ್ಲ ಅವನ ಚೆಲ್ವಿಕೆಗೆಣೆಯಾಗಿಹ |
ಲಲನೆಯರೆಲ್ಲು ಗೋಚರಿಸರು ಎಲೆ ಶುಕ || ೨ ||
ಪುರುಷರಿಲ್ಲೆಂದು ನುಡಿಯವೆ | ಈಗ |
ತರುಣಿ ಇಲ್ಲೆಂದು ನಾನೊರೆವೆ ||
ಬರೆದುಕೊಡಾದರೆ ಅವಳ ಸೌಂದರ್ಯವ |
ತ್ವರಿತದೊಳಾನೀವೆ ನೃಪನಾವಭಾವವ || ೩ ||
ಬಿಡದೆ ತೋರುವುದುಭಯರಿಗೆ | ಅವ |
ರೊಡಂಬಟ್ಟರಿಲ್ಲೆಂಬ ಬಗೆಗೆ ||
ಕಡು ಬೇಗದಿಂ ನಾವು ಬರುವುದು ಇಲ್ಲಿಗೆ |
ಕಡೆಗೆ ನೋಡುವ ಬ್ರಹ್ಮಲಿಖಿತಗಳಿದ್ ಹಾಂಗೆ || ೪ ||
ಎಂದು ನಿಶ್ಚಯಿಸಿ ತಮ್ಮೊಳಗೆ | ಪಠ |
ತಂದು ತೋರಲು ಇತ್ತ ನಳಗೆ ||
ಮಂದಗಮನೆಗತ್ತ ಶುಕನೊಯ್ದು ತೋರಿಸೆ |
ಕಂದರ್ಪನುರುಬೆಯೊಳ್ ಮರುಳಾಗಲೀರ್ವರು || ೫ || 183 ||

**ದ್ವಿಪದಿ**

ಅರರೆ ನಿನ್ನಯ ಸಹಸವೆಷ್ಟು ಪೊಗಳುವೆನು |
ವಿರಹದಲಿ ಬಸವಳಿದು ಬೆಂಡಾದೆ ನಾನು || ೧ ||
ತೋರು ತೋರೈ ಬೇಗ ಈ ರೂಪಿನವಳ |
ಇರುವನಕ ಮರೆಯೆ ನಾನುಳುಹು ಪ್ರಾಣಗಳ || ೨ ||
ಕಳವಳಿಸದಿರು ರಾಯ ಪೋಗಿ ಬಹೆನೆನುತ |
ಚಳಕದಿಂದಾ ಮರಕೆ ಬರಲು ನಸುನಗುತ || ೩ ||

ನಳಿನಾಕ್ಷಿ ಹೊರಳಿದಳು ಕುಂಡಿನಾಪುರದಿ |
ನಳನ ಕಾಣಿಸುಯೆಂದು ಹಲುಬೆ ಬಹು ವಿಧದಿ || ೪ ||
ಮರುಗಬೇಡೆಂದವಳನೊಡಬಡಿಸಿ ತಾನು |
ಭರದಿ ಗಮಿಸುತ ಹಂಸಗೆಂದ ಶುಕ ತಾನು || ೫ ||
ಅರಸನೇನೆಂದನೆಮ್ಮೊಡತಿಯೊಪ್ಪಿದಳು |
ತ್ವರಿತವಾಗಿದೆಯಾಕೆಗಿಂತ ಶತಮಿಗಿಲು || ೬ ||
ಚಂದವಾದುದು ಆದರೆಮ್ಮ ನೃಪನೆಡೆಗೆ |
ಬಂದು ಕೇಳ್ವುದು ಕನ್ನಿಕೆಯ ಕೊಡುವ ಹಾಗೆ || ೭ ||
ಎಂದು ಸೂಚಿಸಲಿತ್ತ ತೆರಳಿ ನೈಷಧಗೆ |
ವಂದಿಸುತ ಪೇಳಿದುದು ಕುಂಡಿನಾಪುರಿಗೆ || ೮ ||
ಕಳುಹು ಮಂತ್ರಿಯ ಜವದಿ ಕೇಳಲಾ ದೊರೆಯ |
ಲಲನೆ ನಿನಗೊಲಿವಂತೆ ಮಾಡಿಹೆನು ಬಗೆಯ || ೯ ||
ನಿಲದೆ ಹಿಗ್ಗುತ ಸಚಿವಗೊರೆಯೆ ತವಕದೊಳು |
ಬಲು ರಾಜ್ಯಗಳ ದಾಟುತೀ ನಗರ ಪೊಗಲು || ೧೦ || 193 ||

**ವಾರ್ಧಕ**
ವರಪಾಂಡುತನಯ ಕೇಳ್ ಚರರು ಈತನ ಬರವ |
ನರುಹಲ್ಕೆ ಭೂವರಂ ಹರುಷದಿಂ ಕರೆಸುತಲಿ |
ಪರಮೋಪಚಾರಮಂ ಗೆಯ್ದು ಬಂದಿಹ ಕಾರ್ಯವೇನೆನಲ್ಕವನೆಂದನು ||
ಮೆರೆವ ನೈಷಧನಗರದರಸು ನಳನೆಂಬಾತ |
ಧುರಪರಾಕ್ರಮಿ ಸುಧಾಕರವಂಶನಾತಂಗೆ |
ಕರುಣದಿಂ ಕೊಡಬೇಕು ನಿನ್ನ ಸಂಭವೆಯನೆನೆ ಪರಿತೋಷವನು ತಾಳುತ || ೧ ||
ಮಡದಿ ಪದ್ಮಾನನೆಯ ಕೇಳಿ ಸಮ್ಮತಗೊಳಿಸಿ |
ಒಡನೆ ದಮಯಂತಿಗಿದನರುಹಿ ಮನವೊಡಬಡಿಸಿ |
ನುಡಿದ ಮಂತ್ರಿಯೊಳಾಗ ತೊಡರಿಲ್ಲ ನಾನೀವೆ ಕಡು ಮುದ್ದುಮಗಳನೆನಲು ||
ತಡೆಯದಾ ಸಚಿವನಯ್ತಂದು ಪುನರಪಿ ತನ್ನ |
ಒಡೆಯಂಗೆ ಬಿನ್ನವಿಸೆ ಸಕಲ ವೃತ್ತಾಂತಮಂ |
ಬಿಡದೆಯಾನಂದದೊಳ್ ಸಡಗರದಿ ದಿಬ್ಬಣವನೊಡಗೊಂಡು ನಳ ಪೊರಟನು || ೨ || 195 ||

**ಸೌರಾಷ್ಟ್ರ - ತ್ರಿವುಡೆ**
ಭೇರಿ ವಾದ್ಯ ನಗಾರಿ ಘೋಷದಿ |
ಭೋರಿಡುವ ಕಹಳೆಗಳು ಮತ್ತಾ |
ವಿರಾಜಿಸುವ ಬಂಧುಜನ ವಾರಣ | ವಾರ ಸಹಿತ || ೧ ||
ಚಾರುತರ ಕನ್ನಡಿಯ ಕಲಶವ |
ನಾರಿಯರ ಶೋಭಾನದಿಂದಲೆ |
ಸಾರಿ ಕಂಡರು ಕುಂಡಿನಾಪುರ | ವಾರು ದಿನಕೆ || ೨ ||
ವಂದಿಸುತಲಾ ಭೀಮರಾಯಗೆ |
ಚಂದದಿಂದುಸಿರಿದರು ಚಾರರು |
ಇಂದುವಂಶೋದ್ಭವನ ದಿಬ್ಬಣ | ಬಂದುದೆನುತ || ೩ ||
ಎಂದ ವಚನವ ಕೇಳಿ ತನ್ನಯ |
ಬಂಧುಬಳಗವ ಕೂಡಿಕೊಂಡಾ |
ನಂದದಿಂದಿದಿರ್ಗೊಂಡು ಮಂದಿರ | ಗಳನು ಕೊಡಿಸಿ || ೪ || 199 ||

**(ಇಂದ್ರನ ಒಡ್ಡೋಲಗ)**

**ಸೌರಾಷ್ಟ್ರ - ತ್ರಿವುಡೆ**
ಇರಲು ಈಪರಿಯಿಂದಲಿತ್ತಲು |
ಸುರಪ ವರುಣನು ವಾಯು ಶಿಖಿಸಹ |
ತೆರಳಿದರು ಭೂಸುರರ ವೇಷದಿ | ನಳನ ಬಳಿಗೆ || ೧ ||
ಪರಿಕಿಸುತಲೆದ್ದಾಗ ಅವರಿಗೆ |
ಶಿರವ ಚಾಚುತ ಕೇಳ್ದನನಿಬರ |
ದರುಶನಗಳತಿ ಚೋದ್ಯವಾಗಿದೆ | ಅರುಹಬೇಕು || ೨ || 201 ||

**ಬೇಗಡೆ - ರೂಪಕ**
ಧಾರಿಣೀಶ್ವರನೆಂದ ಮಾತಿಗೆ | ಜಂಭಾರಿ ತೋಷ | ವೇರಿ ನುಡಿದ ಪುಣ್ಯವಂತಗೆ ||
ಧೀರ ಕೇಳ್ ನಿನ್ನಿಂದಲೊಂದುಪ | ಕಾರವಾಗಲು ಬೇಕು ನಮಗೆ |
ಯಾರು ತಿಳಿಯದಂತೆ ಪೋಗಿ | ನಾರಿಮಣಿ ದಮಯಂತಿ ಬಳಿಗೆ || ೧ ||

ಮೆಲ್ಲನೇ ನುಡಿಸುತ್ತ ಬಾಲೆಯ | ಮನಸೋತು ಈ | ತಲ್ಲಣಾವ ಗೊಂಬ ಯುಕ್ತಿಯ ||
ನಿಲ್ಲದೆ ನೀ ಗೈಯ್ಯುದ್ದ ನಮ್ಮ | ನಾಲ್ವರೊಳಗೋರ್ವರ್ಗೆ ಮಾಲೆಯ |
ಉಲ್ಲಾಸದೊಳ್ ನೀಡುವಂತೆ | ಮಲ್ಲಸಾಹಸ ಮಾಡು ಬಗೆಯ || ೨ || 203 ||

**ಭಾಮಿನಿ**
ನುಡಿಯ ಕೇಳುತ ಚಿಂತಿಸಿದನಾ | ಮಡದಿ ಮೈಗೊಡುವಳೊ ಕುಠಾರಿಸಿ |
ಕೊಡಹುವಳೊ ಪರರೊಸ್ತುವಿಗೆ ಕೊಡಲೆಂತು ಭಾಷೆಯನು ||
ನುಡಿಗೆ ತಪ್ಪಿದನೆಂದು ಸುಮ್ಮನೆ | ಕಡೆಗೆ ಮಾತಿನ ಶಬ್ದ ಬಪ್ಪುದು |
ಬಿಡದೆ ಬಂದುದೆನುತ್ತ ಚಿಂತಿಸುತೆಂದನವರೊಡನೆ || ೧ || 204 ||

**ಖಮಾಚ್ - ತ್ರಿವುಡೆ**
ಏನ ಪೇಳಲಿ ನಿಮಗೆ | ಚಿತ್ತದೊಳನು | ಮಾನವಾಗಿದೆಯೆನಗೆ ||
ಮಾನಿನಿಯೊಳಗೆನಗೆನ್ನೊಳಗಾಕೆಗೆ ಬುದ್ಧಿ |
ಸ್ಥಾನಗೊಂಡಿಹುದು ವಿಕಲ್ಪವಾಗುವುದೆಂತು || ೧ ||
ಮಾತನಾಡಿಸದಲ್ಲದೆ | ತಿಳಿವುದೆಂತು | ಆ ತರುಣಿಯ ಕಾಣದೆ ||
ನೂತನ ವಿಪ್ರರನೊಲ್ಲೆನೆಂದರೆ ಹೇಗೆ |
ಭೀತಿಯಿಲ್ಲದೆ ಪೋಗಿ ಬರುವ ಮಾರ್ಗವಿದೆಲ್ಲಿ || ೨ ||
ಧರಣೀಶ ಪೋಗಲೊಂದು | ಅದೃಶ್ಯ | ಕರಣಗಳ ಕೊಡುವೆವಿಂದು ||
ಹರತಂತ್ರದಿಂದಲೇನಾದರಾಗದಲಿ ಮುಂದೆ |
ತಿರುಕ ಹಾರುವರೆಂಬ ಪರಿಗೆ ನಮ್ಮನು ನೋಡು || ೩ ||
ತಾನು ವಾಸವನಿವನು | ಪಾವಕನಾತ | ವಾಯು ವರುಣನವನು ||
ನೀ ನಮ್ಮೊಳೊಂದೊಂದು ವರವ ಧರಿಸಿ ಧೈರ್ಯ |
ಮಾನಸನಾಗಿ ಕಾರ್ಯವ ಬೆಳೆಸುವನಾಗು || ೪ || 208 ||

**ಕಾಂಭೋದಿ - ಝಂಪೆ**
ಹೀಗೆ ನೇಮವನೀಯ | ಲಾಗಿ ವಂದಿಸಿ ನಳನು |
ಬೇಗ ಗಮಿಸುತ ಕಂಡ | ನಾಗವೇಣಿಯನು || ೧ ||
ಪರಿಕಿಸಲು ಬೇಕಿವನ | ವರಸತ್ಯಗುಣವೆನುತ |
ಭರದೊಳಗೆ ಬಂದಿವರು | ಮರೆಯೊಳಾಲಿಸುತ || ೨ ||
ವಿಕಸಿತಾನನೆಯಿವನ | ಮುಖಕಾಂತಿ ನೋಡುತಿರೆ |
ಶುಕ ತಂದ ಪಠದಂತೆ | ಪ್ರಕಟಿಸಲು ಮನಕೆ || ೩ ||
ತಡೆಯದಾಕ್ಷಣವೆದ್ದು | ಕಡು ನಾಚಿ ನಿಂದಿರಲು |
ಪೊಡವಿಪಾಲಕ ತಾನೆ | ನುಡಿದನಾಕೆಯೊಳು || ೪ || 212 ||

**ಘಂಟಾರವ - ಅಷ್ಟ**
ನೀನೆ ದಮಯಂತಿಯೆಂಬ ಮೊಹನಾಂಗಿ ಈಗ |
ನಾನು ಪೇಳ್ವ ವಚನವನ್ನು ಲಾಲಿಸುತ್ತ ಬೇಗ ||
ಏನೆಂದು ಮರುಳಾಗಿ ಮೆಚ್ಚಿದೆ ಮಾನವ ತಾ ನಳಗೆ |
ಜಾಣತನದ ಬುದ್ಧಿ ಯಾತಕೆ ತೊರೆದೆ ನಿನ್ನೊಳಗೆ || ೧ ||
ತರುಣಿಯರು ಬಲ್ಲಿರೇನೈ ಪರಮ ವಿವೇಕವನು |
ಅರುಹಬೇಕು ಕೇಳಿಕೊಂಬೆ ಸಕಲ ನೀತಿಯನು ||
ನರನೊಳಿರ್ಪ ಕೊರತೆಯೇನು ಆದರೆ ಮತ್ತೆಲ್ಲಿ |
ಪರಿಕಿಸಿರ್ಪೆಯೆನಗೆ ವರನ ಅರುಹೊ ಗಾಢದೊಳಿಲ್ಲಿ || ೨ ||
ಜಲದೊಳ್ ಬರೆದ ಲಿಪಿಗಳಂತೆ ಇಳೆಯ ಮನುಜರ್ಬಾಳು |
ನಿಲದೆ ಸ್ಥಿರದಾಯುಷ್ಯ ಸಿರಿಯೊಳ್ ಸುರಪ ಬಹಳ ಮೇಲು ||
ಒಲಿಸಬಹುದು ಆಗದಿರಲು ವರುಣ ಮರುತ ಮತ್ತೆ |
ಚೆಲುವ ಶಿಖಿಯ ಇವರು ಮನಕೆ ಬಹರೆ ನೋಡು ಕಾಂತೆ || ೩ ||
ಇಷ್ಟು ಮಾತ ಕಲಿಸಿ ಕಳುಹಿಕೊಟ್ಟಯಾರ್ರೊ ನಿನ್ನ |
ಶ್ರೇಷ್ಠರೆಂದು ಪೊಗಳಲ್ ಸಂಬಳ ಎಷ್ಟು ನಿನಗೆ ಮುನ್ನ ||
ಕಷ್ಟಬಟ್ಟೆ ಸಾಕು ಬಂದ ದಾರಿ ಹಿಡಿದು ಪೋಗು |
ಗುಟ್ಟನರಿತೆ ತರಗಳಲ್ಲ ಭ್ರಷ್ಟ ನುಡಿಗಳ ನೀಗು || ೪ ||
ಬರಿದೆ ಮೂರ್ಖತನಗಳೇಕೊ ಹರುಷದಿಂದ ನೋಡು |
ಸರುವ ಬಗೆಯೊಳ್ ಸೌಖ್ಯ ತರುವ ವೊಂದೆ ಮನವ ಮಾಡು ||
ನಿರತ ವಂದ್ಯರವರು ತ್ರೈಭುವನದೊಳಿರುವರೆಲ್ಲ |
ಸರಿಗಳುಂಟೆ ನಿನ್ನ ಪುಣ್ಯಕೆ ಮರೆಯ ಮಾತಿದಲ್ಲ || ೫ || 217 ||

**ಭಾಮಿನಿ**
ಅರಿಯೆ ನಾನಿನ್ನಾರನಾದರು | ವರ ನಿಪುಣ ಕೇಳ್ ತನ್ನ ಸತಿಯನು |
ಪರರಿಗನುಸಂಧಾನ ನಡೆಸಿದರುಂಟೆ ಪೂರ್ವದಲಿ ||
ಅರಗಳಿಗೆಗೊಂದೊಂದು ಬುದ್ಧಿಯ | ವಿರಚಿಸಲು ನಿನ್ನಂತೆ ಭಂಡಳೆ |
ಯೆರೆಯ ನಳನೇ ಹೊರತು ಮಿಕ್ಕಿನ ಕುರಿಗಳಿಂದೇನು || ೧ || 218 ||

**ಕೇದಾರಗೌಳ - ಝಂಪೆ**
ತರುಣಿಯೆಂದುದ ಕೇಳುತ | ಭೂಪ ಘನ | ತರದ ಚಿಂತೆಯ ತಾಳುತ ||
ಭರದೊಳಲ್ಲಿಂದ ತೆರಳಿ | ಬಂದುಸಿರ್ದ | ವರುಣಾಗ್ನಿ ಹರಿ ಹರಿಯಲಿ || ೧ ||
ಪೋಗಿ ಬಹುತರ ಪೇಳಿದೆ | ಎನ್ನಿಂದ ಆಗದಿಲ್ಲಿಗೆ ಗಮಿಸಿದೆ ||
ಈಗ ನೀವ್ ತಿಳಿದಂದದಿ | ಒಲಿಸಿರೈ | ಆ ಗರುವೆಯನು ಚಂದದಿ || ೨ ||
ಭರದಿ ದಿಬ್ಬಣ ಸಹಿತಲಿ | ನಿಜ ಪುರಕೆ | ತೆರಳುವೆನು ಈ ಕ್ಷಣದಲಿ ||
ಇರದು ಮನದಲಿ ಯೋಚನೆ | ಶಿವನಾಣೆ | ಬರದು ಎನ್ನಲಿ ವಂಚನೆ || ೩ || 221 ||

**ನವರೋಜು - ಆದಿ**
ಮೆಚ್ಚಿದೆವೈ ಎಲೆ ನೃಪನೆ | ನಿನ್ನ | ಹೆಚ್ಚಿನ ಸತ್ಯಕೆ ನಳನೆ ||
ಉಚ್ಚರಿಸಿದಮಾತ್ರದಿ ನೀನಾಕೆಯ |
ನಿಶ್ಚಲಹೃದಯದಿ ಕೇಳಿಬಂದುದಕೆ || ೧ ||
ಕಪಟವಿಲ್ಲೆಂಬುದನು | ಈಗ | ಗುಪಿತದಿ ಕೇಳ್ದೆವು ನಾವು ||
ನಿಪುಣನೆ ಅತಿಶ್ರಮಬಟ್ಟುದಕೀವೆವು |
ಅಪರೂಪದ ವರಗಳನೆಂದೆನುತಲಿ || ೨ ||
ಸಿರಿಯಭೋಗಗಳೊಳಗೆ | ಎ | ನ್ನೆರಡು ಇಮ್ಮಡಿಯೊಳಗೆ ||
ಸ್ಥಿರದೊಳಗನುಭವಿಸೆನಲಾ ಶಕ್ರನು |
ತ್ವರಿತದೊಳ್  ಮತ್ತಾ ವರಣನಿಂತೆಂದನು || ೩ ||
ಪಾಕಗಳ್ ನಿನ್ನಯ ಕರದಿ | ಜಲ | ಸೋಕದೆಯಾಗಲಿ ಮುದದಿ ||
ಲೋಕ ಮೂರರೊಳ್ ಧುರವಿಜಯನಾಗೆನೆ ಸ್ವಾ |
ಹಾಕಾಂತ ಕರೆದುಭೂಕಾಂತಗಿಂತೆಂದನು || ೪ ||
ಅದಕೆ ನಾ ಬಳುವಳಿಯ | ನೀವೆ | ನಿದಕೋ ಸದ್ಗುಣಪ್ರೀಯ ||
ಚದುರಕೇಳೆನ್ನನು | ಸ್ಮರಿಸುತ ಹಸಿ ನೀ   |
ವೊದಗಿ ಮುಟ್ಟಲು ಬಿಸಿಯಡಿಗೆಗಳಾಗಲಿ || ೫ ||
ಮಾರುತ ಪೇಳಿದ ನೀನು | ರಥ | ವೇರುತ ಅಶ್ವಗಳನ್ನು ||
ಭೋರನೆ ತಡವರಿಸಲು ಮನೋವೇಗದಿ |
ಹಾರಲಿ ತವ ಇ**ಚ್ಛೆ**ಗಳಿದ್ದಲ್ಲಿಗೆ || ೬ || 227 ||

**ಮಧುಮಾಧವಿ - ತ್ರಿವುಡೆ**
ರಾಯ ಧರ್ಮಜ ಕೇಳು ಧರಣೀ | ರಾಯರಾಯರು ನೆರೆದರಲ್ಲಿಗೆ |
ರಾಯ ಭೀಮಕ ಕಾಣುತವರನು | ಪ್ರೀಯದಲಿ ಸನ್ಮಾನಿಸಿ || ೧ ||
ಉಚಿತವರಿತವರಿಗೆ ಬಿಡಾರವ | ರಚಿಸಿ ಮುವತ್ತಾಗಿ ಮನ್ನಿಸಿ |
ಅಚಲವಿಭ ಗಜ ಹಯ ಪದಾತಾ | ನಿಚಯವನು ನೆಲೆಗೊಳಿಸಿದ || ೨ ||
ಉಂಟುಮಾಡಿದನಿಂದ್ರಭವನಕೆ | ಯೆಂಟು ಮಡಿಯೆನಲಾ ಸ್ವಯಂವರ |
ಮಂಟಪದ ಸೊಬಗೆರಡನೆಯ ವೈ | ಕುಂಠವೆನಲೆಸೆದಿರ್ದುದು || ೩ ||
ಕುರುಜು ಮೇರುವೆ ತೋರಣದೊಳೊ | ಪ್ಪಿರುವ ಗೋಪುರ ಕಲಶಗನ್ನಡಿ |
ಇರುಕಿನಲಿ ರಂಜಿಸುತಲಾ ನೃಪ | ಪುರ ಲಕುಮಿ ನೆಲೆಯಾದಳು || ೪ || 231 ||

**ದೇಶಿ - ಏಕ**
ಬಂದರಾಗ ಭೂಸುರರೆಲ್ಲ ನಲಿವುತ್ತ |
ಇಂದಿನುತ್ಸಹದೊಳಗೆ ಪರಮಾ | ನಂದ ವಿಪ್ರರಿಗೆನ್ನುತ || ಪ ||
ಕುಂಡಿನಾಪುರದಲಿ ಪ್ರಸ್ತವಾದರೆ |
ಮಂಡಿಗೆಯು ಘೃತ ಫೇಣಿ ಪಾಯಸ | ವುಂಡು ತೀರದುಯೆನ್ನುತ || ೧ ||
ಕಣ್ಣಪಾಪವ ಕಳಕೊಂಡು ಕೈಯೊಳು | ಸಣ್ಣ ಚಕ್ರವ ಕಟ್ಟಬಹುದೆಂದ |
ಹಣ್ಣು ಮುದುಕರು ಹಾರುತ || ೨ ||
ಒಬ್ಬ ದೀಕ್ಷಿತ ಒಬ್ಬ ಶಾಸ್ತ್ರಿಯನೆಂದು |
ಒಬ್ಬರೊಬ್ಬರ ಮೇಲೆ ಬೀಳುತ | ಉಬ್ಬಿ ಕುಣಿಕುಣಿದಾಡುತ || ೩ ||
ತಿಪ್ಪಜೋಯಿಸ ಮಲ್ಲವಧಾನಿಗಳ್  |
ಕುಪ್ಪಭಟ್ಟರು ಕಾಲ ಕುಣಿಸುತ | ಚಪ್ಪರಿಸುತೈತಾಳರು || ೪ ||
ಅಗ್ರಹಾರ ದೇವಾಲಯ ಮಠವೆಂದು |
ಅಗ್ರಜಾನುಜ ಪಿತ ಸುತಾದಿ ಸ | ಮಗ್ರ ಭೂಸುರರುಲಿವುತ || ೫ || 236 ||

**ವಾರ್ಧಕ**
ಇಂತು ವಿಪ್ರವ್ರಾತ ನೆರೆದೊಂದು ದೆಸೆಯೊಳಗೆ |
ಮಂತ್ರಿಮುಖ್ಯನಿಯೋಗಿ ಬಂಧುಜನರೊಂದೆಸೆಗೆ |
ತಂತಮಗೆ ವಶ್ಯತಿಲಕವನಿಟ್ಟು ಕುಳಿತಿರಲು ಪಂಕ್ತಿವಿಡಿದವನೀಶರು ||
ಸಂತೋಷವೆತ್ತು ಭೀಮಕನಾಜ್ಞೆಯಿಂದ ದಮ |
ಯಂತಿಯಂ ಕರೆದು ಮಂಗಲಮಜ್ಜನಂ ಗೆಯ್ಸಿ |
ದಂತಿಗಮನೆಯರಲಂಕರಿಸಿ ತೂರ್ಯತ್ರಯದ ವಿಭವದಿಂ ಕರೆತಂದರು || ೧ || 237 ||

**(ದಮಯಂತಿ ಪ್ರವೇಶ)**

**ಭಾಮಿನಿ**
ತರುಣಿಯರ ಗಡಣದಲಿ ಮನ್ಮಥ | ನರಗಿಣಿಯ ತೆರನಂತೆ ಬರುತಿಹ |
ಸರಸಿರುಹ ನೇತ್ರೆಯನು ಕಾಣುತ ಸಕಲಜನರುಗಳು || ೧ ||
ವಿರಹದಲಿ ಬಸವಳಿಯಲಿತ್ತಲು | ಸುರಪ ವರುಣಾದಿಗಳು ನಾಲ್ವರು |
ಧರಿಸಿ ನಳ ರೂಪವನು ನಿಂದಿರಲಾತನೆಡಬಲದಿ || ೨ || 239 ||

**ಮತ್ತೇಭವಿಕ್ರೀಡಿತವೃತ್ತ**
ಮನಮೆಚ್ಚಿರ್ದ ನಳಾಖ್ಯ ಭೂರಮಣನಂತಿರಲ್ಕೈವರಂ ಕಾಣುತಾ |
ತನುಚಿಂತಾಯುತೆಯಾಗಿ ಮುಂದೆ ಗತಿಯೇನೆಂದು ತಲೆವಾಗುತಂ |
ಮನತೋಷಾಸ್ಪದಗೆಟ್ಟು ನಿಂದಿರುವದಂ ಕಂಡಯ್ದಿ ವಾಗ್ದೇವಿ ತಾ |
ವನಿತಾರತ್ನವ ಸಾರಿದಳ್ ಪತಿಯ ಕುರುಹಿಂತೆಂಬುದಂ ತೋರುತಂ || ೧ || 240 ||

**ಕೇದಾರಗೌಳ - ಅಷ್ಟ**
ನಲ್ಲ ಕಾಣೆನು ನಿನ್ನ ಭಾವವ | ಸೂರೆ |
ಗೊಳ್ಳುವಾತನು ನಳ ನೋಡಿವ || ಪ ||
ಉಳಿದ ನಾಲ್ವರು ದಿಗಧೀಶರು | ಇಂದ್ರಾ |
ನಲ ಮಾರುತ ವರುಣಾದ್ಯರು ||
ನಳರೂಪವ ಧರಿಸಿರ್ಪರು | ನಿನ್ನ |
ಚೆಲ್ವ ಗುಣಕೆ ಮರುಳಾಗಿ ಬಂದರು || ೧ ||
ಎವೆಯಮುಚ್ಚರು ನೋಡೆ ಮಾನಿನಿ | ಮೈ |
ಬೆವರದು ಕೇಳಂಗನಾಮಣೀ ||
ಕುವಲಯ ಮೆಟ್ಟರು ಕಾಮಿನಿ | ಅನು |
ಭವವಿದ ನೋಡೆ ಪುಣ್ಯಾನುಸಾರಣಿ || ೨ ||
ಹಿಡಿದ ಪದುಮಪುಷ್ಪಮಾಲೆಯ | ನೋಡಿ |
ತೊಡಿಸೆಂದು ಮುಕುರಕಪೋಲೆಯ ||
ತಡವರಿಸುತ ಕುರುಳೋಳಿಯ | ಕರ |
ವಿಡಿದು ತೋರಿ ಮುದ್ದಿಸಿ ಗುಣಶೀಲೆಯ || ೩ || 243 ||

**ವಾರ್ಧಕ**
ವಾಣಿ ತೋರಿದ ಕುರುಹ ನೋಡಿ ಸಂತೋಷದಿಂ |
ಕ್ಷೋಣಿಪತಿ ನಳಗೆ ಪೂಮಾಲೆಯಂ ತೊಡಿಸಿದಳ್ |
ಪ್ರಾಣಕಾಂತೆಯ ಕರವ ಪಿಡಿದ ಸುಮೂಹೂರ್ತದೊಳ್ ವಾದ್ಯರವ ಮೊಳಗುತಿರಲು ||
ಕಾಣೆನುದ್ದಾಮ ಸಂಭ್ರಮಕೆ ಸರಿಯಿಲ್ಲ ಗೀ |
ರ್ವಾಣರೊಳ್ ಕಾಂಚನಾಭರಣ ದಾನಕೆ ಕಿಂಚಿ |
ದೂಣೆಯಂ ಪೊದ್ದದವನೀಸುರರ್ಗಿತ್ತು ಮನ್ನಿಸಿದ ಯಾಚಕತತಿಯನು || ೧ || 244 ||

**ಸಾವೇರಿ - ತ್ರಿವುಡೆ**
ಶರದಿಂದುಮುಖಿಯರೊಂದಾಗಿ ಮಂಟಪದಿ ಸು | ಸ್ವರದಿ ಶೋಭನವೆನ್ನುತ |
ಕರದಿ ಪಿಡಿದ ಮುತ್ತಿನಕ್ಷತೆಯನ್ನು ವಧೂ | ವರರ ಫಣೆಯೊಳಿಡುತ ||
ನೆರೆದವನಿಪರೊಳುತ್ತಮ ಪುರುಷಗೆ ತಕ್ಕ |
ತರುಣಿ ಶಭಾಸೆನ್ನುತ | ವೀಳ್ಯವನು ಕೊಡುತ ||
ಸ್ಮರನು ರತಿಸಹಿತಾಗಿ ಬಂದವ | ತರಿಸಿದರೊ ಸಹಜವು ಸುಧಾಕರ |
ವರ ನಳಗೆ ದಮಯಂತಿದೇವಿಗೆ | ಧರಣಿಯೊಳು ಸರಿಗಾಣೆವೆನ್ನುತ |
ಹರಳಿನಾರತಿಯ ಬೆಳಗಿರೆ | ಶೋಭಾನೆ || ೧ ||

ಮಂದಹಾಸದೊಳರೆಬಿರಿದ ಮಲ್ಲಿಗೆಯ ಪೂ | ವೆಂದು ತೋರುವ ಚೆಲ್ವಿನ |
ಕುಂದದ ಮೊಗ್ಗೆಯ ನಿಂದಿಸುವದು ನೋಡ | ಲಿಂದುಮುಖಿಯ ರದನ ||
ಸುಂದರಾಂಗಿಯ ತನು ಕಾಂತಿ ಕಾಂಚನಪ್ರಭೆ | ಯಂದವಾಗಿರುವದೇನ | ಬಣ್ಣಿಸುವೆನದ ನಾ ||
ಕುಂದು ಹೆಚ್ಚನು ಕಾಣೆ ಸತಿಪತಿ | ಗೆಂದಧಿಕ ತೋಷದಲಿ ಗುಣವನು |
ಮಂದಗಾಮಿನಿಯರು ಹೊಗಳುತೊಲ | ವಿಂದ ಮದುಮಕ್ಕಳನು ನೋಡುತ |
ಕುಂದಣದಾರತಿಯ ಬೆಳಗಿರೆ | ಶೋಭಾನೆ || ೨ ||
ಭಾಳಕೊಪ್ಪುವ ಚಂದ್ರರೇಖೆ ಕಾಮಿನಿಯ ಕ | ಪೋಲ ಕಾಮನ ಕನ್ನಡಿ |
ನೀಲಕುಂತಳದ ಬಣ್ಣವ ನೋಡಲಿನ್ನೇನು | ಕೇಳಿ ನಾಚುವದಾರಡಿ ||
ಕಾಳಸರ್ಪನ ಸಮವೇಣಿ ಕಟ್ಟಿದರೆ ವಿ | ಶಾಲನೇತ್ರೆಯ ಸೋಲ್ಮುಡಿ | ಸಟೆಯೆನ್ನಬೇಡಿ ||
ಸಾಲದೇ ಬಿಗಿಯಪ್ಪಿದರೆ ನಳಿ | ದೋಳಿನಲಿ ಕೈವಿಡಿದ ಪುರುಷಗೆ |
ಮೇಳವಿಸಿ ಚಿರಕಾಲ ಸುಖದಲಿ | ಬಾಳಿರಲಿ ದಂಪತಿಗಳೆನ್ನುತ |
ನೀಲದಾರತಿಯ ಬೆಳಗಿರೆ | ಶೋಭಾನೆ || ೩ || 247 ||

**ಕೇದಾರಗೌಳ - ಝಂಪೆ**
ಊಟಕೆಬ್ಬಿಸಿದರಾಗ | ಬುಧರ ಬೊ |
ಬ್ಬಾಟವೆನೆಂಬೆ ಬೇಗ ||
ಕೋಟಳೆಯು ಬಹಳ ನಿಮಗೆ | ಬೇಗೇಳಿ |
ಊಟವೇ ಮುಖ್ಯ ನಮಗೆ || ೧ ||
ಎಂದು ತಮ್ಮೊಳಗೆ ನುಡಿದು | ಕುಳಿತರಾ |
ನಂದದಲಿ ಪಂಕ್ತಿವಿಡಿದು ||
ತಂದಿಕ್ಕಿ ನಮಗೆ ತ್ವರಿತಾ ಆಲಸ್ಯ |
ವಿಂದು ರಾಜಿಸುವುದೆನುತ || ೨ ||
ಭೋಜನಕೆ ಘೃತ ಸೂಪವೇ | ಮುಖ್ಯವು ಮ |
ಹಾಜನಂಗಳಿಲ್ಲವೆ ||
ಈ ಜಿಡ್ಡು ತುಪ್ಪ ಬ್ಯಾಡೀ | ಪೊಸ ಕಾಸಿ |
ದಾಜ್ಯವನು ತಂದು ನೀಡಿ || ೩ ||
ಕಾಯ್ ಪಲ್ಯ ಸಾಕು ಇರಲಿ | ಖಜ್ಜಾಯ |
ಪಾಯಸವದೆಲ್ಲ ಬರಲಿ ||
ಆಯಸವೆ ಇಕ್ಕುವವರಿಗೆ | ಬರಿ ಥಂಭ |
ರಾಯ ಭವನದಲಿ ಹೀಗೆ || ೪ ||
ನೀರುಮಜ್ಜಿಗೆಯೊಲ್ಲೆವು | ಪಾಲ್ಮೊಸರ |
ಪೂರಯಿಸಿದರೆ ಉಂಬೆವು ||
ದಾರಿದ್ರ್ಯವಿಲ್ಲ ನೃಪಗೆ | ತಂದಿಕ್ಕ |
ದೂರು ಬರದಂತೆ ಕಡೆಗೆ || ೫ || 252 ||

**ವಾರ್ಧಕ**
ಭೂರಿ ಭೋಜನವಾಗೆ ಭೂಪಾಲರೆಲ್ಲರಿಗೆ |
ತಾರತಮ್ಯದೊಳವರ್ಗುಚಿತ ಉಡುಗೊರೆಯಿತ್ತು |
ಬೇರೆಬೇರವರನೆಲ್ಲರ ಕಳುಹಿಕೊಟ್ಟು ನಿಜ ತನುಜೆಯಹ ದಮಯಂತಿಗೆ ||
ವಾರಣಾಶ್ವ ಸುವಸ್ತು ಗೋಮಹಿಷ್ಯಾದಿಗಳ |
ನೋರಂತೆ ಬಳುವಳಿಯನಿತ್ತು ಮದುಮಕ್ಕಳಂ |
ಭೇರಿ ಕಹಳಾರವದ ಸಂಭ್ರಮದಿ ಕಳುಹಿಸಿದ ನೈಷಧನ ನಿಜ ನಗರಿಗೆ || ೧ || 253 ||

**ಭಾಮಿನಿ**
ಧರಣಿಪಾಲಾಗ್ರಣಿಯು ತನ್ನಯ | ತರುಣಿ ಸಹಿತಲೆ ನಳನೃಪಾಲನು |
ಭರದಿ ದಿಬ್ಬಣವೆರಸಿ ಪಯಣದ ಮೇಲೆ ಪಯಣದಲಿ ||
ಧರಿಸಿ ಶುಭಲಗ್ನವನು ಮಂಗಳ | ಕರದಿ ಪುರವನು ಹೊಗಲು ಇತ್ತಲು |
ಸುರಪ ವರುಣಾದಿಗಳ ಪಥದಲಿ ಕಂಡನಾ ಶನಿಯು || ೧ || 254 ||

**ಘಂಟಾರವ - ಅಷ್ಟ**
ಎಲ್ಲಿಂದ ನೀವ್ ಬಂದೀರಯ್ಯ ಇನಿಬರೊಂದು ಗೂಡಿ |
ಎಲ್ಲಿಗೆ ಮತ್ತೀಗ ಪಯಣ ಭರದೊಳು ಮಾತಾಡಿ ||
ತಲ್ಲಣವ ಕೊಳುತ ಮುಖದ ಕಾಂತಿ ಕಂದಿತ್ಯಾಕೆ |
ಎಲ್ಲೊ ಮಾನಹಾನಿಯಾಯಿತೆಂದು ತೋರ್ಪುದು ಮನಕೆ || ೧ ||
ಅರುಹಿ ನಮ್ಮೊಳು ಭಿನ್ನ ಭೇದವೆಂದಿಗಾದರಿಹುದೆ |
ಬರಿದೆ ನಾಚಿ ಗುಟ್ಟು ಮಾಡೆ ಘನವು ಹಿಂದಕೆ ಬಹುದೆ ||
ಹರ ಬ್ರಹ್ಮಾದಿಗಳಾಗಲಿಂದು ಪರರ ಸೇವೆ ಗೆಯ್ಸಿ |
ತಿರಿಸಿ ದಣಿಸಿ ಮರುಗಿಸುವೆನು ಭರಿತ ಸಂಪದ ತೊರೆಸಿ || ೨ ||

ತರಣಿಯಾತ್ಮಜನೆಂದ ನುಡಿಗೆ ಒರೆದನದಿತಿತನಯ |
ಧರೆಯೊಳ್ ಕುಂಡಿನಾನಗರದರಸು ಭೀಮರಾಯ ||
ಇರುವಳವಗೆ ಬಾಲೆಯೋರ್ವಳು ದಮಯಂತಿ ನಾಮದೊಳು |
ಸ್ಮರನು ರತಿಯು ಜೋಡಲ್ಪಾಕೆಗಿರುವ ಸೌಂದರ್ಯಗಳು || ೩ ||
ನಾನಾ ಪರಿಯೊಳ್ ಹೆಣಗಿದೆವು ನಮ್ಮ ನಾಲ್ವರೊಳಗೆ |
ಮಾನಿನೀಯ ತರಬೇಕೆಂದು ಬಯಲ ಭ್ರಾಂತಿಯೊಳಗೆ ||
ಜಾಣೆ ಬಹಳ ಧಿಕ್ಕರಿಸಿ ನಳನು ಎಂಬ ದೊರೆಗೆ |
ಸಾನುರಾಗದಿಂದ ಛಲದೊಳ್ ಮೆಚ್ಚಿ ಸೇರ್ದಳವಗೆ || ೪ ||
ಸೃಷ್ಟಿ ಮೂರರೊಳಗೆ ಇಲ್ಲ ನಳನ ಪೋಲ್ವರನ್ನು |
ತುಷ್ಟರಾಗಿ ಕೊಟ್ಟು ಬಂದೆವಭೀಷ್ಟ ವರಗಳನ್ನು ||
ಗುಟ್ಟಿದೀಗಲೆನಲು ಕೇಳಿ ಅಟ್ಟಹಾಸದಿಂದ |
ದಿಟ್ಟ ಶನಿಯು ಕೋಪವೇರಿ ಕಿಡಿಯನುಗುಳುತೆಂದ || ೫ || 259 ||

**ಕೇದಾರಗೌಳ - ಅಷ್ಟ**

ಕೇಳಲಾರೆ ನಾನು | ಈ ಮಹಿಮೆಯ | ಕೇಳಲಾರೆ ನಾನು || ಪ ||
ಸುರನರೋರಗಲೋಕದೊಳಗೆ | ದುರಂ |
ಧರರು ನೀವು ಮರ್ಯಾದೆಯೊಳಗೆ ||
ಮೆರೆವ ದಿಕ್ಪಾಲರೊಳತಿಶ್ರೇಷ್ಠರೆನಿಸಿ ಈ |
ಪರಿಯಿಂದ ನರಕನ್ಯೆಗೆ ಮರುಳಾಗಿ |
ತೆರಳಿ ತಿರುಕರ ಹಾಗೆ | ಪಲ್ಕಿರಿದರೆ |
ಪರಿಹಾಸ್ಯ ನೋಳ್ಪರಿಗೆ | ಚಂದಗಳಾಯ್ತು || ಕೇಳಲಾರೆ || ೧ ||
ಮನದೊಳಾಲೋಚಿಸಿಕೊಳದೆ | ಭ್ರಷ್ಟ |
ತನದ ಬುದ್ಧಿಗಳೊಳು ಬರಿದೆ ||
ಸನುಮತದಿಂದ ವರಗಳನಿತ್ತು | ವಿನಯದಿಂದ ನಳಗೆ |
ಮಾಡಿಸಿ ಬಂದೆ | ವೆನುತ ಪೇಳಲು ನಾಚಿಕೆ | ಯಾತಕಿಲ್ಲ |
ಬಿನುಗು ಮಾನವನಲ್ಲಿಗೆ | ಪೋಪರೆ ಹೀಗೆ || ಕೇಳಲಾರೆ || ೨ ||
ತೋರುವಿರೆಂತು ಈ ಮುಖವ | ನಿಮ್ಮ |
ನಾರಿಯರಿಗೆ ಪೊಕ್ಕು ಪುರವ | ಧೀರರಹುದು ಘನಕೀರ್ತಿಯ ಪಡೆದಿರಿ |
ಯಾರಿಂದ ಸಾಧ್ಯವಿದು | ಆದರೆ ಯನ್ನ | ಭಾರಿಪಂಥವ ಕೇಳ್ವುದು |
ನೈಷಧನೆಂಬ | ಧಾರಿಣಿಪನ ಹಿಡಿದು | ಈ ಕ್ಷಣದೊಳು || ಕೇಳಲಾರೆ || ೩ ||
ಆಳುವ ದೊರೆತನಗಳನು | ಮತ್ತೆ | ಮೇಲಾದ ಸಿರಿ ಸಕಲವನು ||
ಬೀಳು ಗೊಳಿಸಿ ದಂಪತಿಗಳ ಸಹ | ಲೀಲೆಯೊಳ್ ಕಳುಹುವೆನು |
ಈರ್ವರಿಗೊಂದು | ಶಾಲೆಯ ಮಾಡುವೆನು | ಶೌರ್ಯದ ಬಿಂಕ |
ದೇಳಿಗೆ ನಿಲಿಸುವೆನು | ನೋಡಿ ಬಗೆಯನ್ನು || ಕೇಳಲಾರೆ || ೪ || 263 ||

**ವಾರ್ಧಕ**

ಪೇಳಿ ಫಲವೇನೀಗ ಪೋದಮೇಲ್ ನಿಮ್ಮಂತೆ |
ಖೂಳತನದಲಿ ಬಹೆನೆ ಗೋಳುಗುಟ್ಟಿಸಿಯವರ |
ಕೀಳು ಜನರಲಿ ಸೇವೆಗೈಯ್ಸಿ ಬಾಳ್ ಹೊರೆವಂಗೆ ಮಾಡದಿರೆ ಕಲಿಯೆ ನಾನು ||
ಶೂಲಿಯಡ್ಡಯಿಸಿದರು ಬಿಡೆನೆನುತಲವದಿರಂ |
ಬೀಳುಗೊಟ್ಟಾಕ್ಷಣದಿ ನಡೆತಂದು ಸಾಧಿಸಿದ |
ನೇಳು ವತ್ಸರದಲ್ಲಿ ನಡೆವ ಸತ್ಯಕೆ ಇವಗೆ ಕಾಲಿಡಲ್ ತೀರದಿರಲು || ೧ || 264 ||

**ಭಾಮಿನಿ**

ಭರಿತ ಚಿಂತೆಯೊಳಿನಜ ನುಡಿದನು | ಹರಿಹರಾದ್ಯರ ಸರಕು ಮಾಡದೆ |
ವೊರಲಿಸುವನೀ ನೃಪನ ಹಿಡಿವುದಸಾಧ್ಯವಾದುದೆಲೆ ||
ಅರಿಯದೀತನ ಸತ್ಯಗುಣಗಳ | ಬರಿದೆ ನೆಣಗೊಬ್ಬಿನಲಿ ಭಾಷೆಯ |
ನೊರೆದು ಬಂದೆನು ಬಂದುದೆನ್ನಯ ಮಹಿಮೆಗಪಕೀರ್ತಿ || ೧ || 265 ||

**ಮಧ್ಯಮಾವತಿ - ಏಕ**

ಈ ರೀತಿಯಿಂದಲಿ ಶನಿಯು ಇರೆ ಯೋಚನೆಯಲಿ |
ಧೀರ ನಳನು ಇತ್ತ ರಮಣಿ ಸಹಿತಲಿ ||
ಭೂರಿಭಾಗ್ಯದೊಳಿರುತಿರುವ ಕಾಲದಲಿ |
ಮಾರರೂಪಿನೊಳೀರ್ವರ್ ಮಕ್ಕಳುದಿಸಲು || ೧ ||
ಅಂದವಾಗಿಹ ಪೆಸರಿಡಲು ತೋಷದಲಿ |
ಚಂದ್ರಸೇನನು ಚಂದ್ರಾನನೆಯೆಂದು ಮುದದಿ ||
ಅಂದು ಮಕ್ಕಳನು ಆನಂದಚಿತ್ತದೊಳು |
ಚಂದದಿಂ ಸಲಹುವ ಸಮಯಾಂತರದೊಳು || ೨ ||

ಬಂದುದು ಭೂಪಗಲ್ಲಾಚಮನಗಳು |
ನಂದದಿಂ ದ್ವಾರಮಂ ಪೊರಟು ಬೇಗದೊಳು ||
ನಿರದೆ ಶುದ್ಧಾಚಮನವ ಮಾಡಲ್ ಮರೆದು || ೩ ||
ಕುಡಿಯೆ ಜಲವನಂದು ತೃಷೆಯೊಳಾಕ್ಷಣದಿ |
ಕಡುಪಾಪಿ ಶನಿಯು ಕಾಣುತಲಾಗ ಭರದಿ ||
ತಡವಿಲ್ಲ ಎನಗಿದೇ ಸಮಯವೆಂದೆನುತ |
ಬಿಡದೆ ಹಿಡಿದ ತನ್ನಾಭೀಷ್ಟವಾಯ್ತೆನುತ || ೪ ||
ಅಷ್ಟ ಸಂಪದವೆಲ್ಲ ನಷ್ಟವಗೈಸಿ |
ತಟ್ಟನೆ ವನಕೆಯಟ್ಟಲುಪಾಯ ನೆನಸಿ ||
ಗುಟ್ಟಿನೊಳ್ ಘನವಿಪ್ರ ವೇಷವ ಧರಿಸಿ |
ದುಷ್ಟ ಪುಷ್ಕರನಲ್ಲಿಗೈತಂದ ಸಹಸಿ || ೫ || 270 ||

**(ಪುಷ್ಕರನ ಒಡ್ಡೋಲಗ)**

**ಗೋಪವನಿತೆ - ಮಟ್ಟೆ**
ಧರಣಿಯಮರನ | ಬರವ ಕಾಣುತ |
ಇರದೆ ಎದ್ದು ಪು | ಷ್ಕರನು ಎರಗುತ ||
ಭರದಿ ಕೇಳ್ದ ನೀ | ವೇನು ಕಾರ್ಯದಿ |
ತೆರಳಿ ಬಂದುದೀ | ಗರುಹಿ ಗಾಢದಿ || ೧ ||
ಆದರೆಲವೊ ನಾ | ಬಂದ ಹದನನು |
ಮೋದದಿಂದಲೆ | ಪೇಳ್ವೆನದರನು ||
ಭೇದವಿಲ್ಲದೆ | ಗ್ರಹಿಸು ಮನದಲಿ |
ವಾದಿಸದಿರೈ | ಮೂಢತನದಲಿ || ೨ ||
ದೃಢದೊಳೆಂದುದ | ನಡೆಸಲ್ ನಿನಗೆ ನಾ |
ಕೊಡುವೆ ಸಂಪದ ವೊಂದು ಗಳಿಗೆಗೆ ||
ತಡೆಯದೀಕ್ಷಣ | ಪೋಗಿ ನಳನಲಿ |
ಬಿಡದೆ ಪಗಡೆಯನಾಡೊ ಮುದದಲಿ || ೩ ||
ಗೆಲಿಸಿ ನಿನ್ನನು | ನಿಷಧ ರಾಜ್ಯವು |
ಒಲಿವ ತೆರದಲಿ | ಮಾಳ್ಪೆ ಯತ್ನವ ||
ಅಳುಕದಾತನ | ಸತಿಯ ಸಹಿತಲಿ |
ಕಳುಹು ಅಡವಿಗೆ | ತಿರಿದು ತಿನ್ನಲಿ || ೪ || 274 ||

**ಶಂಕರಾಭರಣ - ರೂಪಕ**
ಏನ ನುಡಿದೆಯೊ | ಎನ್ನೊ | ಳೇನ ನುಡಿದೆಯೊ || ಪ ||
ಏನ ನುಡಿದೆಯೆಲವೊ ಪಾಪಿ ಹೀನತನದಲಿ |
ನೀನು ಜನಿಸಬಹುದೆ ಈಗ ವಿಪ್ರಕುಲದಲಿ || ಅ ||
ಪ್ರಾಣಸಖನು ನೃಪತಿಯೆನಗೆ ಸರ್ವಬಗೆಯೊಳು |
ಕ್ಷೋಣಿಮೂರರಲ್ಲಿ ಉಂಟೆ ನಳನ ಪೋಲ್ವರು ||
ಜಾಣನಹುದೊ ಬಹುವಿವೇಕ ಮಾರ್ಗ ತೋರಿದೆ |
ಸಾನುರಾಗದಿಂದ ತೆರಳು ಮಾತನಾಡದೆ || ೧ ||
ಯಾರು ಯೆನುತ ತಿಳಿಯದಿಷ್ಟು ಕೊಬ್ಬಿ ಜರೆದೆಯಾ |
ಕ್ರೂರಶನಿಯು ಎನ್ನ ಹೊಡೆತ ಕೇಳಿಬಲ್ಲೆಯ ||
ಘೋರನೀಗ ನಾವು ಪೋಗಿ ಲತ್ತವಾಡುವ |
ಧಾರಿಣೀಶನನ್ನು ಬೇಗ ವನಕೆ ಅಟ್ಟುವ || ೨ ||
ಎನ್ನ ಮಾತ ನಡೆಸದಿರಲು ನಿನ್ನ ಸಿರಿಯನು |
ಮಣ್ಣು ತಿನಿಸಿ ಜೋಗಿಗಿಂತ ಕಡೆಯ ಮಾಳ್ಪೆನು ||
ಮುನ್ನ ಪೇಳು ನಿಶ್ಚಯಗಳ ತಡಗಳಾಹುದು |
ಇನ್ನು ಒಬ್ಬರಿಂದ ಕಾಂಬೆ ಲಕ್ಷ್ಯವೇನಿದು || ೩ || 277 ||

**ಭೈರವಿ - ಝಂಪೆ**
ನಾನಾ ಪ್ರಕಾರದೊಳು ತೋರಿಸುತ ಅಭಯವನು |
ಮಾನನಿಧಿ ಪುಷ್ಕರನ ಕರೆತಂದನಾಗ || ೧ ||
ಮೆರೆವಸಿಂಹಾಸನದಿ ಹಿಮಕರ ಕುಲೋದ್ಭವನು |
ಇರುತಿರ್ದನೇನೆಂಬೆ ಭರಿತ ಭಾಗ್ಯವನು || ೨ ||
ಆ ಸಮಯದಲಿ ಕಪಟಿ ಭೂಸುರನನೊಡಗೊಂಡು |
ಮೋಸಕಾರಿಯು ಬಂದ ನೈಷಧನ ಪುರಿಗೆ || ೩ ||
ಪರಿಕಿಸುತಲೀರ್ವರನು ಹರುಷದಿಂದುಪಚರಿಸೆ |
ಯೆರಗುತ್ತ ಪುಷ್ಕರನು ಒರೆದ ಭೂಪತಿಗೆ || ೪ ||

ಜೀಯ ಲಾಲಿಸು ಪಗಡೆ ಕಾಯಿಗಳನೀವಿಪ್ರ |
ಪ್ರೀಯದಿಂದೆನಗಿತ್ತ ಕೈಯ್ಯ ಕಾಣಿಕೆಯ || ೫ ||
ನೋಡಲತಿ ಸೌಂದರ್ಯಗೂಡಿಹುದು ನಿನ್ನೊಡನೆ |
ಆಡಬೇಕೆನುತೀಗ ಬಯಸಿ ಬಂದಿಹೆನು || ೬ || 283 ||

**ಭಾಮಿನಿ**
ಸತ್ಯಗುಣ ಸಾಧುಗಳು ಬಲ್ಲರೆ | ಕೃತ್ರಿಮದ ಬಹುರಾಜ್ಯಕಾರ್ಯವ |
ಪೃಥ್ವಿಪನು ನಸುನಗುತಲೆಂದನು ಮತ್ತೆ ಪುಷ್ಕರಗೆ ||
ಮಿತ್ರನಲ್ಲವೆ ನಿನ್ನ ವಾಕ್ಯಕೆ | ಹೊತ್ತು ಕಳೆವೆಯೆನುತ್ತ ನಡೆತಂ |
ದರ್ತಿಯಲಿ ಮಂಡಿಸಲು ಆಡಿದರಾಗ ತವಕದಲಿ || ೧ || 284 ||

**ತೋಡಿ - ಏಕ**
ಆಡಿದರು | ಪಗಡೆ | ಯಾಡಿದರು || ನೀವು |
ನೋಡಿರೆನುತಾ ಧರಣೀಸುರನ |
ಕೂಡಲೆ ಕುಳ್ಳಿರಿಸಿಕೊಂಡು || ಆಡಿದರು || ಪ ||
ಒಂದೆರಡು ಆಟದೊಳಗೆ | ಹೊಂದದಿರಲು ಜಯವು ನಮಗೆ |
ಬಂದುದು ಬಹು ಕ್ರೋಧ ಶನಿಯ ಮಹಿಮೆಯಿಂದಲಿ ||
ಇಂದು ಯೆನ್ನ ಗೆಲಿದ ಗರ್ವ | ಕುಂದಿಸುವೆನು ಹೂಡಿನ್ನೊಮ್ಮೆ |
ಎಂದು ನುಡಿಯಲು ಕೇಳಿ ತೋಷ | ದಿಂದ ಮತ್ತವನು ಪೇಳ್ದನು || ಆಡಿದರು || ೧ ||
ಬರಿದೆ ಇದರೊಳೇನು ಕಾರ್ಯ | ಇರಲು ನಿನಗೆ ಮನದೊಳ್ ಧೈರ್ಯ ||
ವೊರೆಯಬೇಕು ಜೂಜನೊಂದ | ತ್ವರಿತದಿಂದಲಿ || ಅರಸುಗಳ ನೀತಿಯಿದೆನಲು |
ಉರಿಯ ಸೂಸಿ ಪಂಥದೊಳಗೆ | ಕರಿ ರಥಾಶ್ವ ಸೈನ್ಯ ಸಹಿತ |
ಭರದೊಳೊಡ್ಡಿ ಕುಳಿತನಾಗ || ಆಡಿದರು || ೨ ||
ಭಾರಿ ಭೀತಿ ಮಗಲು ಯೆನುತ | ಹಾರಿ ಜೋಡುಕಟ್ಟಿತೆನುತ |
ಆರುಮೂರಕ್ಕೊಂದು ಯೆಂದು | ತೋರಿ ಹೊಡೆಯುತ ||
ಭೋರನೆ ಸೋಲಿಸಲು ಕಂಡು | ಭೂರಿ ಭಂಡಾರಗಳನೊಡ್ಡಲ್ |
ಕ್ರೂರ ಪಾಪಿ ಗೆಲಿದು ನುಡಿದ | ತೋರು ಇನ್ನೇನಿಹುದು ಯೆನುತ || ಆಡಿದರು || ೩ ||
ವಶವಿಲ್ಲದಾ ವರ್ಮಬೇರು | ತ್ರಸಮವೀರ ಹೂಂಕರಿಸಿ |
ನಿಷಧರಾಜ್ಯವೆಲ್ಲ ವತ್ತೆಯಿಡಲು ಲೆತ್ತದಿ ||
ಕುಶಲದಿಂದ ದುರುಳ ಗೆಲಲು | ಶಶಿಕುಲೇಶ ಬಿಡದೆ ಮತ್ತೆ |
ಎಸೆವ ಮೈಯಾಭರಣ ತೆರಲು | ವಶವ ಮಾಡಿಕೊಂಡನವನು || ಆಡಿದರು || ೪ || 288 ||

**ವಾರ್ಧಕ**
ವರಧೈರ್ಯವಡಗಿ ಯೋಚಿಸುತಿಪ್ಪ ಭೂವರನ |
ಪರಿಕಿಸುತ ಗರ್ವದಿಂದೊರೆದ ಪುಷ್ಕರನಾಗ |
ಶಿರವ ತಗ್ಗಿಸಿಕೊಂಡು ಧರಿಸಲೇತಕೆ ಮೌನ ತೆರಳು ವನಕತಿ ಶೀಘ್ರದಿ ||
ನೆರೆ ದ್ರೋಹಿ ನುಡಿಗೆ ಕೂರಸಿಯೊಡಲೊಳಾಡಿಸಿದ |
ತೆರನಾಗಲುಸುರಿದಂ ಮರುಳೆ ನಿನಗಂಜುವೆನೆ |
ತರುಣಿ ದಮಯಂತಿಯಿದಕಡಹು ಲೆತ್ತವನ್ನಾಕು ಪರಿಯನೀಕ್ಷಿಸು ಕಡೆಯಲಿ || ೧ || 289 ||

**ಭಾಮಿನಿ**
ಕೇಳುತೀ ವಾಕ್ಯವನು ಘನಸಭೆ | ಗೋಳುಗುಟ್ಟುತಲೆಂದರೆಲವೋ |
ಖೂಳ ನೀಚ ನಿವಾಳಿ ದುರ್ಮತಿ ಭಂಡ ಛೀ ಹೊಲೆಯ ||
ಏಳು ಏಳ್ ತೆಗೆ ನಿನ್ನ ಪಗಡೆಯ | ಕಾಳು ಮಾಡಿದೆ ಸತ್ಯವಂತನ |
ಸೀಳಿ ನಿನ್ನನು ಕರುಳನುಗಿವವರಿಲ್ಲವೇಯಕಟ || ೧ || 290 ||

**ಆನಂದಭೈರವಿ - ಏಕ**
ಎಂದು ಈ ಪರಿಯೊಳಗೆಲ್ಲರು | ಮನ |
ಬಂದಂತೆ ಬಯ್ದು ಭಂಗಿಸಿದರು |
ಅಂದಗೆಟ್ಟು ದುಷ್ಟನಿರಲಾಗ | ನಡೆ |
ತಂದ ನಳನ ಪುರೋಹಿತ ಬೇಗ || ೧ ||
ಎಸೆವ ತಾರಾವಳಿ ಮಧ್ಯದಿ | ಪೂರ್ಣ |
ಶಶಿಯು ಶೋಭಿಸುವಂತೆ ಚಂದದಿ |
ಬಿಸಜಗಂಧಿನಿಯರ ಸ್ತೋಮದಿ | ಇರೆ |
ಕುಶಲದೊಳ್ ದಮಯಂತಿ ಪೀಠದಿ || ೨ ||

ತ್ವರಿತದಿಂದಾಕೆಯ ಕಂಡನು | ಕಣ್ಣೊಳ್ |
ಸುರಿವ ಕಂಬನಿಯಿಂದ ನುಡಿದನು ||
ಪರಮವಲ್ಲಭೆ ಇತ್ತ ಕೇಳವ್ವ | ಈಗ |
ಒರೆಯಲಾರೆನು ಬಂದ ಮೋಸವ || ೩ ||
ಭ್ರಷ್ಟ ಪುಷ್ಕರನೊಳು ಜೂಜನು | ನಿನ್ನ |
ಪಟ್ಟದರಸನಾಡಿ ಸೋತನು ||
ಅಷ್ಟಭಾಗ್ಯಗಳೆಲ್ಲ ಕಳೆದನು | ಇನ್ನು |
ಗುಟ್ಟೇನು ನಿಮ್ಮನೊಡ್ಡುವ ತಾನು || ೪ ||
ಕುಲಪುರೋಹಿತನೆಂದ ವಾಕ್ಯವ | ಕೇಳ್ದು |
ಕಳವಳಿಸುತ ಬಹು ಕ್ಲೇಶವ ||
ತಳೆದು ಆ ಕ್ಷಣ ನಡೆತಂದಳು | ರಾಜ |
ಲಲನೆ ಪತಿಯ ಮುಂದೆ ನಿಂದಳು || ೫ || 295 ||

**ಕಾಂಭೋಜಿ - ಅಷ್ಟ**
ವಲ್ಲಭೆಯ ಕಾಣುತಾಗ | ಮಲ್ಲಸಹಸಿ ನಳನು ಅಕ್ಷಿ |
ಯಲ್ಲಿ ಜಲವ ಸೂಸುತೆಂದ | ತಲ್ಲಣಗೊಳುತ || ೧ ||
ಫುಲ್ಲನಯನೆ ಭೀಮರಾಯ | ನಲ್ಲಿ ಜನಿಸಿ ಬಯಸಿ ಎನ್ನ |
ನಿಲ್ಲದೆ ಸೇರ್ದುದಕೆ ಭವಣೆ | ಗೊಳ್ಳುವದಾಯ್ತು || ೨ ||
ಅರಿಯದಜ್ಞಾನಿಗಳ ತೆರದಿ | ಬರಿದೆ ಚಿಂತಿಸುವರೆ ವಾಣಿ |
ವರನು ಬರೆದ ಲಿಪಿಯ ಮೀರ | ಲಳವೇನೋ ಕಾಂತ || ೩ ||
ತರಣಿಕಿರಣ ಸೋಂಕಿ ಹೆಜ್ಜೆ | ಧರಣಿಯೊಳಿಟ್ಟವಳಲ್ಲ |
ತಿರುಗುವೆ ನೀನೆಂತು ಗಿರಿ | ತರುಗಳಡವಿಯ || ೪ ||
ಮೂರುಲೋಕದರಸುಗಳಿಗೆ | ರಾಜಚಕ್ರವರ್ತಿ ನೀನು |
ಮಾರರೂಪ ನಿನ್ನ ಕಷ್ಟ | ಕಿಂತ ತಾ ಮಿಗಿಲೆ || ೫ ||
ನಾರಿಕೇಳ್ ನೀನೊಂದು ನಿಮಿಷ | ಸೈರಿಸಿಹೆಯಾ ಹಸಿವು ತೃಷೆಯ |
ಕ್ರೂರಪಾಪಿ ಕೈಯಪಿಡಿದು | ಸೇರಿತೀ ಶ್ರಮವು || ೬ ||
ನರರು ನಮ್ಮ ಪಾಡೆ ಹಿಂದೆ | ಹರಗೆ ಅಜಕಪಾಲ ಹಿಡಿದು |
ತಿರಿಯಲಿಲ್ಲವೇನೈ ಜಗದಿ | ತೊರೆಸಿ ಭಾಗ್ಯವ || ೭ ||
ಇರಲಿರಾಜ್ಯವಾಳಿಕೊಂಡು | ಪರಮಸೌಖ್ಯದಿಂದಲವ |
ಸ್ಥಿರದ ಸತ್ಯವೊಂದೆ ಸಾಕು | ಎರೆಯ ಕೇಳ್ ನಮಗೆ || ೮ || 303 ||

**ಕಂದ**
ಈ ತೆರದಿಂ ದುಗುಡದೊಳಂ |
ಮಾತಾಡುತಿರಲ್ ದಂಪತಿಗಳ್ ತಮ್ಮೊಳಗಂ ||
ಪಾತಕಿ ಪುಷ್ಕರನೀಕ್ಷಿಸಿ |
ಖಾತಿಯೊಳಾ ನೃಪವರಂಗಿಂತೆಂದಂ || ೧ || 304 ||

**ಕಾಪಿ - ಅಷ್ಟ**
ಏನೆಲೊ ಧರಣೀಂದ್ರ ಯೆನ್ನೊಳು | ಆಡಿರ್ಪ ಭಾಷೆ |
ಕಾಣೆನಿಷ್ಟು ಹೊತ್ತು ತಡೆದರು ||
ಮಾನಿನಿಯೊಳೆಷ್ಟು ನೀನಾ | ಲೋಚನೆಯ ಮಾಡಿದರು |
ಕ್ಷೋಣಿ ಕೊಡೆನು ಯಾತಕನು |
ಮಾನವಿನ್ನು ಬೇಗ ತೆರಳು || ೧ ||
ಸತ್ಯವಂತನೆಂಬೆ ಬಾಯೊಳು | ನೀ ಬಿಟ್ಟು ಪೋಗ |
ಲತ್ತು ಸಾಯ್ವೆ ಯಾಕೆ ಮನದೊಳು ||
ಕ್ಷತ್ರಿವಂಶದಲ್ಲಿ ಹುಟ್ಟಿ | ಲೆತ್ತವಾಡಿ ಸೋತ ಮೇಲ್ ಕ್ಷಣ |
ಹೊತ್ತು ನಿಲ್ಲಬಹುದೆ ಇಲ್ಲಿ | ಧೂರ್ತ ನಿನಗೆ ನಾಚಿಕಿಲ್ಲವೆ || ೨ ||
ನೀತಿಯೊಳ್ ನಡೆ ಸಾರಿ ಪೇಳ್ವೆನು | ಊರಿಂದ ಹೊರಗೆ |
ದೂತರಿಂದ ನೂಕಿಸುವೆನು ||
ಯಾತಕೊ ಪರದೇಶಿಗಳಿಗೆ | ನೂತನಾಭರಣಂಗಳೀಗ |
ಮಾತನಾಡದಿಲ್ಲಿ ಯಿರಿಸು | ಏಕವಸ್ತ್ರ ಸಾಕು ನಿನಗೆ || ೩ || 307 ||

**ಕೇದಾರಗೌಳ - ಅಷ್ಟ**
ನಿಲದೆ ಲಾಲಿಸುತ ಕರ್ಕಶವಾದ ವಚನವ | ಬಲು ಚಿಂತೆಯಲಿ ಭೂಪನು ||
ಕಳಚಿ ವಸ್ತ್ರಾದಿ ಭೂಷಣವನವಗಿತ್ತು | ಧರಿಸಿ ಕೌಪೀನವನು || ೧ ||
ಭಾವೆಯುಟ್ಟಿಳು ಆರುಮೊಳದ ಸೀರೆಯ ತುಂಡ | ಜೀವೇಶನಾಜ್ಞೆಯೊಳು ||
ಕೇವಲ ಲಜ್ಜೆಯೊಳ್ ಶಿರವ ಬಾಗುತ ಅರ | ಮನೆಯಿಂದ ಪೊರಮಟ್ಟರು || ೨ ||

ವರಪುರೋಹಿತ ಮಂತ್ರಿಗಳು ಗಾಯಕ ಸೈನ್ಯ | ನಿವಹ ನಾಯಕವಾಡೆಯು |
ಪರಿವಾರದವರು ಮಾವುತ ನಾರಿಯರ್ ಸಹ | ಪುರಜನ ಗೋಳಿಟ್ಟರು || ೩ ||
ಸರ್ವಥಾ ಈ ಧರ್ಮಪ್ರಭುವ ಬಿಟ್ಟಿಲ್ಲಿ ನಿ | ರ್ವಹಿಸಲಾರೆವು ಎನ್ನುತ ||
ಉರ್ವಿಪಾಲನ ಬೆನ್ನ ಹಿಡಿದು ಗಮಿಸುತಿರೆ | ಸರ್ವರು ಶೋಕಿಸುತ || ೪ ||
ಸುರಿವ ಕಣ್ಣೀರಿನೊಳ್ ಮಿಡುಕುತ್ತಲೆಲ್ಲರ | ಕರೆದು ಪೇಳಿದ ನಳನೂ ||
ಬರಿದೆ ದುಃಖಿಸಲೇಕೆ ತೆರಳಿ ನಗರಕೀಗ | ಬಹೆ ಸ್ವಲ್ಪ ದಿನಕೆ ನಾನು || ೫ || 312 ||

**ವಾರ್ಧಕ**
ಅರೆಘಾವ ಪರಿಯಂತವೊಡಬಡಿಸುತಖಿಳರಂ |
ಒರೆದು ನೀತಿಯನಾಗ ಕರುಣದಿಂ ಬೀಳ್ಕೊಟ್ಟು |
ತರುಣಿ ಸಹಿತಲೆ ಹಿಂದೆ ತಿರುತಿರುಗಿ ಈಕ್ಷಿಸುತ ಚಿಂತೆಯಲಿ ಪೊರಮಟ್ಟರು ||
ಧರಣಿಪತಿಯಮಲ ಸರ್ವಾಂಗದೊಳ್ ವ್ಯಾಪಿಸಿದ |
ನುರುತರದಿ ಕ್ರೂರ ಶನಿ ಪೇಳಲೇನ್ ಭೂಪಕುಲ |
ಶರಧಿಚಂದ್ರಮನೊಳೊಂದಿನಿಸು ದಯೆದೋರದೆಯೆ ಸಾಧಿಸಿದ ಮತ್ಸರವನು || ೧ || 313 ||

**ಭಾಮಿನಿ**
ವನಜಸಖಸುತನಣುಗ ಕೇಳೈ | ಗುಣಶಿರೋಮಣಿಯಾದ ನಳನಿಗೆ |
ಜನಪರೆರಗುವ ಮಕುಟಕಣದುದ ಕೇಳು ನವರತುನ ||
ದಿನಕೆ ದಶಖಂಡುಗವು ನೆಲದೊಳ್ | ಮಣಿದು ತೋರ್ಪ ಸುಭಾಗ್ಯವೆಲ್ಲವು |
ಕ್ಷಣಕೆ ಹಾನಿಗಳಾಯ್ತು ಮುಂದಣ ಭವಣೆಯುಸಿರುವೆನು || ೧ || 314 ||

**ತೋಡಿ - ಅಷ್ಟ**
ತರಣಿಯ ಜಳದಿಂದ ಧರಣಿ ಕಾವೇರಲು |
ಉರಿಯೊಳ್ ಕಾಸಿದ ಕಾವಲಿಯ ತೆರನಂತೆ ||
ಸಿರಿಮುಖಿಗಳು ಕಂದಿ ಸುರಿಯೆ ಮೆಯ್ಯೊಳ್ ಬೆವರು |
ಚರಣವೊಡೆದು ರಕ್ತ ಹೊರಸೂಸುತಿರಲು || ೧ ||
ನೆಳಲ ಕಾಣದೆ ಬಸವಳಿದು ಹೆಜ್ಜೆಯನಿಡ |
ಲಳುಕುತಲಲ್ಲಲ್ಲಿ ಕುಳಿತು ಶೋಕಿಸುತ ||
ಬಲು ಹಸಿತೃಷೆಯೊಳು ಬಳುಕಿ ಬಾಯ್ಬಿಡುತಿಹ |
ಲಲನೆಯ ಕಂಡಾಗ ನುಡಿದ ನೈಷಧನು || ೨ ||
ಅರಸುಗಳೊಳಗತಿ ಭಾಗ್ಯನು ತವಪಿತ |
ಭರಿತಮೋಹದೊಳ್ ಸಾಕಿ ಎನಗೆ ಇತ್ತುದಕೆ ||
ದೊರಕಿತೆ ನಿನಗಿಂತ ವಿಧಿಯು ರಮಣಿ ಎನ್ನ |
ತೆರದ ಪಾಪಿಗಳುಂಟೆ ಧರಣಿ ಮೂರರೊಳು || ೩ ||
ಎರೆಯ ಲಾಲಿಸು ನಿನ್ನ ಸಿರಿಯ ಪೋಲುವರಾರು |
ಸುರನರೋರಗರೆಲ್ಲ ನಿರತ ಸೇವಕರು ||
ಬರಿ ಸುಖ ಬಯಸಲು ಸರಸಿಜಾಸನ ತಾನು |
ಬರೆದ ಕಷ್ಟವನನುಭವಿಸುವರಾರೈ || ೪ || 318 ||

**ಶಂಕರಾಭರಣ - ಏಕ**
ವ್ಯಥಿಸುತ್ತಲೀ ಪರಿಯೊಳುರ್ವಿಪತಿಯು ತನ್ನ ಸತಿಯು ಸಹಿತ |
ಪಥವ ನಡೆಯುತಿರಲು ಲಕ್ಷ್ಮೀಪತಿಯ ನೆನೆಯುತ || ೧ ||
ಬರುತ ಕಂಡರಾಗ ದೂರದೊಳಗೆ ಭರಿತ ವನವನೊಂದ |
ಹರುಷದಿಂದ ಸಾರ್ದರೀರ್ವರ್ ತಂಪಿನಾಸೆಗೆ || ೨ ||
ಬಹಳ ಕಾಲದಿಂದ ಅಲ್ಲಿ ಇಹನು ದೈತ್ಯನೋರ್ವ ಪೋಗಿ |
ಬಹರ ಬಾಧಿಸುತಲೆ ಶೂರ್ಪಜಿಹ್ವನೆಂಬವ || ೩ ||
ಹೊಡೆದುದವನ ನಾಸಿಕಕ್ಕೆ ನರರ ವಾಸನೆಗಳು ತ್ವರಿತ |
ಬಡುತ ಬಂದು ತಡೆದನಾಗ ಪೊಡವಿಪಾಲನ || ೪ ||
ಸರಸಿಜಾಕ್ಷಿಯವನ ಕಂಡು ಥರಥರಾನೆ ನಡುಗಿ ಭಯದಿ |
ವರನ ಹಿಂದೆ ನಿಲಲು ಹರನೆ ಸಲಹುಯೆನ್ನುತ || ೫ || 323 ||

**ಕಂದ**
ಉರುತರ ಭಯದಿಹ ಸತಿಯಂ |
ಭರದಿ ತಳ್ಕಿಸುತವಳೊಡನತಿ ಧೈರ್ಯಗಳಂ ||
ಒರೆಯುತಲಿರಲಾ ಸಮಯದೊ |
ಳುರಿ ಸೂಸುತ ಕಂಗಳೊಳಾ ಖಳ ತಾ ನುಡಿದಂ || ೧ || 324 ||

**ಸಾವೇರಿ - ಅಷ್ಟ**
ಯಾರೆಲೋ ಮನುಜ ನಿ ಬರಿದೆ | ವನ |
ಯಾರದೆಂಬುದನು ತಿಳಿಯದೆ ||
ಭೂರಿ ಸಲುಗೆಯಿಂದ ಪೊಕ್ಕ ಕಾರಣವೇನು |
ಚೋರತನದೊಳೆಲ್ಲಿಗೊಯ್ವೆ ಬಾಲಿಕೆಯನ್ನು || ೧ ||
ಕಳ್ಳನೆ ಹೊರತು ಸುಭಗನು | ಇರ |
ಬಲ್ಲನೆ ಕಾಡೊಳೋರುವನು ||
ಖುಲ್ಲ ನಮ್ಮಯ ತಳ್ಳಿ ಬಂದು ಸಾಯಲು ಬೇಡ |
ಒಳ್ಳೆ ಮಾತಿನ ಮೇಲೆ ಬಿಡು ಬೇಗ ಪಥವನು || ೨ ||
ತುಂಡು ತುಂಡಿಗೆ ನಿನ್ನ ಕಡಿದು ಎದೆ |
ಗುಂಡಿಗೆಯನು ಈಗ ಮುರಿದು ||
ಖಂಡ ಮಾಂಸವ ತುಪ್ಪದೊಳಗಿಟ್ಟು ತಾಳಿಸಿ |
ಉಂಡು ತೇಗುವೆನೆಂದು ಮಸೆಯೆ ಹಲ್ಲುಗಳನ್ನು || ೩ ||
ಸಿಕ್ಕಿದವರ ತಿಂದು ನಿನಗೆ | ಮದ |
ಸೊಕ್ಕಿಯೇರಿತು ಸವಿ ಬಾಯ್ಗೆ ||
ಕಕ್ಕಿಸುವೆನು ನಿಮಿಷದಿ ಖೂಳ ನಿಲ್ಲೆಂದು |
ಘಕ್ಕನೆ ತಿವಿಯೆ ರಕ್ಕಸನ ಮಸ್ತಕವನು || ೪ || 328 ||

**ಶಂಕರಾಭರಣ - ಮಟ್ಟೆ**
ಕರದ ಹತಿಗೆ ಸುರಿಯೆ ರಕುತ ಒಡೆದು ಫಣೆಯೊಳು |
ದುರುಳಗೇರೆ ರೌದ್ರ ಶಿಖಿಯು ಹರನ ತೆರದೊಳು ||
ಮುರಿದುಕೊಂಡು ಭಾರಿ ಮರನೊಳ್ ಹೊಡೆಯೆ ನೃಪನನು |
ಭರಿತಭುಜಬಲಾಢ್ಯನದರ ಕರದಿ ಪಿಡಿದನು || ೧ ||
ಹರಿಹರಾದ್ಯರೆನಗೆ ಪಾಡೆ ನೋಡು ನಿನ್ನನು |
ಕರುಳ ಬಗಿದು ಬ್ರಹ್ಮಲಿಪಿಯನೊರೆಸಿ ಬಿಡುವೆನು ||
ತರುಣಿ ಸಹಿತ ಚರಣಕೆರಗಿ ದೇಹಿಯೆಂದರು |
ಶಿರವ ಕಾಯ್ವೆನೆಂಬ ಭ್ರಾಂತಿ ಬೇಡ ತಿಳಿದಿರು || ೨ ||
ಗಳಹಲೇಕೊ ಕುನ್ನಿಯಂತೆ ಯೆನುತ ಕಾಲೊಳು |
ಬಲುಮೆಯಿಂದ ಒದೆದನಾಗ ನಳನು ಭರದೊಳು ||
ನೆಲಕೆ ರುಧಿರ ಕಾರಿಕೊಂಡು ದುಷ್ಟ ದೈತ್ಯನು |
ಚಳಕದಿಂದ ಸಾರಿ ಕಂಡ ಯಮನ ಪುರವನು || ೩ || 331 ||

**ಘಂಟಾರವ - ಅಷ್ಟ**
ಒರಗಿದಸುರನನ್ನು ಕಾಣುತ್ತ | ಸತಿ |
ಹರುಷದೊಳ್ ಕಾಂತನನಪ್ಪುತ ||
ನಿರದೆ ಕಾಂತಾರವ ದಾಟುತ್ತ | ಬಹು |
ಗಿರಿಗಳ ಹತ್ತಿ ಬಾಯಾರುತ್ತ || ೧ ||
ತಿರುಗುವ ಜನರನ್ನೆ ನೋಡಲು | ಜಲ |
ವಿರುವ ಠಾವನು ಬೆಸಗೊಳ್ಳಲು ||
ಪರಮಾಯಾಸದಿ ಮುಂದೆ ಸಾಗಲು | ದಿವ್ಯ |
ತರ ಸರೋವರ ಕಣ್ಗೆ ತೋರಲು || ೨ ||
ಬಡವಗೆ ಧನ ಸಿಕ್ಕಿದಂದದಿ | ತೋಷ |
ಬಡುತಲೀರ್ವರು ಘನ ಮೋಹದಿ ||
ಬಿಡದೆ ಮೈತೊಳೆಯಲು ಚಂದದಿ | ನೀರು |
ಕುಡಿದು ತೇಗಿದರು ಆನಂದದಿ || ೩ || 334 ||

**ಭಾಮಿನಿ**
ಫಲುಗುಣಾಗ್ರಜ ಕೇಳು ಪಟ್ಟದ | ಲಲನೆಯುಟ್ಟಿಹ ಸೀರೆ ಸೆರಗಿನ |
ತುದಿಯನಾ ನಳ ವುಡುತಲೊಣಗಿಸೆ ತನ್ನ ವಸನವನು ||
ನಿಲದೆ ರಣಹದ್ದೊಂದು ವೃಕ್ಷದಿ | ಕುಳಿತಿರಲು ಬಂದೆರಗಿ ವಸ್ತ್ರವ |
ಚಳಕದಿಂದಂಬರಕೆ ಒಯ್ಯುದು ಹಾರಿ ನಿಮಿಷದಲಿ || ೧ ||
ಪರಿಕಿಸುತ ಬಹು ಚಿಂತೆ ತಾಳ್ದತಿ | ಮರುಕದಿಂದಲೆ ವಿಧಿಯ ಮಹಿಮೆಗೆ |
ಶಿರವ ತೂಗುತ ಕುಳಿತರೊಂದ್ವಟಕುಜದ ನೆಳಲಿನಲಿ ||
ಒರೆಯಲಳವಲ್ಲ ವರ ಕಷ್ಟಕೆ | ಸರಿಯೆ ಕಾಣೆನು ಮೂರು ಲೋಕದಿ |
ದುರುಳ ಶನಿಯಿಂದಾಯ್ತಲಾಪೊಂದರಿವೆಯಿಬ್ಬರಿಗೆ || ೨ || 336 ||

**ಸೌರಾಷ್ಟ್ರ - ತ್ರಿವುಡೆ**
ಲಾಲಿಸುತ್ತೀ ವಚನ ಧರ್ಮಜ |
ನಾಲಿಯಲಿ ಜಲದುಂಬಿ ಮನದೊಳು |
ಬಾಳ ಸಂಕಟಗೊಳ್ಳುತಿರೆ ಮುನಿ | ಪಾಲ ನುಡಿದ || ೧ ||
ಭೂಲಲಾಮನೆ ನೀನು ಸುಮ್ಮನೆ |
ಗೋಳುಗುಟ್ಟಿದರೇನು ಫಲಗಳು |
ಪೇಳುವೆನು ಮುಂದವರು ಬವಣೆಯ | ತಾಳಿದುದನು || ೨ ||
ನಡೆನಡೆದು ದಣಿದುದಕೆ ಜಲವನು |
ಕುಡಿಯೆ ತಂಗಾಳಿಗಳು ಬೀಸಲು |
ಅಡಗಿ ತಾಪವು ತಂಪುಗೊಂಡುದು | ಒಡಲಿಗಂದು || ೩ ||
ಝುಡಿವ ಆವಳಿಕೆಯಲಿ ನಿದ್ರೆಯ |
ತೊಡಕು ಮುಸುಕಲು ಮಡದಿರನ್ನೆಗೆ |
ತಡೆಯಲಾರದೆ ಪವಡಿಸಿದಳಾ | ಪೊಡವಿಯೊಳಗೆ || ೪ ||
ತರತರದ ಶ್ವಾಸದಲಿ ಇತ್ತಣ |
ಸ್ಮರಣೆಯಿಲ್ಲದೆ ಸೊರಗಿ ಮಲಗಿರೆ |
ತರುಣಿಮುಖವೀಕ್ಷಿಸುತ ಗಲ್ಲದೊ | ಳಿರಿಸಿ ಕರವ || ೫ ||
ಸುರಿವ ಬೆವರನು ಒರೆಸುತಾಕೆಯ |
ತನುವ ತಡವರಿಸುತಲೆ ಹಿಂದಣ |
ಸಿರಿಯ ನೆನೆನೆನೆದಾಗ ಹಲುಬಿದ | ನರಸನಂದು || ೬ || 342 ||

**ನೀಲಾವರಿ - ಮಟ್ಟೆ**
ಹರನೆ ಮುಂದಿನ್ನಾವ ತೆರನಯ್ಯೊ ಕಷ್ಟದ |
ಶರಧಿಯೊಳ್ ಮುಳುಗಿದೆ ಒರೆಯಲಳವಲ್ಲ || ಪ ||
ಧುರದಿ ತ್ರೈಜಗವನೊಂದರೆನಿಮಿಷದಿ ಗೆಲ್ದೆ |
ಬಿರುದ ಪಡೆದೆ ಚಕ್ರವರ್ತಿಯೆಂದೆನುತ ||
ಉರು ಪರಾಕ್ರಮಿ ಸತ್ಯಶೀಲನೆನಿಸಿಕೊಂಡೆ |
ಸುರಪನ ಸಿರಿಯಿಂದ ಮಿಗಿಲಾಗಿ ಮೆರೆದೆ || ೧ ||
ಕೊನೆಗೆ ಈ ಭಾಗ್ಯವ ಉಣಲು ನಾ ಗುರಿಯಾದೆ |
ವನಿತಾಮಣಿಯ ಭಂಗ ಪರಿಕಿಸಲಾರೆ ||
ಇನನುರುಬೆಗೆ ತನು ಕಂದಿ ಕಪ್ಪಾದುದು |
ಹಸಿವಿಗೆ ನಾಭಿ ಕಳವಳಿಸುವುದು || ೨ ||
ದಿಟ್ಟನಾಗಿಹ ಭೀಮನೃಪತಿ ಮುದ್ದಿನೊಳು ಸಾಕಿ |
ಕೊಟ್ಟನೆನಗೆ ಮೋಹವಿಟ್ಟು ಸಲಹೆನುತ ||
ಇಷ್ಟು ಭಾಗ್ಯವ ಕಾಣಿಸಿದೆ ಮುಂದೆ ನಾನೆಂತು |
ಬಟ್ಟೇ ಹಿಡಿಯಲಯ್ಯೊ ತಟ್ಟಾದಳಲ್ಲ || ೩ ||
ಭರಿತ ವೈರಗಳಿಂದ ಫಣೆಯೊಳು ಬ್ರಹ್ಮನು |
ಬರೆದ ಕಾರಣ ಇನಿತಾದುದಲ್ಲದಡೆ ||
ನೆರೆ ಪಾಪಿಯಾದ ಪುಷ್ಕರನೆಲ್ಲಿ ನಾನೆಲ್ಲಿ |
ಅರೆಕಾಸಿನವ ಕೊಬ್ಬಿ ಸಿರಿಕೊಂಡನಲ್ಲ || ೪ || 346 ||

**ವಾರ್ಧಕ**
ಹಿಂದೆ ನಾ ಬಾಳ್ದ ಬಾಳುವೆಗಾರ ಮರೆಯೊಳಗೆ |
ಮುಂದೆ ನಾ ಜೀವಿಸುವೆನಿಂದುಮುಖಿ ಸತಿಯಳನು |
ತಂದು ಈ ಹಳುವದಲಿ ಅಂದನವಪಡಿಸುವದು ಅಂದವಲ್ಲಿದ ನೋಡಲು ||
ಇಂದಿಲ್ಲಿ ಬಿಟ್ಟು ಪೋಗುವೆ ಮನಕೆ ಬಂದವರ |
ಪೊಂದಿ ಬದುಕಲಿ ಈಕೆಯೆನುತ ನಿಶ್ಚಯಿಸುತಲೆ |
ಒಂದು ಗೇಣಿಗೆ ಸೀರೆ ಸೆರಗ ಖಂಡಿಸಿಕೊಂಡು ಚಂದ್ರವಂಶಜನುಟ್ಟನು || ೧ || 347 ||

**ಶರ ಚೌಪದಿ**
ಮಡದಿಯೆಚ್ಚರವಾಗದ ತೆರದಿಂ |
ತೊಡೆಯೊಳಗಿಹ ಶಿರ ಧರೆಗಿಡುತಂ ||
ತಡೆಯದೆ ಯೆದ್ದಾ ನೃಪ ಮೋಹಗಳಂ |
ಬಿಡಲಾರದೆ ಕಡು ಶೋಕಿಸಿದಂ || ೧ || 348 ||

**ನೀಲಾಂಬರಿ - ಆದಿ**
ಹೇಗೆ ಈ ಅಡವಿಯಲಿ | ಓರ್ವಳ ಬಿಟ್ಟು |
ಹೇಗೆ ಮುಂದಡಿಯಿಡಲಿ ||
ನಾಗವೇಣಿಯ ಸಂಗವ | ಮರೆದು ನಾನು |
ಹೇಗೆ ಪಿಡಿಯಲಿ ಜೀವವ || ೧ ||
ಪರಿಣಯವಾದ ಮೇಲೆ | ಅರೆಕ್ಷಣವಗಲಿ |
ಯಿರಲಿಲ್ಲ ನಮ್ಮೊಳಗೆ ||
ಪರಮ ಘಾತಕನಾಗಿ | ಇವಳನೆಂತು |
ತೊರೆದು ಪೋಪೆನು ಧೈರ್ಯದಿ || ೨ ||
ಇನಿತಾದುದೆಲ್ಲವನು | ಕೇಳ್ವರೆ ಈಕೆ |
ಜನನಿಜನಕರೆನ್ನನು ||
ಘನಪಾಪಿ ಭಂಡನೆಂದು | ಬೈದು ನಿಂದಿಸರೆ |
ಮನಕೆ ಬಂದಂತೆ ನೊಂದು || ೩ ||
ನಿಂದೆಗಾ ಜನರುಗಳು | ಕೈತಟ್ಟಿ ನಗು |
ವಂದವಾದುದು ಜಗದೊಳು ||
ಮಂದಭಾಗ್ಯನು ಬರಿದೆ | ಭೂಭಾರನಾಗಿ |
ಚಂದ್ರವಂಶದಿ ಪುಟ್ಟಿದೆ || ೪ ||
ವರಸಿಂಹನುದರದೊಳು | ಶ್ವಾನ ಪುಟ್ಟಿದ |
ತೆರನಾದುದೆನ್ನ ಬಾಳು ||
ಇರಲಾರೆ ಸರ್ವಥವು | ಶಿರವೆತ್ತಿಕೊಂಡು |
ಧರೆಯೊಳು ನಿಶ್ಚಯವು || ೫ || 353 ||

**ಭಾಮಿನಿ**
ಉರುತರದ ಹೆಮ್ಮಾರಿ ಬಾಯಿಗೆ | ಕುರಿಯ ಹರಸಿಟ್ಟಂತೆ ಕಷ್ಟದ |
ಗಿರಿಯ ಮಗುಚಿದನೆನ್ನಮೇಲ್ ಪುರಹರನು ನಿರ್ದಯದಿ ||
ಮರುಗಿ ಫಲವಿನ್ನೇನು ಆತನ | ಚರಣಕಿರಲೀ ಕೀರ್ತಿ ಸಕಲವು |
ತೆರಳುವೆನು ಸತಿಗೆಚ್ಚರಾದರೆ ಬಿಡಳು ತೊಡರಹುದು || ೧ || 354 ||

**ಸಾಂಗತ್ಯ - ರೂಪಕ**
ಇಳೆಯ ಪಾಲಕನಿಂತು ಹಲವು ಯೋಚನೆಯಿಂದ |
ಹಲುಬುತಲ್ಲಲ್ಲಿ ಮೂರ್ಛಿಸುತ |
ತಳುವದೆಯೆದ್ದು ಕಂದೆರೆದು ಮಾನಿನಿಯನ್ನು |
ನಿಲದೆ ಮತ್ತಾಗಲೀಕ್ಷಿಸುತ || ೧ ||
ಮಡದಿಯೆನ್ನಯ ಕೈಯ ಪಿಡಿದ ಕಾರಣವಿಷ್ಟು |
ಕಡು ಭಾಗ್ಯ ವುಂಡೆ ಸಾಕಿನ್ನು ||
ತಡೆಯದೆ ಯಾರನಾದರು ಸೇರಿ ನಿನ್ನಯ |
ಒಡಲ ರಕ್ಷಿಸಿಕೊ ಸಾರಿದೆನು || ೨ ||
ಹರಿದುದಿಂದಿಗೆ ತವ ಸಂಗದಾ ಸುಖವೆಂದು |
ತೆರಳಿದ ನಾಲ್ಕೆಂಟಡಿಯನು ||
ತೊರೆಯಲಾರದೆ ಮತ್ತೆ ತಿರುಗಿ ಬಂದಾಕ್ಷಣ |
ಮರಳಿ ಶೋಕಿಸುತ ಪೇಳಿದನು || ೩ ||
ಬಿಟ್ಟು ಪೋದನೊ ಯೆಂದು ತ್ಯಜಿಪಳೊ ಪ್ರಾಣವ |
ಕೆಟ್ಟ ಪಾತಕಿಯು ಯೆನ್ನುವಳೊ ||
ಭ್ರಷ್ಟ ದಾನವರು ಕೊಂಡೊಯ್ವರೊ ಹುಲಿ ಮುಖ್ಯ |
ದುಷ್ಟ ಮೃಗಗಳು ಭಕ್ಷಿಪವೊ || ೪ ||
ಏನಾದರಾಗಲಿ ಎನಗೆ ಪಾತಕವಿಲ್ಲ |
ಕ್ಷೋಣಿ ಮೂರರೊಳಿಲ್ಲದಂಥ ||
ನಾನಾ ಬವಣೆಯನ್ನು ಚಾಚಿ ನೋಡುತಲಿಹ |
ದಾನವಾರಿಯ ಪಾದಕೆಲ್ಲ || ೫ || 359 ||

**ಭಾಮಿನಿ**
ಸತಿಗುಣಗಳೊಂದೊಂದನೆಣಿಸುತ | ವ್ಯಥಿಸಿ ಮನದೊಳು ಕರಗಿ ಸುಯ್ಯುತ |
ಅತಿದೃಢದಿ ಪಥವಿಡಿದು ಸಾರುತ ಹಿಂದೆ ಪರಿಕಿಸುತ ||
ಜತೆಯನೆಂತಗಲುವೆನು ಯೆಂದಾ | ಕ್ಷಿತಿಯೊಳುರುಳುತ ಮೆಲ್ಲನೇಳುತ |
ರತಿವರನ ತೇಜಿತನು ನಡೆದನು ಶಿವನೆ ಸಲಹೆನುತ || ೧ || 360 ||

**ಶಂಕರಾಭರಣ - ತ್ರಿವುಡೆ**
ಧಾರಿಣೀಪತಿಯಿತ್ತ ಪೋಗಲು | ನಾರಿಮಣಿ ದಮಯಂತಿಗೆಚ್ಚರ |
ದೋರಿ ಮೈಮುರಿದೆದ್ದು ಕುಳಿತಳು | ಘೋರನಂದು || ೧ ||
ಅಷ್ಟ ದಿಕ್ಕನು ನೋಡಿ ತನ್ನಯ | ಪಟ್ಟದರಸನ ಕಾಣದಿರೆ ಕಂ |
ಗೆಟ್ಟು ಹುಡುಕಿದಳಾಗ ಲಡವಿಯೊಳ್ | ಸುತ್ತಿ ಬಳಲಿ || ೨ ||
ಉರಿಯ ಸೋಂಕಿದ ತಾವರೆಯವೋಲ್ | ಸಿರಿಮೊಗದ ಕಲೆಯಡಗಿ ವಸುಧೆಗೆ |
ತಿರುಗಿ ಬಿದ್ದೊರಲಿದಳು ಕಲ್ಮರ ಕರಗುವಂತೆ || ೩ || 363 ||

**ನೀಲಾಂಬರಿ - ಏಕ**
ಎಲ್ಲಿಗೆ ಪೋದೆಯೊ ಎನ್ನ | ವಲ್ಲಭ ಸದ್ಗುಣರನ್ನ ||
ನಿಲ್ಲದೆ ಕಾಣದೆ ಹರಣ | ಎಳ್ಳನಿತಿಲ್ಲವೆ ಕರುಣ || ೧ ||
ನೀತಿಯ ಶಾಸ್ತ್ರಗಳಲ್ಲಿ | ಖ್ಯಾತನು ಮೂಲೋಕದಲಿ ||
ಪಾತಕಕಂಜದೆ ಹೀಗೆ | ಘಾತಕವೃತ್ತಿಗಳೊಳಗೆ || ೨ ||
ಹಳುವದಳೋರ್ವಳ ಬಿಟ್ಟು | ಅಳುಕದೆ ಮೋಸವ ಕೊಟ್ಟು ||
ತಳುವದೆ ನೀ ತೆರಳಿದೆಯಾ | ಮಲಗಿದ ವೇಳ್ಯದಿ ಪ್ರೀಯ || ೩ ||
ತಂದೆತಾಯಿಗಳ ತ್ಯಜಿಸಿ | ಒಂದೆ ಬುದ್ಧಿಯೊಳು ಬಯಸಿ ||
ಹೊಂದಿದಳೆಂಬುದು ಮನಕೆ | ಇಂದು ತೋರದೆ ಹೋಯ್ತೆ || ೪ ||
ಕೆಟ್ಟ ಜೂಜನು ಆಡಿ | ಭ್ರಷ್ಟಗೆ ರಾಜ್ಯವ ನೀಡಿ ||
ಕಷ್ಟವ ತಾಳ್ದರು ಮುನ್ನ | ಬಿಟ್ಟಿರಲಾರೆನು ನಿನ್ನ || ೫ ||
ಚರಣವೆ ಸಂಪದವೆಂದು | ಇರುತಿರೆ ಪೇಳಿದೆಯಿಂದು ||
ತೆರಳಲು ಕಾರಣವೇನು | ಅರುಹದೆ ತಪ್ಪುಗಳನ್ನು || ೬ || 369 ||

**ವಾರ್ಧಕ**
ಕರಿಯು ಸಿಂಹನ ಮೇಲೆ ಮನವಿಟ್ಟ ತೆರನಂತೆ |
ಉರಗ ಗರುಡನ ಭೋಗವನು ಬಯಸಿಕೊಂಡಂತೆ |
ಮೆರೆವ ವ್ಯಾಘ್ರನ ಮರೆಯ ಎಳೆಗರುವು ಪೊಕ್ಕಂತೆ ವರ ಮೂಷಿಕನು ಬೆಕ್ಕಿನ ||
ಚರಣಸೇವೆಯ ಗೆಯ್ದು ನೀನೆ ಗತಿಯೆಂದಂತೆ |
ಉರಿಮಾರಿ ಕೈಗೆ ಶಿಶುಗಳ ಸಾಕಲಿತ್ತಂತ |
ತೆರನಾದುದೆನ್ನ ಬಾಳುವೆಯಿವನೆ ಪತಿಯೆಂದು ಮರುಳಾಗಿ ಸೇರಿದುದಕೆ || ೧ || 370 ||

**ಭಾಮಿನಿ**
ಎಲೆ ಧರಾಧಿಪ ಲಾಲಿಸೀಪರಿ | ಲಲನೆ ಬಹುವಿಧದಿಂದ ಹಲುಬುತ |
ಇಳೆಗೆ ಮೂರ್ಛಿತಳಾಗೆಯೊಂದಜಗರನು ಅದುಭುತದಿ ||
ಬಿಲದ ಬಾಯಿಯ ತೆರೆದು ಈಕೆಯ | ಬಳಿಗೆ ಬಂದಾ ಕ್ಷಣದಿ ಪಾದವ |
ನೊಲಿದು ನುಂಗುತಲಿರಲು ಕಣ್ದೆರೆದಾಗ ಕೂಗಿದಳು || ೧ || 371 ||

**ಘಂಟಾರವ - ಏಕ**
ಬಿಡದೆ ಎನ್ನನು ಕರೆತಂದು | ಘೋ |
ರಡವಿಗೆ ಒಪ್ಪಿಸಿಯಿಂದು ||
ನಡೆದನು ಪತಿ ಕಲ್ಮನದಿ | ಮೃತ್ಯು |
ಹಿಡಿದಂದದೊಳಾರ್ಭಟಿಸಿ || ೧ ||
ದುಷ್ಟಜಗರ ನುಂಗುವುದು | ಪ್ರಾಣ |
ತುಟ್ಟ ತುದಿಗೆ ಬಂದಿಹುದು ||
ಕೆಟ್ಟೆನು ಶಿವ ಶಿವ ಮುಂದೆ | ದಯ |
ವಿಟ್ಟು ಸಲಹಬೇಕು ತಂದೆ || ೨ ||
ಜನಿಸಿದೆ ಭೀಮರಾಯನಿಗೆ | ಸತಿ |
ಯೆನಿಸಿಕೊಂಡೆ ನಳ ನೃಪಗೆ ||
ಇನಿತು ಭಾಗ್ಯಗಳೆಲ್ಲ ತೆತ್ತು | ದುರ್ |
ಮರಣಕ್ಕೆ ಬಂದಿಹ ಹೊತ್ತು || ೩ || 374 ||

**ಕೇದಾರಗೌಳ - ಅಷ್ಟ**
ನಳಿನಲೋಚನೆ ಯೀ ಪರಿಯಲಿ ವೇದನೆ | ಗೊಳುತಿಹ ಸಮಯದೊಳು ||
ಹಳುವದೊಳೋರ್ವ ಕಟ್ಟಾಳನೆನುವ ಘನ | ವ್ಯಾಧನು ಬೇಟೆಯೊಳು || ೧ ||
ತಿರುಗುತಲಿರೆ ಕೇಳಿಸಿತತಿ ರೋದನ | ದುರುಳನ ಕರ್ಣದಲಿ ||
ಅರರೆತ್ತಣ ಧ್ವನಿಯೆಂದಾಲಿಸಿ ಬೇಗ | ತೆರಳಿದ ವಹಿಲದಲಿ || ೨ ||
ನೋಡಿದನೀ ಬಗೆಯಲ್ಲವನಾಕ್ಷಣ | ಹೂಡಿದ ಬಾಣವನು ||
ಕೂಡಲೆ ಸೀಳ್ದಾಗಬಲೆಯ ಬಂಧನ | ಗಾಢದಿ ಬಿಡಿಸಿದನು || ೩ ||

ಉರುತರ ಚೆಲ್ವಿಕೆ ಪರಿಕಿಸಿ ಮನ್ಮಥ | ಶರದಲಿ ಬಸವಳಿದು ||
ಅರಿಯದೆ ಪರಮಪತಿವ್ರತೆಯೆಂಬುದ | ನೊರೆದನು ಮೇಲ್ವರಿದು || ೪ || 378 ||

**ಕೋರೆ - ಏಕ**
ಯಾರೆಲೆ ಹುಡ್ಗಿ ನೀನು | ಯಾರು ಐದಾರೆ ಇನ್ನು ||
ಯಾರ ಸಂಗಾತ ನೀ ಬಂದೆ | ಯೀತಾವ ಬರಿದೆ || ೧ ||
ಚದುರೆ ನಿನ್ನಪ್ಪನ್ಯಾರೆ | ಇದಕೋ ಮೋರೆಯ ತೋರೆ ||
ಮದುವೆಯಾಗಯ್ತೊ ಯಿಲ್ವೊ | ಪೇಳೀಗ ಭಾಮೆ || ೨ ||
ಲಿಂಬೆಯ ಹಣ್ಣಿನಂತೆ | ತುಂಬಿದ ಮೈಯಾನೆ ಹುಡುಗಿ |
ಹಂಬಲ ಬಿತ್ತಲೆ ನಿನಮ್ಯಾಗೆ || ೩ ||
ಇನ್ನು ಕರ್ಕರೆ ಬೀಡ್ತಿ | ಯೆನ್ನಾ ಸಂಗಾತ ಬಾರ್ಮೆ ||
ನಿನ್ನ ಸಂತಸ ಬಡಿಸುವೆ | ಅಗಲಾದೆಯಿರದೆ || ೪ ||
ಪ್ರಾಣ ಕಾದವ ನಾನು | ಜಾಣೆ ಚಂಚಲವೇನು ||
ಯೇನನೆಂದರು ಬಿಡೆನೀಗ | ಏಳ್ ಏಳ್ ಬೇಗ || ೫ ||
ಕತ್ತಲೆಯಾಗುತಯ್ತೆ | ಮತ್ತೆ ಹಸಿವಾಗುತಯ್ತೆ ||
ಹೊತ್ತು ಕಳೆಯದೆ ಬಿರ್ರನೆ | ಬರ್ಬಾರದೇನೆ || ೬ ||
ಮಾರನಲಗು ತಗಲೆ | ಗಾರುಗೆಟ್ಟೆನು ಅಬಲೆ ||
ನಾರಿ ನಿನ್ನಾಣೆ ಸಟೆಯಲ್ಲ | ಮರುಳಾದೆನಲ್ಲ || ೭ || 385 ||

**ಶಂಕರಾಭರಣ - ತ್ರಿವುಡೆ**
ಕೇಳು ವ್ಯಾಧನೆ ನೀತಿಮಾರ್ಗವ | ಪುವುಥ ನೀನು ಜೀವವ ||
ಪಾಲಿಸಿದೆ ಬಹು ಕರುಣದಿಂದನು | ಮಾನವೇನು || ೧ ||
ಕಾಕಪೋಕರು ನುಡಿವ ನುಡಿಗಳು | ತರವೆ ನಿನಗೆ ಮನದ ವಿ |
ವೇಕವನು ತಿಳಿದೀಗ ಸುಮ್ಮನೆ | ತೆರಳು ಮನೆಗೆ || ೨ ||
ಭ್ರಷ್ಟ ಬುದ್ಧಿಗೆ ಸಿಕ್ಕಿ ವ್ಯರ್ಥದಿ | ಕೆಡಲು ಬೇಡ ಈಶ್ವರ ||
ಕೊಟ್ಟುದನು ನೀನುಂಡು ಬಾಳ್ವುದು | ಸಹಜ ನೋಡಾ || ೩ ||
ಪರರ ಸತಿಯಲಿ ಮನವನಿಟ್ಟಾ ಆ | ಕ್ಷಣದೊಳವಗೆ ಮರಣವು ||
ದೊರಕುವುದು ನಿಶ್ಚಯವು ಹೊರಳುವ | ನರಕದೊಳಗೆ || ೪ ||
ಕಡು ಕಠೋರದ ವಾಕ್ಯವಾಡಿದೆ | ಕೊಬ್ಬಿನಿಂದಾ ಸೈರಿಸಿ ||
ತಡೆದೆ ರಕ್ಷಿಸಿದಾತನೆಂಬೀ | ಸತ್ಯದಿಂದ || ೫ || 390 ||

**ಕೋರೆ - ಏಕ**
ಏನ್ಮಂ ಪೋರಿ ಜಾಣ್ಮೆಯಿಂದ |
ಯೆನ್ನೊಳು ಗಮಜಾಲ್ ಮಾಡ್ತಿದಿ ||
ಶಾನೆ ಮಾತುಗಳನಾಡಿ ಹೀನಾ ಲತ್ತೆಯ ತಿಂದು |
ಶ್ವಾನನಂದದಿ ಕಡೆಗೆ ಬರುತಿದ್ದಿ || ೧ ||
ಚೂತಮರಕೆ ಪುರಾಣವ ಪೇಳ್ವರೆ |
ಭೂತಳದಲಿ ಹಣ್ಣು ಬೀಳ್ವದೇನೆ ||
ಯಾತಕೆ ನಿನ್ನಲಿ ದೇಹಿ ಯೆನ್ನಲಿಯೆಂದು |
ಪಾತಕಿ ಹಿಡಿದು ಯೆಳದಾ ಮುಟ್ಟಿ ತಾನೆ || ೨ ||
ನಾರಿಮಣಿಯು ಅದರ ಸೈರಿಸಲಾರದೆ |
ಕ್ರೂರದೃಷ್ಟಿಯೊಳವನ ನೋಡಲ್ಕಂಡು ||
ಭೂರಿತಾಪದಿ ಸುಟ್ಟು ಬೂದಿಯಾಗಲ್ ಯಮನ |
ಚಾರರ್ ವೊಯ್ದರ್ ನಲಿವುತಲಂದು || ೩ || 393 ||

**ಕಂದ**
ಈ ತೆರದಿಂದವನಳಿಯಲ್ |
ಕಡುಭೀತಿಗಳಿಂದ ಮಾನಿನಿ ಬೆದರುತ್ತಂ ||
ಭೂತಾಧಿಪ ನೀ ಗತಿಯೆನು |
ತಾ ಸತಿಯು ಮಗುಳೆಂದಳತಿ ದುಗುಡದೊಳಂ || ೧ || 394 ||

**ಕಾಂಭೋಜಿ - ಝಂಪೆ**
ಎದೆಗಟ್ಟು ನಾನಿಲ್ಲಿ ಕುಳಿತೆನಾದರೆ ಹಿಗೆ |
ವಿಧವಿಧದ ಕಷ್ಟಗಳು ಬಹುದು ||
ಒದಗಿನಿಂದೊಂದು ಘನಮಾರ್ಗವಿಡಿದಯ್ದುವೆನು |
ತುದಿಗೆ ವಿಧಿ ಬರದಂತೆ ಯಹುದು || ೧ ||

ಎಂದು ಈ ಪರಿಯೊಳಗೆ ನಿರ್ಣಯಂ ಗೆಯ್ದು ನಡೆ |
ತಂದಳಾರಣ್ಯವನು ಕಳೆದು ||
ಅಂದವಾಗಿಹ ರಾಜ್ಯಪಥವು ಕಾಣಿಸೆ ಕಣ್ಗೆ |
ಚಂದ್ರಮುಖಿ ಧೈರ್ಯ ತಾಳಿದಳು || ೨ ||
ಅನಿತರೊಳ್ ಪರಿಪರಿಯ ವ್ಯಾಪಾರದೇರುಗಳ |
ವಿನಯದಿಂ ಕೊಂಡು ವಾಣಿಜ್ಯ ||
ಘನತೆಯಿಂ ಬರುತಿರಲು ವನಜಾಕ್ಷಿ ಇರಲಲ್ಲಿ |
ಅನುನಯದಿ ಕಂಡು ಕೇಳಿದರು || ೩ || 397 ||

**ಮುಖಾರಿ - ಆದಿ**
ಯಾರಮ್ಮ | ನೀನು | ಯಾರಮ್ಮ ||
ಯಾರಮ್ಮ ನೀನು ಈ ನಡುದಾರಿಯೊಳಗೆ |
ಓರ್ವಳೆ ಕುಳಿತು ದುಃಖಿಪೆಯೇಕೆ ಹೀಗೆ || ಯಾರಮ್ಮ || ೧ ||
ತಂದೆ ತಾಯಿಗಳಾರು ಪುರವಾವುದವ್ವ |
ಇಂದು ನಿನ್ನಯ ಗಂಡನ್ಯಾವಲ್ಲಿ ಇರುವ ||
ಸಂದೇಹಗೊಳದಿರು ಧೀರಳಾಗಿನ್ನು |
ಚಂದದೊಳುಸಿರೆಲ್ಲ ವೃತ್ತಾಂತವನ್ನು || ೨ ||
ಪರಮ ಮಂಗಲೆ ಸಿರಿಯಂತಿಹೆಯಲ್ಲ |
ದೊರೆವಧುವಲ್ಲದೆ ಬೇರೆ ನೀನಲ್ಲ ||
ಬರಲು ಕಾರಣವೇನು ಆಯಾಸವೆಲ್ಲ |
ಅರುಹು ವಂಚಿಸಬೇಡ ನಂಬಿಕೊ ಸೊಲ್ಲ || ೩ || 400 ||

**ಕೇದಾರಗೌಳ - ಅಷ್ಟ**
ವರ್ತಕಾಧಿಪರು ಲಾಲಿಸಿ ಕಷ್ಟಗಳನು |
ಧೂರ್ತ ಪುಷ್ಕರ ನಳ ಚಕ್ರವರ್ತಿಯನು ||
ಲೆತ್ತವನಾಡಿ ಸೋಲಿಸೆ ಸಕಲವನು |
ತೆತ್ತು ಕಾನನಕಯ್ದ ಸತಿಸಹಿತವನು || ೧ ||
ಸೇರಿಕೊಂಡಿರ್ದೆವು ಸತ್ಯವರ್ಧನನ |
ಈ ರೀತಿಯಾಗೆ ದುಃಖಿಸುತೆನ್ನ ರಮಣ ||
ಆ ರಾಜ್ಯದಿಂದ ಹೊರವಂಟು ಬಂದಲ್ಲಿ |
ನೀರು ಕುಡಿದು ಮಲಗಿರ್ದೆ ನಿದ್ರೆಯಲಿ || ೨ ||
ಏನು ತೋರಿತೊ ಕಾಣೆ ಮೋಸವ ಕೊಟ್ಟು |
ಕಾಣದಂದದಿ ಪೋದನೆನ್ನನೆ ಬಿಟ್ಟು ||
ಮಾನಪ್ರಾಣಗಳೆರಡುಳುಹುವಂದವನು |
ಕಾಣಿಸಬೇಕು ಕೈ ಮುಗಿದು ಬೇಡುವೆನು || ೩ || 403 ||

**ಭಾಮಿನಿ**
ಯಾತಕಳಲುವೆ ತಾಯೆ ಸೈರಿಸು | ಘಾತಕರು ನಾವಲ್ಲ ಘನ ವಿ |
ಖ್ಯಾತವಾಗಿಹ ಚೈದ್ಯನಗರವು ಯಿದೆ ಸಮೀಪದಲಿ ||
ಪ್ರೀತಿಯಲಿ ಕೊಂಡೊಯ್ದು ಬಿಡುವೆವು | ಭೂತನಾಥನ ಸಾಕ್ಷಿ ನಂಬಿಕೊ |
ಮಾತನೆಂದಾಕೆಯನು ಕರೆತರಲಾಗಲಿನ ಮುಳುಗೆ || ೧ || 404 ||

**ಸೌರಾಷ್ಟ್ರ – ತ್ರಿವುಡೆ**
ನೋಡಿ ಸಂಜೆಗಳಾದ ಪರಿಯನು |
ಗಾಢದಿಂದಲೆ ಹೊಡೆದು ಡೇರೆಯ |
ಮಾಡಿ ಭೋಜನ ಮಲಗೆ ಸಂತಸ | ಮೋಡಿಯಿಂದ || ೧ ||
ಕಾಡೊಳಿಹ ಮದಗಜಗಳೆಲ್ಲವು |
ಕೂಡಿ ಸಮರಾತ್ರೆಯಲಿ ಬಂದಾ |
ಬೀಡಿಕೆಯ ಮುರಿದೊತ್ತಿ ಜನರನು | ಗಾರುಗೆಡಿಸೆ || ೨ ||
ಅರರೆಯೇನಿದುಯೆನುತ ಸರ್ವರು |
ಭರದೊಳೆದ್ದಾ ಕ್ಷಣದಿ ಮುತ್ತಿದ |
ಕರಿಗಳನು ಕಂಡಾಗಲಾಯುಧ | ಧರಿಸುತಿವರು || ೩ ||
ಉರುಬುತಿರೆ ಮದವೇರಿ ಸುಂಡಿಲ |
ತಿರುಗಿಸುತ ಮರಕಲ್ಗಳಿಂದಲೆ |
ಬೆರಬೆರಸಿ ಹೊಯ್ಯಾಗ ಸೀಳ್ದವು | ಭರಿತಬಲರ || ೪ ||
ಹರಿಯದೆಮ್ಮೊಳಗಿನ್ನು ದೇಹವ |
ತೆರುವ ಕಾಲವು ಬಂದುದೆನುತಲಿ |
ಇರದೆ ನಾಲ್ದೆಸೆಗೋಡುತಿರಲಾ | ಭಯದೊಳಂದು || ೫ ||

ಪರಿಕಿಸುತಲೀ ವೈಶ್ಯಜನರಿಗೆ |
ಅರಸನಾಗಿಹ ಹೇಮಪಾಲನು |
ಮರುಕದಿಂದಲೆ ಕರೆದು ಬಾಲೆಯ | ನೊರೆದನಂದು || ೬ || 410 ||

**ಸಾವೇರಿ - ಅಷ್ಟ**
ವರ ಪತಿವ್ರತೆ ಕೇಳಮ್ಮ | ನಂಬಿಸಿ ನಾವು |
ಕರೆತಂದು ವ್ಯರ್ಥ ನಿಮ್ಮ ||
ಸರಿರಾತ್ರಿಯಲಿ ದುಷ್ಟಗಜಕೆ ತಂದಿಕ್ಕಲು |
ನೆರೆಪಾಪಿಗಳ ನಂಬಿದುದಕೆ ಈ ತೆರನಾಯ್ತು || ೧ ||
ನಾರಿಜನ್ಮದಿ ಜನಿಸಿ | ಪ್ರಾಣೇಶನ |
ಅರಣ್ಯದಲಿ ತ್ಯಜಿಸಿ ||
ಈ ರೀತಿಯಲಿ ಭಂಗವನು ಪಡಬಹುದಂತೆ |
ವಾರಣಗಳಿಗಂಜಲೇಕೊ ಭ್ರಾಂತಿಯೊಳೀಗ || ೨ ||
ವಾರಿಜಾಸನ ಬರೆದ | ಕರ್ಮವನುಂಡು |
ತೀರಿಸದನಕ ಬಿಡ ||
ಯಾರು ಮಾಡುವುದೇನು  ಇದರೊಳ್ ದುರ್ಮರಣವು |
ಸೇರುವ ಕಾಲ ಬಂದರೆ ಬಿಡಲರಿವುದೆ || ೩ ||
ನಿನ್ನಿಂದ ತಪ್ಪೇನಯ್ಯ | ಪೆತ್ತವರಂತೆ |
ಮುನ್ನ ಪೊರೆದೆ ಯೆನ್ನಯ ||
ಇನ್ನು ಕರಗಬೇಡ ಆದುದಾಗಲಿಯೆಂದು |
ಪನ್ನಗವೇಣಿ ಏಕೋ ದೃಢದಿಂದಲೆ || ೪ ||
ಹರಿನಾರಾಯಣ ಮುಕುಂದ | ರಕ್ಷಿಸೊ ನಮ್ಮ |
ಗರುಡ ವಾಹನ ಗೋವಿಂದ ||
ಬರಿದೆ ಈ ಪರಿ ಗೋಳುಗುಟ್ಟಿಸಲೇಕೆಂದು |
ತರಳೆ ಭಜಿಸೆ ಪೋದವಾನೆಗಳ್ ನಿಮಿಷದಿ || ೫ || 415 ||

**ಕೇದಾರಗೌಳ - ಝಂಪೆ**
ಕುಂತಿಯಾತ್ಮಜನೆ ಕೇಳು | ಸರಿಯಲಾ |
ದಂತಿಗಳು ಹರಿಕೃಪೆಯೊಳು ||
ನಿಂತು ಸರ್ವರು ನೋಡಲು | ಮೇಲೆ ರವಿ |
ಸಂತಸದಿ ಮೆಯ್ದೋರಲು || ೧ ||
ತೆರಳಿದರು ಮುಂದೆ ಭರದಿ | ಕಾಣಿಸಿತು |
ವರ ಚೈದ್ಯ ನಗರ ಮುದದಿ ||
ಹರುಷದಲಿ ದಮಯಂತಿಗೆ | ತೋರಿ ತಾಂ |
ಸರಿಯೆ ತಮ್ಮಯ ಬೀಡಿಗೆ || ೨ ||
ಬಿಡದೆ ದ್ವಾರವ ದಾಟುತ | ಮನದೊಳಗೆ |
ಕಡು ಧೈರ್ಯವನು ತಾಳುತ ||
ನಡೆದಳಾಕ್ಷಣ ಊರೊಳು | ಆಶ್ಚರ್ಯ |
ಬಡುತ ಸಕಲರು ನೋಡಲು || ೩ || 418 ||

**ವಾರ್ಧಕ**
ಒರೆಯಲಳವಲ್ಲಾಕೆ ಧರಿಸಿರ್ಪ ಸೌಂದರ್ಯ |
ಸಿರಿ ಗೌರಿವಾಣಿಯರಿಗೆ ದೊರಕದು ಮಿಕ್ಕ |
ಸುರನರೋರಗರ ಬಿಡು ಸರಸಿಜೋದ್ಭವನೆಷ್ಟು ವರುಷದಿಂ ಬಾಲಿಕೆಯನು ||
ನೆರೆ ತಿದ್ದಿದನೊ ಕಾಣೆ ಪರಿಕಿಸಿದ ವಿಟರೆಲ್ಲ |
ಸ್ಮರನುರುಬೆಯೊಳ್ ಬಿದ್ದು ಹೊರಳಿ ಬಾಯ್ಬಿಡುತಿರಲು |
ವರ ಪತಿವ್ರತೆ ಮುಂದೆ ಗಮಿಸುತಿರೆ ಚೈದ್ಯೇಶನರಸಿಯಾಕೆಯ ಕಂಡಳು || ೧ || 419 ||

**ಭಾಮಿನಿ**
ಯಾರಿವಳು ಶಿವ ಶಿವನೆ ಮಿಂಚುಗಳ್ | ತೋರಿದಂತಾಗುವದು ನಯನಕೆ |
ಮೂರುಲೋಕದಿ ಕಾಣೆನೀ ಚೆಲ್ವಿಕೆಯ ಪೋಲುವರ ||
ಸೈರಿಸದು ಮನವೀಗ ಕರೆದು ವಿ | ಚಾರಿಸಲುಬೇಕೆಂದು ವೋರ್ವಳ |
ಭೋರನಟ್ಟಲು ನಯದಿ ಕರೆತರೆ ಕೇಳ್ವಳವಳೊಡನೆ || ೧ || 420 ||

**ಕಾಂಭೋದಿ - ಅಷ್ಟ**
ತರುಣಿ ನೀನಾರು ನಿನ್ನಯ ರಾಜ್ಯವಾವುದು | ವರನಾರೆ ಪೆತ್ತವರು ||
ಇರುವ ಠಾವುಗಳೆಲ್ಲಿ ಬರಿದೆ ಒಬ್ಬಳೆ ಯಾಕೆ |
ತಿರುಗುವೆಯರುಹು ಈ ಮಲಿನ ವೃತ್ತಿಗಳೇನು ||೧||

ಸುರಳೊ ಕಿನ್ನರಳೊ ಭೂಸುರಳೊ ದಾನವಳೊ ನೀ |
ನುರಗ ಕನ್ನಿಕೆಯೊ ಪೇಣು ||
ನರವಂಶದವಳೊ ಗಂಧರ್ವವಧುವೊ ಈಗ |
ಅರಿಯದೆ ಬೆಸಗೊಂಬ ಪರಿಯ ವಂಚಿಸದಿರು || ೨ ||
ಕೇಳಾದರೆಲೆ ನೃಪನರಸಿ ಎನ್ನಯ ಕ್ಲೇಶ | ಪೇಳುವೆ ನಿನ್ನೊಡನೆ ||
ಆಳಿಕೊಂಡಿರೆ ಎನ್ನ ರಮಣನೊಂದೂರನು |
ಕಾಲವಶದೊಳ್ ಜೂಜನಾಡಿ ಸಕಲವ ಸೋತು || ೩ ||
ವನವಾಸಕಯ್ತರೆ  ದಣುವಿನೊಳ್ ಮಲಗಿದೆ | ಕ್ಷಣಹೊತ್ತು ನಿದ್ರೆಯಲಿ ||
ಎನ್ನ ವಂಚಿಸಿ ಮೊನ್ನೆ ಇರುಳು ನಲ್ಲನು ಪೋದ |
ತನುವ ರಕ್ಷಿಪರಿಲ್ಲ ಪರದೇಶಿ ತಾನಾದೆ || ೪ || 424 ||

**ತುಜಾವಂತು - ಝಂಪೆ**
ಬರಿದೆ ಯೋಚಿಸಲೇಕೆ ತರಳಾಕ್ಷಿ ನೀನು |
ಇರು ಸ್ವಸ್ಥದೊಳಗಿಲ್ಲಿ ಪರಿಪಾಲಿಸುವೆನು || ಪ ||
ಪರಮ ಗುಣಶೀಲೆಯೊರ್ವಳು ತನುಜೆಯಿಹಳೆನಗೆ |
ವರ ಸುನೀತಿಯುಯೆಂಬ ಪೆಸರಿನೊಳಗೆ ||
ಸರಸ ನಡೆಯಾಟಪಾಠಗಳಿಂದ ಸುಖದೊಳಗೆ |
ಹರುಷದೋರುತಲಿರ್ಪುದಾಕೆಬಳಿಯೊಳಗೆ || ೧ ||
ನೀರೊಳಗೆ ಮುಳುಗಿದರೆ ದಡಕೆ ಹತ್ತಿಸಿದಂತೆ |
ಕಾರುಣ್ಯದಿಂದೆನಗೆ ಅಭಯಗಳನಿತ್ತೆ ||
ಸೇರಿದವಳನು ಪತಿವ್ರತಾಧರ್ಮವುಳಿವಂತೆ |
ಭೂರಿ ಕೃಪೆಯಲಿ ಸಲಹು ನಿನ್ನ ಮಗಳಂತೆ || ೨ ||
ಅನುಮಾನ ಬೇಡವ್ವ ತಾಳಿಕೊ ಧೈರ್ಯವನು |
ನಿನಗೆ ಉಪಹತಿ ದೊರಕದಂತೆ ಹೊಣೆ ನಾನು ||
ಎನುತ ಈ ಪರಿಯೊಳಗೆ ಇತ್ತು ನಂಬುಗೆಗಳನು |
ಅಣುಗೆ ಬಳಿಯೊಳಗಿಡಲು ವನಜಮುಖಿಯಳನು || ೩ || 427 ||

**ಭಾಮಿನಿ**
ತರುಣಿ ಬಲ್ಲಳೆ ಈಕೆಯಕ್ಕನ | ತರಳೆಯೆಂಬುದ ಸೇವೆಗೊಳುತಲೆ |
ಪೊರೆಯುತಿರಲಾ ದೇವಿ ಗುಪ್ತದಿ ದಿನವ ನೂಕಿದಳು ||
ಧರಣಿಪಾಗ್ರಣಿ ಲಾಲಿಸಿತ್ತಲು | ನಳನ ವಿಧಿಯನು ಒರೆವೆ ಸತಿಯಳ |
ನಿರದೆ ಅಗಲಿದ ವ್ಯಥೆಗೆ ಸುಯ್ಯುತ ಮುಂದೆ ಬರುತಿರಲು || ೧ || 428 ||

**ಕೇದಾರಗೌಳ - ಝಂಪೆ**
ಆ ಸಮಯದೊಳಗಡವಿಗೆ | ಕಾಡ್ಗಿಚ್ಚು |
ಮೋಸದಿಂ ನಾಲ್ಕು ಕಡೆಗೆ ||
ಸೂಸುತಲೆ ಹೊಗೆ ಕಿಡಿಗಳ | ಹೊತ್ತಿದುದು |
ನಾಶಗೆಯ್ಯುತ ಬನಗಳ || ೧ ||
ಬಿದಿರು ಬಲೆ ತುದಿಯೊಳೊಂದು | ಕಾಳುರಗ |
ವೊದೆದುಕೊಳಲುರಿಗೆ ನೊಂದು ||
ಚದುರ ನಳನೃಪನಲ್ಲಿಗೆ | ಬರೆ ಕಂಡು |
ಒದಗಿನಿಂ ಪೇಳ್ದುದವಗೆ || ೨ ||
ಸತ್ಯ ಧರ್ಮದ ಶೀಲನೆ | ನೀನಿತ್ತ |
ನೋಡಯ್ಯ ಮಿಗೆ ಎನ್ನನೆ ||
ವ್ಯರ್ಥವೀ ಹರಿಯ ಬಾಯ |
ತುತ್ತಾಗಿ ಸತ್ತುಹೋಗುವೆನಲ್ಲಯ್ಯ || ೩ ||
ಪ್ರಾಣದಾನವ ಪಾಲಿಸು | ಬಹುಪುಣ್ಯ |
ನೀನು ಮನದಲಿ ಯೋಚಿಸು ||
ಕಾಣೆ ನೀನಾರನೆಂದು | ಮರುಗುತಿರೆ |
ಕ್ಷೋಣೀಂದ್ರ ಪೇಳ್ದನೆಂದು || ೪ ||
ಕಡುದುಷ್ಟ ಕುಲ ನಿನ್ನದು | ಮೊದಲೆ ಶನಿ |
ಹಿಡಿದು ಪೀಡಿಸುವ ಝಡಿದು ||
ನಡುಗುವುದು ಎದೆಯೆನ್ನದು | ಅದರಿಂದ |
ತೊಡಕು ಬೇಡೈ ನಿನ್ನದು || ೫ || 433 ||

**ನೀಲಾಂಬರಿ - ಮಟ್ಟೆ**
ಈಸು ನಿರ್ದಯ | ಮಾಡಲ್ಯಾಕಯ್ಯ ||
ಪೋಷಿಸಿದನ | ಮೋಸಗೈವನೆ ||
ಮರೆಯೆ ನೋಡಿಕೊ ಏಳು ಜನ್ಮಕು |
ಶರಣು ಹೊಕ್ಕೆನು ಕರುಣ ರಕ್ಷಿಸು || ೧ ||
ಇನಿತು ದೈನ್ಯದಿ ಬೇಡಿಕೊಳ್ಳಲು |
ಜನಪ ಸತ್ಯವ ನೆನೆದು ಮನದೊಳು ||
ಕ್ಷಣದಿ ಮೇಲಕೆ ನೀಡಿ ಕೈಯ್ಯನು |
ವಿನಯದಿಂ ಬಾರೆನುತ ಕರೆದನು || ೨ ||
ನಿಲದೆ ಆತನ ಕರಕೆ ಹಾರುತ |
ಗಳಕೆ ಸುತ್ತಿ ಮೇಲ್ ಶಿರಕೆ ಟೊಣೆಯುತ ||
ಇಳಿದು ಪೋಗುವ ಕಾಳಭುಜಗನ |
ನಳನು ಪರಿಕಿಸಿ ನುಡಿದನಾಕ್ಷಣ || ೩ ||
ಹೀನ ಪಾಪಿಯೆ ಎನ್ನ ನಂಬಿಸಿ |
ಗೋಣ ಕೊಯ್ದೆಯ ಏನು ಧೃಡವಯ್ಯ || ೪ ||
ನೀತಿವಂತನೆ ನಿನಗೆ ಎಸಗಿದ |
ಘಾತವಲ್ಲಿದು ಕೊನೆಗೆ ತಿಳಿವುದು ||
ಈ ತೆರದಲಿ ನುಡಿದು ತೆರಳಲು |
ಭೂತಳೇಶನು ಮುಂದೆ ನಡೆಯಲು || ೫ || 438 ||

**ಕೇದಾರಗೌಳ - ಅಷ್ಟ**
ವರಕಾರ್ಕೋಟಕ ಕಚ್ಚಿದ ದೆಸೆಯಿಂದ | ಅರಸನ ದೇಹಗಳು ||
ಉರೆಕಪ್ಪಾಗುತ ಅಡಗಿತು ದಿವ್ಯಾ | ಕಾರದ ತೇಜಗಳು || ೧ ||
ಪರಿಕಿಸುವರಿಗತಿ ಹೇಸಿಕೆಗೊಳ್ಳುವ | ತೆರದೊಳು ಬಂದಾಗ ||
ಭರದೊಳಯೋಧ್ಯಾ ನಗರವ ಪೋಗುತಲೆ | ತಿರಿದುಣ್ಣುತಲಾಗ || ೨ ||
ಅಲ್ಲಿಯ ದೊರೆ ಋತುಪರ್ಣನು ಒಂದಿನ | ಕುಳ್ಳಿರೆ ಮುದದಿಂದ ||
ನಿಲ್ಲದೆ ಯಾಚಕದಿಂದವ ಬರುತಿರೆ | ನೋಡಿದನವನಂದು || ೩ ||
ಎಲ್ಲಿ ನಿನಗೆ ನೀನ್ಯಾರೆಲೊ ಪೂರ್ವದೊ | ಳೆಲ್ಲಿದ್ದವ ಎನ್ನುತ ||
ಬಲ್ಲಿದ ಭಟ ತಾ ಕೇಳಲು ಉಸುರಿದ | ಮೆಲ್ಲನೆ ವಂದಿಸುತ || ೪ ||
ನಿಷಧ ಪುರಾಧಿಪ ಶಶಿವಂಶಜ ನಳ | ನಸಮಪರಾಕ್ರಮನು ||
ಕುಶಲದೊಳಾತನ ಸಾವಿರಕುದುರೆಗೆ | ಅಧಿಕಾರಿಯು ತಾನು || ೫ ||
ವಿಷಮ ಲೆತ್ತಗಳಾಡಿ ಸೋತು ಸಕಲವ | ಪುಷ್ಕರನಿಗೆ ಒಪ್ಪಿಸುತ ||
ಎಸೆವ ಕೌಪೀನದೊಳಯ್ದಿದನಡವಿಗೆ | ತನ್ನಯ ಸತಿಸಹಿತ || ೬ ||
ತಿರುಗುವೆನದರಿಂ ಮೇಲೀಪರಿಯಲಿ | ಪರಮ ಕೃಪಾನಿಧಿಯೆ ||
ಕರೆವರು ಬಾಹುಕನೆಂಬ ಪೆಸರಿನೊಳ್ | ಹದನಿದು ಕೇಳ್ ದೊರೆಯೆ || ೭ ||
ಹರಹರ ಘನತರ ಚಕ್ರವರ್ತಿಗೆ ಈ | ವಿಧಿಯಾದುದೆಯೆಂದು ||
ಮರುಗುತಲೀತನ ಶತ ಅಶ್ವಕೆ ದಳ | ವಾಯಿಯ ಮಾಡಿದನು || ೮ || 446 ||

**ಭಾಮಿನಿ**
ವರ ಯುದಿಷ್ಠಿರ ಕೇಳು ತ್ರಿಭುವನ | ದರಸುಗಳ ಶಿರದಲ್ಲಿ ಕಪ್ಪವ |
ಹೊರಿಸಿ ಕಯ್ಗೊಂಬವಗೆ ಸೇರಿತು ಪರರ ಸೇವೆಗಳು ||
ಬರಿದೆ ದುಃಖಿಪೆ ಹೊರತು ಆತನ | ಉರುತರದ ಕಷ್ಟದಲಿ ನಿನಗೊಂ |
ದರೆ ತಿಲಾಂಶದ ಕಷ್ಟವಿರುವುದೆ ಅರುಹು ನಿಜವಾಗಿ || ೧ || 447 ||

**(ವನಪಾಲಕರು ಬರುವುದು)**

**ಅಹೇರಿ ಝಂಪೆ**
ಒಂದು ದಿನ ಋತುಪರ್ಣ ಭೂಪ | ಹೊರವಂಟ |
ಚಂದದಲಿ ಬೇಟೆಯಾಡಲು ಸುಪ್ರತಾಪ || ಪ ||
ಮಂದಿ ಕುದುರೆಗಳಾನೆ ಶಬರ ಸಂಕುಲ ಸಹಿತ |
ಅಂದವಾಗಿಹ ಬತ್ತಿಸಾಯುಧಗಳಪರಿಮಿತ |
ಮುಂದೆ ಪೊಗಳುವ ಗಾಯಕರು ವಾದ್ಯ ಸಂಗೀತ |
ಹೊಂದಿರ್ದ ಬಾಹುಕನು ಸಹಿತ || ಪೊಕ್ಕನಾ |
ನಂದದಲಿ ಹೊರಟಡವಿಗೆ ಪ್ರಖ್ಯಾತ || ೧ ||

ಏರಿ ಕುದುರೆಯನು ನಾಲ್ದೆಸೆಗೆ ಹಾರಿಸಿಕೊಳುತ |
ಕ್ರೂರ ಮೃಗಜಾತಿಗಳ ತಡೆತಡೆದು ಮರ್ದಿಸುತ |
ಸಾರುತಿರೆ ಮುಂದೆ ಹಲವಂಗದಲಿ ಗರ್ಜಿಸುತ |
ದೂರದಿಂ ಕಂಡು ಭಯಗೊಳುತ || ಘನಸಿಂಹ |
ಹಾರಿ ಓಡುತಲಿರಲು ನೃಪತಿ ಈಕ್ಷಿಸುತ || ೨ ||
ಬಿಡದೆ ಬೆನ್ನಟ್ಟಿದನು ಬಾಹುಕನ ಜತೆಯಿಂದ |
ಪಡೆಯೆಲ್ಲ ಹಿಂದುಳಿಯೆ ಬಹುತರದ ದಣುವಿಂದ ||
ನಡೆದುದಾ ಸಿಂಹ ಕಾನನದಿ ಯೋಜನವೊಂದ |
ಹೊಡೆಯೆ ಕೋಪದಲಿ ಸರಳಿಂದ || ಒರಗಿದುದು |
ತಡೆಯದಾಕ್ಷಣ ಮುಳುಗೆ ರವಿಯು ನಲವಿಂದ || ೩ ||
ಕಾರುಗತ್ತಲೆಯೊಳಗೆ ಕಂಗೆಟ್ಟು ಭೀತಿಯಲಿ |
ದಾರಿಗಾಣದೆ ಕಲ್ಲುಗಿಡ ಮರಗಳೆಡವುತಲಿ |
ಸೋರುತಿಹ ರಕ್ತದಿಂದಲ್ಲಲ್ಲಿ ಬೀಳುತಲಿ |
ಧಾರಿಣಿಪ ಕ್ಷುದೆಯ ಬಾಧೆಯಲಿ |
ಬಸವಳಿದು ವೀರಬಾಹುಕಗರುಹೆ ತೊದಲುನುಡಿಗಳಲಿ || ೪ || 451 ||

**ವಾರ್ಧಕ**
ಅರರೆ ಹಸಿವಿಂದಿವಂ ಹಸಗೆಟ್ಟನೆನುತಾಗ |
ತ್ವರಿತದಿಂ ತಾ ತಂದ ಪಾತ್ರೆಯಲಿ ತಂಡುಲವ |
ನಿರದೆ ಹಾಕುತ ಪೂರ್ಣ ದೃಷ್ಟಿಯಿಂ ತಡವರಿಸೆ ಭರಿತಪಾಕಗಳಾದುದು ||
ಧರಣಿಪನನೆಬ್ಬಿಸುತ ವರಭೋಜನಂ ಗೆಯ್ಸೆ |
ಹರುಷದೊಳ್ ರುಚಿಕರಕೆ ಮೆಚ್ಚಿ ಬಾಹುಕಗೆಂದ |
ಇರು ಎನಗೆ ಸೌಖ್ಯದಿಂ ರಚಿಸಿಕೊಂಡಡಿಗೆಯಂ ಪರಮಾಪ್ತ ನೀನೆಂದನು || ೧ || 452 ||

**ತೋಡಿ - ಅಷ್ಟ**
ಈ ರೀತಿಯೊಳ್ ಮಾತನಾಡುತಲಿರಲಾಗ | ಪೂರ್ವಶೈಲಾಗ್ರದಲಿ ||
ವಾರಿಜಸಖ ತಲೆದೋರಲು ಕಂಡಿವ | ಭೂರಿ ಸಂತಸಗಳಲಿ || ೧ ||
ಬಂದು ತಮ್ಮಯ ನಗರವ ಸೇರಿಕೊಳ್ಳಲು | ಅಂದಿನಾರಭ್ಯದಲಿ ||
ಇಂದುವಂಶಜ ನಳ ಪಾಕವೃತ್ತಿಯೊಳಿರ್ದು | ಹೊಂದಿರ್ದ ಭೂಪನಲ್ಲಿ || ೨ ||
ಇತ್ತಲು ಕುಲಪುರೋಹಿತಸಹ ದಮಯಂತೀ | ಪುತ್ರರು ಬರಲು ಕಂಡು ||
ಚಿತ್ತದೊಳ್ ಬೆದರುತ್ತ ಭೀಮರಾಯನು ಬೇಗ | ಎತ್ತಿಕುಳ್ಳಿರಿಸಿಕೊಂಡು || ೩ ||
ಕೇಳಿದ ಮೊಮ್ಮಕ್ಕಳಲಿ ಸೈನ್ಯವೆಲ್ಲವ | ಬೀಳುಗೊಟ್ಟಂದಿನಲಿ ||
ಬಾಳ ಕಂಗೆಡಿಕೆಯೊಳಯ್ಯೆಂದ ಹದನೇನು | ಪೇಳಿ ಮಾಜದೆಯೆನ್ನಲಿ || ೪ ||
ಕುಶಲವೆ ನಳ ದಮಯಂತಿ ದೇಶಗಳೆಲ್ಲ | ವಶದೊಳಿರ್ಪುದೆಯೆನಲು ||
ಎಸೆವ ಕಣ್ಣೀರಿನೊಳ್ ಶಿರವ ತಗ್ಗಿಸಿ ಪುರೋ | ಹಿತನೆಂದ ದುಗುಡದೊಳು || ೫ || 457 ||

**ನೀಲಾಂಬರಿ - ಆದಿ**
ಸೃಷ್ಟೀಶ ಕೇಳೊ ನಿನ್ನಲಿ | ನಳಗೆ ಬಂದ |
ಕಷ್ಟವನೆಂತು ಪೇಳಲಿ ||
ದುಷ್ಟ ಪುಷ್ಕರನೊಡನೆ | ಲೆತ್ತನಾಡಿ |
ಅಷ್ಟಭಾಗ್ಯಗಳನ್ನ || ೧ ||
ತೆತ್ತು ಆ ಖೂಳನಿಗೆ | ದಮಯಂತಿ ಸಹ |
ಮತ್ತೆ ತೆರಳಿದನಡವಿಗೆ ||
ಸುತ್ತಿಸಲಾರದೆ ವನಗಳ | ಯನ್ನ ಕೂಡಿಸಿ |
ಇತ್ತ ಕಳುಹಿದ ಮಕ್ಕಳ || ೨ ||
ಬೀಳಲಾ ನುಡಿ ಕರ್ಣದಿ | ಮೂರ್ಛಿತನಾದ |
ಭೂಲಲಾಮನು ದುಗುಡದಿ ||
ಏಳುತ್ತಲಾಗ ಮೆಲ್ಲನೆ | ಬಾಲೆಯ ಭಂಗ |
ಪೇಳಿದ ಸತಿಯೊಡನೆ || ೩ ||
ಧರೆಯೊಳುರುಳುತಂಗನೆ | ಹಲುಬಿದಳ್ ಬಹು |
ತೆರದಿ ಯೋಚಿಸಿ ಮಗಳನೆ ||
ಹರ ಹರ ಪೆತ್ತು ಮೋಹದಿ | ಸಾಕಿ ನೈಷಧಗೆ |
ಕರೆದು ಕೊಟ್ಟೆವು ವ್ಯರ್ಥದಿ || ೪ ||
ಕಡು ಮುದ್ದುಯೆನ್ನ ಗಿಣಿಯನೆ | ಕೊಂಡೊಯ್ದ ಪಾಪಿ |
ಅಡವಿಗೆ ಗುರಿಗೆಯ್ದನೆ ||
ಹುಡುಕಿ ತರುವರ್ ಯಾರಿನ್ನು | ಕಾಣದೆ ನಿಮಿಷ |
ಪೊಡವಿಯೊಳಿರಲಾರೆನು || ೫ || 462 ||

**ಬೇಗಡೆ - ಆದಿ**
ಮರುಳು ಮಾನಿನಿ ಯಾತಕಳಲುವೆ ನೀನು |
ಸರಸಿಜಾಸನ ಬರೆದಿಹ ಲಿಖಿತವನು ||
ಹರಿಹರಾದ್ಯರಿಗೆ ಉಲ್ಲಂಘಿಸಲದನು |
ಹರಿಯದು ಮಿಕ್ಕ ಮಾನವರ ಪಾಡೇನು || ೧ ||
ಇರಲೀಗ ನವಖಂಡದಲಿ ಸುತೆಯನ್ನು |
ಭರದಿ ಹುಡುಕಿಸಿ ತಂದು ಕರದಿ ಕೊಡುವೆನು ||
ತೆರಳು ನೀನೊಳಗೆಂದೊಡಬಡಿಸುತವಳನು |
ಅರುಹಿದ ಮಂತ್ರಿಯೊಡನೆ ಸಕಲವನು || ೨ ||
ಕರೆಸಿದನಾಗ ಭೂಸುರರನೆಲ್ಲರನು |
ಇರದೆ ಪೇಳಿದ ಈ ವೃತ್ತಾಂತವೆಲ್ಲವನು ||
ತಿರುಗಿ ನೀವಖಿಲ ದೇಶಗಳ್ ವಿಪಿನವನು |
ತರಳಲೋಚನೆಯಾದ ದಮಯಂತಿಯನ್ನು || ೩ ||
ಪರಿಕಿಸಿವೊರೆದ ಪ್ರೌಢರಿಗೀವೆಯೆನ್ನ |
ಭರಿತ ರಾಜ್ಯದೊಳರ್ಧವೆಸಗಲು ಮುನ್ನ ||
ತೆರಳಿಯೆಂದುದನೆಲ್ಲವರು ಕೇಳುತ್ತ |
ಹರುಷದೊಳೆಲ್ಲರು ಬಂದರುಬ್ಬುತ್ತ || ೪ ||
ಲಾಲಿಸೊ ನೃಪತಿ ತಿಂಗಳುವೊಂದರೊಳಗೆ |
ಲೋಲನಯನೆಯಿರ್ಪ ಸ್ಥಳವ ನಿನ್ನೊಳಗೆ ||
ಪೇಳುವೆವೆಂದು ನಡೆಯೆ ನಾಲ್ಕು ದೆಸೆಗೆ |
ಬಾಳ ಊರನು ಚರಿಸುತ ಯೆಲ್ಲರೊಳಗೆ || ೫ ||
ಲೀಲೆಯಲಿ ಕಂಡವರ ಬೆಸಗೊಳ್ಳುತ |
ಮೇಲೆ ಕಾನನ ಗಿರಿ ಸುತ್ತಿ ಬಳಲುತ್ತ ||
ಭೂಲಲಾಮಗೆ ಬಂದು ವಂದಿಸುತಾಗ |
ಪೇಳಿದರಿರದೆ ಗೋಚರಿಸಳೆಂದಾಗ || ೬ ||
ಮರುಗುತ್ತ ಮನದಿ ಚಿಂತಿಸಲವನಿಪನು |
ಕರೆದು ತನ್ನಯ ಪುರೋಹಿತ ಸುದೇವನನು ||
ಅರಿಯದಿನ್ನೋರ್ವರೊಳು ದಯವಿಟ್ಟು ನೀವು |
ತರಳೆ ಯೆಲ್ಲಿರ್ಪಳೆನ್ನುವ ವಿಧಾನವನು || ೭||
ಅರಿತರುಹಲು ಬೇಕು ಜಗವೆಲ್ಲ ತಿರುಗಿ |
ತ್ವರಿತದೊಳೆನುತಾಗ ಚರಣದೊಳೆರಗಿ ||
ಮರುಗುವ ಧರಣೀಶನನ್ನು ಸಂತಯಿಸಿ |
ತೆರಳುತ್ತ ನಾನಾ ದೇಶಗಳನ್ನು ಚರಿಸಿ || ೮ || 470 ||

**ಸೌರಾಷ್ಟ್ರ - ಮಟ್ಟೆ**
ಪೃಥ್ವಿದೇವನು ಅಖಿಲರಾಜ್ಯವ | ಸುತ್ತಿ ದಣಿಯಲು | ಸಿಕ್ಕದಾದಳು ||
ಚಿತ್ತದೊಳಗೆ ತಾಳುತ್ತ ದುಗುಡವ | ಮತ್ತೆ ಹೊಕ್ಕನು ಚೈದ್ಯನಗರವ || ೧ ||
ಇರದೆ ರಾಜಮಂದಿರಕೆ ತೆರಳಿದ | ಇಳೆಯಪತಿಯು ತಾ ನೋಡಿ ಯೆರಗಿದ ||
ಚಳಕದಿಂದ ಭೋಜನವ ಗೆಯ್ಸಿದ | ಒಲಿದು ವೀಳ್ಯ ದಕ್ಷಿಣೆಯ ನೀಡಿದ || ೨ ||
ಉಣ್ಣಲೋಸುಗ ಮೇಲೆಯಿರುವಳ | ಮುನ್ನ ಕರೆಯಲು ಇಳಿದು ಬಂದಳು ||
ಕನ್ಯೆ ಮುಖವ ಸುದೇವ ನೋಡಿದ | ತನ್ನ ರಾಯನ ತನುಜೆಯೆಂಬುದ || ೩ ||
ಅರಿತು ಮನದಿ ನಿಶ್ಚಯವ ಗೆಯ್ಯುತ | ಧರಣಿಪಾಲನ ಸತಿಯ ಕರೆವುತ |
ಇರದೆ ಕೇಳ್ದ ಯಾರೀಕೆಯೆನುತಲೆ | ಒರೆದಳಾಕ್ಷಣ ಅನಾಥಳೆನುತಲಿ || ೪ ||
ಒಡಲ ಹೊರೆಯಲು ಸೇರಿಯಿರ್ಪಳು | ಕಡು ಪತಿವ್ರತೆ ಸಾಧುಗುಣಯುತೆ ||
ಜಡರುಹಾಕ್ಷಿಯ ಮರುಳುಗೊಂಡೆಯ | ಮಡದಿಯೊಳವ ನೀ ತಿಳಿಯದಾದೆಯ || ೫ || 475 ||

**ವಾರ್ಧಕ**
ಪರದೇಶಿಯಲ್ಲಿವಳು ನಿನಗೆಯಕ್ಕನ ಮಗಳು |
ಪರಮ ಮಂಗಲೆಯಾದ ದಮಯಂತಿ ನೋಡೆನಲ್ ||
ಉರುತರದ ಸಂತಾಪವೆತ್ತು ಬಂದಾಕ್ಷಣಂ ಭರದಿ ತರಳೆಯ ನುಡಿಸಲು ||
ಸ್ಥಿರವಾಗಿಯರುಹು ನೀನಾರೆಂದುಯೆನ್ನೊಡನೆ |
ಮರೆ ಮಾಡಿದರೆ ನಿನ್ನ ತಂದೆತಾಯಿಗಳಾಣೆ |
ಮೆರೆವ ದಮಯಂತಿಯಲ್ಲವೆ ನೀನು ಪೇಳೆನಲ್ ಶಿರವಾಗಿಯಹುದೆಂದಳು || ೧ || 476 ||

**ಭಾಮಿನಿ**
ಗುಟ್ಟು ಪೇಳದೆ ಕೊರಳ ಕೊಯ್ದೆಯ | ಅಷ್ಟಭಾಗ್ಯಳೆ ಸೇವೆಯಲಿ ಬಹು |
ಕಷ್ಟಬಡಿಸಿದೆನೆಂದು ಗೋಳಿಟ್ಟಾಗ ಅಪ್ಪಿದಳು ||
ಪಟ್ಟದರಸಗೆಯಿದನು ಸೂಚಿಸೆ | ತಟ್ಟನಯ್ದುಂದಬಲೆಗೆಂದನು |
ಇಷ್ಟು ವಂಚನೆ ಮಾಡಬಹುದೇ ಪರರೆ ನಾವ್ ನಿನಗೆ || ೧ || 477 ||

**ಸುರುಟಿ - ಏಕ**
ಬರಿದೆಯುಮ್ಮಳಿಸದಿರಿ | ಭೇದವ |
ನಿರಿಸಿ ಮಾತಾಡುವಿರಿ ||
ಮರಿಯಾದೆಯ ತವರ್ಮನೆಯಲಿ ಮಕ್ಕಳು |
ವಿರಚಿಸೆ ಕೆಲಸವ ಕೊರತೆಯೇನುಸಿರಿ || ೧ ||
ಖೂಳತನವು ನಮದು | ಇನ್ನದ |
ಹೇಳಿದರೇನಹುದು ||
ಲೋಲನಯನೆ ಮುದ್ದು ಬಾಲೆ ನಿನಗೆಯಿಂಥ |
ಕಾಲ ಬರಲು ಮತ್ತೇನು ಕಾರಣಗಳು || ೨ ||
ಖೋಡಿ ಪುಷ್ಕರನೊಳಗೆ | ಪತಿಯು ಜೂಜ |
ನಾಡಿ ಸೋತನು ಕಡೆಗೆ ||
ರೂಢಿ ಭಂಡಾರವ ಸಹಿತವನಿಗೆ ತೆತ್ತು |
ಕಾಡಿಗೆ ಬರೆ ಮೂರನೆ ದಿನವೆನ್ನನು || ೩ ||
ಮಲಗಿದ ಸಮಯದಲಿ | ಬಿಟ್ಟು ತಾ |
ನಿಲದಯ್ದಿದ ಕೇಳಿ ||
ಹೊಲಬು ಕಾಣದೆ ನಾನಳಲುತಿರೆ ವೈಶ್ಯ |
ಕುಲದವರಿಲ್ಲಿಗೆ ಕಳುಹಿದರ್ ಕರುಣದಿ || ೪ ||
ಅತಿಶಯತರ ಸುಖದಿ | ಬಾಳಿರ್ದೆನು |
ಹಿತದಿ ನಿಮ್ಮನುಗ್ರಹದಿ ||
ಕ್ಷಿತಿಪನೆ ನೀನತಿ ಶೀಘ್ರದೊಳೆನ್ನನು |
ಪಿತನಲ್ಲಿಗೆ ಸಾಗಿಸು ಯೆನುತೆರಗಲು || ೫ || 482 ||

**ಮಧ್ಯಮಾವತಿ - ತ್ರಿವುಡೆ**
ಸರಸಿಜಾನನೆಯೆಂದ ಮಾತಿಗೆ |
ತ್ವರಿತದಿಂದಲೆ ಚೈದ್ಯಭೂಪನು |
ಕರೆಸಿ ಮಂತ್ರಿಯೊಳೆಂದ ಸೈನ್ಯವ |
ನೆರಹಿ ಕುಂಡಿನ ನಗರಕೆ | ನೀನು ಸಹಿತ || ೧ ||
ತೆರಳಿ ಭೀಮನೃಪಾಲನಿಗೆ ಈ |
ತರಳೆ ದಮಯಂತಿಯನು ಒಪ್ಪಿಸಿ |
ಬರುವುದೆನಲಾಕ್ಷಣದಿ ಪಾಳ್ಯವ |
ಭರದೊಳೊದಗಿಸಿ ನುಡಿದನು | ಹದನ ದೊರೆಗೆ || ೨ ||
ಇರದೆ ಮಜ್ಜನ ಭೋಜನಂಗಳ |
ಹರುಷದಿಂದಲೆ ಗೆಯ್ಸಿ ಭಾವೆಗೆ |
ಮೆರೆವ ಶಾಲೆಯನುಡಿಸಿ ಕುಂಕುಮ |
ವಿರಿಸಿ ವೀಳ್ಯವ ನೀಡಿದ | ಗೆಲವಿನಿಂದ || ೩ ||
ಪರಿಸುತ ಅಂದಣವ ಪಟ್ಟಣ |
ದ್ವಾರಪರಿಯಂತದಲಿ ಕಳುಹುತ |
ನಾರಿಮಣಿ ಬಹು ಜೋಕೆಯೆಂದು ಸು |
ದೇವಗೆರಗುತ ಪೇಳ್ದನು | ವ್ಯಥೆಯೊಳಂದು || ೪ ||
ಪೋಗಿ ಬಹೆನೆಂದೆನುತಲೇರ್ವರಿ |
ಗಾಗ ವಂದಿಸಲಕ್ಷಿ ಜಲದಲಿ |
ನಾಗವೇಣಿಯನಪ್ಪಿ ಬೀಳ್ಕೊಡೆ |
ಸಾಗಿ ಕುಂಡಿನ ಪುರವನು | ಕಂಡರಂದು || ೫ || 487 ||

**ಕಂದ**
ಭೋರನೆ ಚರನುಂ ಬಂದಾ |
ಧಾರಿಣಿಪತಿಗೆರಗುತ್ತ ಬಂದಿದೆ ನಿಮ್ಮಯ ಸುತೆಯ ||
ಸ್ವಾರಿಯದೆನಲಾ ಸಂತಸ |
ವಾರಿಧಿಯೊಳ್ ಮುಳುಗುತ ಕರೆತರೆ ಯಿದಿರ್ಗೊಳುತಂ || ೧ || 488 ||

**ಸಾಂಗತ್ಯ - ರೂಪಕ**
ಸಿಂಧೂರಗಮನೆಯಂದಣವನಿಳಿದು ತಾಯಿ |
ತಂದೆಯರಡಿಗೆ ಶೋಕದೊಳು ||
ವಂದಿಸಿ ತನ್ನ ವಿಧಿಗಳಿಷ್ಟಾದುದುಯೆನಲ್ |
ನೊಂದುಕೊಂಡವರು ತಳ್ಕಿಸುತ || ೧ ||
ಕಡುಮುದ್ದುಮಗಳೆ ನೀ ದುಗುಡಗೊಳಲು ಬೇಡ |
ಪೊಡವಿ ಮೂರರೊಳ್ ನಿನ್ನ ರಮಣ ||
ಅಡಗಿಕೊಂಡಿರ್ದರು ಹುಡುಕಿಸುವೆನು ಯೆಂದು |
ತೊಡೆದರು ಕಣ್ಣಜಲವನು || ೨ ||
ಎಂದು ಸಂತಯಿಸಲಾ ಸಮಯದೊಳ್ ದಮಯಂತಿ |
ಕಂದರು ಬಂದು ನಮಿಸಲು ||
ಚಂದದಿಂದೆತ್ತಿ ತೊಡೆಯೊಳಿಟ್ಟು ಚುಂಬಿಸಿ |
ಹೊಂದಿದಳಾನಂದದೊಳಗೆ || ೩ ||
ಮೆರೆವ ಚೈದ್ಯೇಶನ ವರಪ್ರಧಾನಿಯನುಪ |
ಚರಿಸಿ ಕಳುಹಿ ಸುದೇವನಿಗೆ ||
ಎರಗಿ ಪೇಳ್ದರು ನೀವೆ ಕರುಣಿಸಿದಂತಾಯ್ತು |
ತರಳೆಯ ಪೊಸತಾಗಿ ನಮಗೆ || ೪ ||
ಪ್ರತಿನಿತ್ಯದೊಳಗಿನ್ನು ಶೂಲವಾಯಿತು ಈಕೆ |
ವದನ ವೀಕ್ಷಿಸಲಸದಳವು ||
ಅತಿಕೃಪೆಯಿಂದ ಶೋಧಿಸಿ ವಧುವರರನ್ನು |
ಜತೆಗೈದು ಕೀರ್ತಿಗೊಳ್ಳುವದು || ೫ || 493 ||

**ತೋಡಿ - ಏಕ**
ಚಿಂತಿಸಬೇಡ ನೃಪತಿ | ಸಂತಸನಾಗಯ್ಯ ||
ಕಂತುವಗ್ರಜ ಬರೆದಂತಹುದು |
ಕಾಂತೆಯ ಪುಣ್ಯಕ್ಕೆ ಜೋಡೆಲ್ಲಿಹುದು || ೧ ||
ನಿರದೆ ಎನ್ನ ಶಕ್ತಿಮೀರಿ | ಪರಿಕಿಸುವೆನೆಂದು ಹೊರಟು ||
ತರತರದ ರಾಜ್ಯವೆಲ್ಲ | ತಿರುಗಿ ಅಯೋಧ್ಯಾವನ್ನು ಪೋಗಲು || ೨ ||
ಬರಲು ರಾಜ್ಯಸಭೆಗೆ ಒಲಿದು | ಅರಸನಾದ ಋತುಪರ್ಣನು ||
ಭರದೊಳ್ ಸಿಂಹಾಸನವನಿಳಿದು | ಎರಗುತ್ತ ಕುಳ್ಳಿರಿಸಿಕೊಂಡ || ೩ ||
ಉತ್ತಮದ್ವಿಜವರನೆ ಈಗ | ಎತ್ತಣಿಂದ ಗಮಿಸಿದಿರಿ ||
ಹೊತ್ತು ಬಹಳವಾಯ್ತು ಸ್ನಾನ | ವರ್ತಿಸಿ ಬೇಗೆಂದು ನುಡಿದ || ೪ ||
ಪೃಥ್ವೀಶನೆಂದುದನು ಕೇಳೀ | ನಿತ್ಯಕರ್ಮಂಗಳನು ರಚಿಸಿ |
ಮತ್ತೆ ಕುಳಿತ ಋತುಪರ್ಣನ | ಒತ್ತಿನೊಳ್ ಭೋಜನಕೆ ವಿಪ್ರ || ೫ ||
ತಡೆಯದೆ ಬಾಹುಕನು ಬಡಿಸೆ | ಷಡುರಸಾನ್ನಭಕ್ಷ್ಯಾದಿಗಳ ||
ಅಡಿಗೆಯ ಸೊಬಗುಗಳ ನೋಡಿ | ಬಿಡದೆ ಇವನಾರೆಂದ ಮುದದಿ || ೬ || 499 ||

**ವಾರ್ಧಕ**
ಧರಣಿಸುರ ಕೇಳ್ವುದಕೆ ನರನಾಥನುಸಿರಿದಂ |
ವೀರಬಾಹುಕನು ಯೆಂಬ ಪೆಸರಿವಗೆ ಪೂರ್ವದೊಳ |
ಗಿರುತಿರ್ದನಂತೆ ನಳನಲಿ ಕುದುರೆಸಾವಿರಕೆ ಮೆರೆಸಿಕೊಂಡಧಿಕಾರವ ||
ದುರುಳ ಪುಷ್ಕರನಿಂದ ತೆರಳೆ ವನಕವರತ್ತ |
ತಿರಿದುಣುತ ಬಂದೆಮ್ಮ ಸೇರ್ದನೀತನು ಯೆನಲ್ |
ಅರೆಗಳಿಗೆ ಯೋಚಿಸುತಲರಿತು ನೈಷಧನೆಂದು ತೆರಳಿದನು ನಿಜನಗರಿಗೆ || ೧ || 500 ||

**ಭಾಮಿನಿ**
ಸತಿ ಸುತೆಯು ಸಹವಾಗಿ ರಾಯನು | ಅತಿಶಯದಿ ಕುಳ್ಳಿರ್ದ ಸಮಯದಿ |
ಕ್ಷಿತಿಯಮರ ಬರೆ ಕಂಡು ಸಂತಸರಾಗಿ ಸತ್ಕರಿಸಿ ||
ಹಿತದಿ ಬೆಸಗೊಳೆ ವರ್ತಮಾನವ | ಮತಿಯುತನು ತಾ ಹೊರಟು ಸುತ್ತಿದ |
ಸ್ಥಿತಿಯನೆಲ್ಲವ ಪೇಳಿ ತೊಡಗಿದನೊಂದು ಪೊಸ ಕಥೆಯ || ೧ || 501 ||

**ಸೌರಾಷ್ಟ್ರ - ಅಷ್ಟ**
ಅದರ ಮೇಲ್ ಬರುತ ಅಯೋಧ್ಯವ ಪೊಕ್ಕೆನು | ಕೇಳಿ ನೀವು ||
ಮುದದೊಳಾ ದೊರೆ ಋತುಪರ್ಣ ಮನ್ನಿಸಿದನು | ಕೇಳಿ ನೀವು || ೧ ||
ಒದಗಿನೊಳವನಲ್ಲಿ ಸೇರಿಕೊಂಡಿಹನೊರ್ವ | ಕೇಳಿ ನೀವು ||
ಅದುಭುತ ಕಪ್ಪು ಮೆಯ್ ಸಂದೆಲ್ಲ ಡೊಂಕುಗಳ್ || ಕೇಳಿ ನೀವು || ೨ ||
ನಳನಲ್ಲಿ ಹಿಂದೆ ಸಾವಿರ ಕುದುರೆಗೆ ಆತ | ಕೇಳಿ ನೀವು ||
ದಳವಾಯಿಯಂತೆ ಬಾಹುಕನೆಂಬ ಪೆಸರೀಗ | ಕೇಳಿ ನೀವು || ೩ ||

ಇಳೆಯೊಳು ಜೋಡಿಲ್ಲ ಪಾಕಗೈವುದರೊಳು | ಕೇಳಿ ನೀವು ||
ಬಲುರುಚಿಕರವೆಂತು ವರ್ಣಿಸುವೆನು | ಕೇಳಿ ನೀವು || ೪ ||
ಘನ ಚಿಹ್ನೆಗಳ ನೋಡೆ ನಳನಂತೆ ತೋರ್ಪುದು | ಕೇಳಿ ನೀವು || ೫ ||
ಇನಿತು ವೃತ್ತಾಂತವಲ್ಲದೆ ಬೇರೆ ಜಗದೊಳು | ಕೇಳಿ ನೀವು ||
ಜನಪನಾಗಿಹ ನೈಷಧೇಶನ ಸುಳಿವಿಲ್ಲ | ಕೇಳಿ ನೀವು || ೬ || 507 ||

**ಭೈರವಿ - ಝಂಪೆ**
ಧರಣಿದೇವನ ನುಡಿಗೆ | ಅರಸನಾಲೋಚಿಸುತ |
ತರಳೆ ಮುಖವೀಕ್ಷಿಸಲು | ಒರೆದಳಯ್ಯಂಗೆ || ೧ ||
ತಾತ ಕೇಳ್ ಸಂಶಯಗ | ಳೀತಕವನೊಳಗಿರ್ದ |
ಖ್ಯಾತನೇ ನಳನೆನ್ನ ಪ್ರೀತ ನಿಶ್ಚಯವು || ೨ ||
ಯಾರು ತಿಳಿಯದ ಹಾಗೆ | ಮಾಚಿ ರೂಪುಗಳನ್ನು |
ಸೇರಿರ್ಪ ನಾಮವನು | ಬೇರಿರಿಸಿಕೊಂಡು || ೩ ||
ನೂರು ವತ್ಸರ ಸಾಧಿ | ಸಿದರು ಕುರುಹುಗಳೆಮಗೆ |
ತೋರನವನಿದಕೊಂದು | ಭಾರಿ ಯುಕ್ತಿಯನು || ೪ ||
ಒರೆವೆ ನೀನಾ ತೆರದಿ | ವಿರಚಿಸಲು ಕಾರ್ಯಗಳು |
ಸರಿಗೂಡುವವು ಮನದೊ | ಳರಿತು ನೋಡೀಗ || ೫ || 512 ||

**ವಾರ್ಧಕ**
ಇಳೆಮೂರರೊಳು ಹುಡುಕಿದರು ನಳನ ಸೋಹಿಲ್ಲ |
ನಿಲದೆ ಪುನರಪಿ ಸ್ವಯಂವರಗೆಯ್ವ ಬಾಲಿಕೆಗೆ |
ಚಳದಿಂದ ಬಂದು ಪುಣ್ಯಗಳಿರ್ದ ಮೋಹನ್ನರೊಲಿಸಿಕೊಂಬುದು ಯೆನುತಲಿ ||
ಕಳುಹು ಲೇಖನಗಳಂ ಸಕಲ ರಾಯರ ಬಳಿಗೆ |
ಸಲೆ ಮದುವೆ ನಾಳೆಯೆಂಬೀ ದಿವ್ಯ ಸಂಜೆಯೊಳು |
ಚೆಲುವ ಋತುಪರ್ಣನಲ್ಲಿಗೆಯಟ್ಟು ದೂತನಂ ಅಳುಕದಿರು ನೀನೆಂದಳು || ೧ ||
ಬಿಸಜನೇತ್ರೆಯ ಮಾತಿಗೊಡಬಡುತ ಭೀಮನೃಪ |
ದೆಸೆದೆಸೆಗೆ ಪತ್ರಿಕೆಗಳಂ ಬರೆದು ಚಾರಕರ |
ವಶಕೀಯಲಾಕ್ಷಣಂ ಕೊಂಡೊಯ್ದು ಛಪ್ಪನ್ನ ವಸುಧೀಶರಿಂಗೆ ಕೊಡಲು ||
ನಸುನಗೆಯೊಳೀಕ್ಷಿಸುತ ಬಿರುದುಗಳನೊಡಗೊಂಡು |
ಎಸೆವ ಕರಿ ಹಯ ರಥಂಗಳನಡರಿ ಸೈನ್ಯ ಸಹಿ |
ತಸಮ ಬಲರಯ್ತಪ್ಪ ಸೊಗಸುಗಳನೆಂತೊರೆವೆ ಕುಸುಮಗಂಧಿಯನೊಲಿಸಲು || ೨ || 514 ||

**ಭಾಮಿನಿ**
ತರತರದ ಸಾಲ್ವಿಡಿದು ನಾಲ್ದೆಸೆ | ಯರಸುಗಳ ಬರೆ ಭೀಮರಾಯನು |
ತ್ವರಿತದಿಂದಿದಿರ್ಗೊಳುತ ಅರಮನೆಗಳನೆ ವಿಂಗಡಿಸಿ ||
ಪರಿಪರಿಯೊಳುಪಚರಿಸುತಖಿಳರ | ಹರುಷಬಡಿಸುತಲಿರಲುಯಿತ್ತಲು |
ಭರದಿ ಚರರುಗಳ್ ಗಮಿಸಿ ಪೊಕ್ಕರು ಮೆರೆವಯೋಧ್ಯವನು || ೧ || 515 ||

**ಕಂದ**
ಉರುತರ ಸಿರಿಯಿಂ ಶೋಭಿಪ |
ಪುರವಿಸ್ತಾರಂಗಳನೀಕ್ಷಿಸುತಾ ಚರರುಂ ||
ಭರದೊಳ್ ಧರಣಿಪನೆಡೆಗಂ |
ತೆರಳುತ ಶಿರಮಣಿದುಸಿರಿದರಾಗಳ್ ಮುದದಿಂ || ೧ || 516 ||

**ಏಕತಾಳ**
ಸಲಾಮು ಋತುಪರ್ಣರಾಯ | ಲಾಲಿಸು ಜೀಯ ||
ಸಲಾಮು ಮಾಳ್ಪೆವು ಪಾದಾರವಿಂದಕ್ಕೆ |
ನಿಲದೆ ಕೇಳ್ ನಮ್ಮ ಬಿನ್ನಹಗಳನು || ೧ ||
ವರ ಕುಂಡಿನಪುರ ದೊರೆ ಭೀಮರಾಯನು |
ಬರೆದಿಹ ಓಲೆಯ ಕರುಣದಿ ನೋಡು || ೨ ||
ಎನುತ ಮುಂದಿಡಲದ ಕರಣಿಕರ್ ಕಯ್ಕೊಂಡು |
ಜನಪ ಶಿರೋಮಣಿಗರಿಕೆ ಮಾಡಿದರು || ೩ || 519 ||

**ಕೇದಾರಗೌಳ - ಅಷ್ಟ**
ಸ್ವಸ್ತಿ ಶ್ರೀಮತ್ ವೈರಿಕುಲಗಜಸಿಂಹ ಗ | ಭಸ್ತಿವಂಶಾಧಿಪನು ||
ಸತ್ಯಗುಣಾನ್ವಿತ ಸಾಕೇತನಗರದ | ಪೃಥ್ವಿಪ ಋತುಪರ್ಣಗೆ || ೧ ||
ವರಕುಂಡಿನಾಪುರದರಸು ಭೀಮಾಖ್ಯನು | ವಿರಚಿಪ ಸಾಷ್ಟಾಂಗವು ||
ನೆರೆ ಕ್ಷೇಮಿಗಳು ನಾವು ನಿಮ್ಮ ಸುಕ್ಷೇಮಕ್ಕೆ | ಬರೆಸಿ ಕಳುಹಿಸುವುದು || ೨ ||

ಚದುರ ನಳನು ತ್ರಿಭುವನದೊಳಿಲ್ಲದರಿಂದ | ಬದಲಾಗಿ ದಮಯಂತಿಗೆ ||
ಮುದದಿ ಸ್ವಯಂವರ ಮಾಳ್ಪೆನು ದಯವಿಟ್ಟು ಒದಗಿನಿಂ ಬಹುದಿಲ್ಲಿಗೆ || ೩ ||
ವಸುಧೆಪಾಲರು ಬಂದು ನೆರೆದಿಹರೆಲ್ಲರು | ದಶಮಿಯ ದಿನದವಧಿ |
ಎಸೆವ ಗಳಿಗೆ ಹದಿಮೂರಕ್ಕೆ ಶುಭಲಗ್ನ | ಕುಶಲದೊಳಿಟ್ಟಿಹೆವು || ೪ ||
ನಿರತ ನಾವು ನಿಮ್ಮವರಾಗಿರೆ ವಿಶೇಷ | ಬರೆಯಲೇನುಪಚಾರವು ||
ತ್ವರಿತದೊಳ್ ನಡೆತಂದೀ ಕಾರ್ಯ ನಡೆಸುವಂತೆ | ಕರುಣಿಪುದೈ ಮನವ || ೫ || 524 ||

**ಸೌರಾಷ್ಟ್ರ - ತ್ರಿವುಡೆ**
ಎನುತಲೀ ಪರಿಯಿಂದ ವಾಚಿಸೆ |
ಜನಪ ಲಾಲಿಸುತಾಗ ಮನದೊಳು |
ಕನಲಿ ಘನಸಭೆ ನೋಡುತೆಂದನು | ಕಿನಿಸಿನಿಂದ || ೧ ||
ಇನಿಬರಿಗೆ ಸಮ್ಮತಗಳಾದುದೆ |
ಬಿನುಗು ಭೀಮನು ಬರೆದ ವಿವರವು |
ಧನಬಲವೊ ನೆಣಗೊಬ್ಬೊ ಮುಪ್ಪಿನ | ತನದ ಮರುಳೊ || ೨ ||
ಸ್ಮರಿಸದಪಕೀರ್ತಿಯನು ತಂದನು |
ದುರುಳತನದಲಿ ಕ್ಷತ್ರಿವಂಶದ |
ತರುಣಿಯೊರ್ವಳಿಗುಂಟೆ ಮದುವೆಗ | ಳೆರಡು ಜಗದಿ || ೩ ||
ಕಿರಿಯ ಮನುಜನೆಯದರೊಳಾ ನಳ |
ಧುರ ಪರಾಕ್ರಮಿ ಚಕ್ರವರ್ತಿಯು |
ಮೆರೆವ ಶಶಿಕುಲ ಮೌಳಿ ಕಷ್ಟ ಗ | ಳೆರಡು ದಿನವು || ೪ ||
ದೊರಕಿದುದು ವಿಧಿವಶದೊಳದಕಿವ |
ಪರರಿಗೀವನೆ ಮಗಳನಾತನು |
ಇಹನೊಯಿಲ್ಲವೊ ಯೆಂಬ ನೆಲೆಗಳ | ನರಿಯದೀಗ || ೫ ||
ತರಳೆಯನು ಪರಿಣಯವ ಮಾಳ್ಪನ |
ಹರುಷದಿಂದಲೆಯೊಲಿಸಿಕೊಂಬನ |
ನುರೆ ಮುಖವ ನಾ ನೋಡಿ ಸೊಕ್ಕನು | ಮುರಿದು ಕಡೆಗೆ || ೬ ||
ನೆರೆದ ಭಂಡ ನೃಪಾಲರೆಲ್ಲರ |
ನೊರೆಸಿ ಬರುವೆನು ಯೆಂದರಲ್ಲಿಗೆ |
ಇರುವುದೈ ಇನ್ನೂರು ಯೋಜನ | ತೆರಳಲೆಂತು || ೭ ||
ಬರೆದ ಲಗ್ನವ ನೋಡೆ ಅರೆದಿನ |
ಹೊರತು ಜಾಪ್ಯಗಳಿಲ್ಲವೆನುತಲೆ |
ಕರಗಿ ಮಿಡುಕುತಲಿರಲು ಬಾಹುಕ | ನೊರೆದನಾಗ || ೮ || 532 ||

**ನವರೋಜು - ಆದಿ**
ಧರಣೀವಲ್ಲಭ ಕೇಳು | ಇಲ್ಲಿ |
ಬರಿದೆ ನೀ ಕ್ರೋಧದೊಳು ||
ನೆರೆದ ಸಭೆಯು ನಡುಗುವ ತೆರದಲಿ ಕೂಗೆ |
ಬರುವ ಫಲಗಳೇನರುಹು ಕೃಪಾಳು || ೧ ||
ಏನ ಮಾಡಲಿ ನಾನು | ಸತ್ವ |
ಹೀನನಂತಾಗಿಹೆನು ||
ಮಾನಿನಿ ಮದುವೆಗೆ ದಿನ ಹದಿನೈದಿರೆ |
ಕಾಣಿಸುತಿದ್ದೆನು ತ್ರಾಣದ ಬಗೆಯನು || ೨ ||
ಕದನದಿ ನೀ ಬಹುಮೇಲು | ಅವ |
ರಧಮವಂಶರೆ ಪೇಳು ||
ಅದುಭುತ ಸೈನ್ಯಸಮೇತದೊಳಿರ್ಪರು |
ಮದನಾರಿಯ ತೃಣಕೆಣಿಸದ ಭಟರು || ೩ ||
ಸಲುಗೆಯೇತಕೊ ಇನಿತು | ನಿನ್ನ |
ತಲೆಗೆ ಯೇರಿತೆ ಭ್ರಾಂತು ||
ಬಲುಸುಖದನ್ನವು ಕೊಬ್ಬಿಸುತಿದೆ ಕೇ |
ಳಿಳೆ ಮೂರೆನ್ನಲಿ ಮಗುಚಿದರಳುಕೆನು || ೪ ||
ಛಲಗಳಿದ್ದರೆ ನಿನಗೆ | ನಾಳೆ | ಘಳಿಗೆ ಐದರ ಒಳಗೆ ||
ನಿಲಿಸುವೆ ತವ ರಥ ಕುಂಡಿನನಗರದಿ |
ಸಲಿಸಿಕೊ ಕದನದ ಬಯಕೆಯ ಮುದದಿ || ೫ || 537 ||

**ವಾರ್ಧಕ**
ವರ ಬಾಹುಕನ ನುಡಿಗೆ ಅರಸನತಿ ತೋಷದೊಳ್ |
ಕರವ ತಟ್ಟುತಲೆಂದ ಭಳಿರೆದೊಂದುಪಕಾರ |
ವಿರಚಿಸೆನಲಾಕ್ಷಣದಿ ವರ ರಥವ ಮೇಳೈಸಿ ತೆರಳಿ ಲಾಯಕೆ ತನ್ನಯ ||
ತ್ವರಿತಕೊದಗುವ ಕುದುರೆಗಳ ತಂದು ಕಟ್ಟಿ ಮ |
ತ್ತರಸಸಹಿತಲೆ ಭರದೊಳೇರಲಾ ಸ್ಯಂದನವ |
ನುರುತರದ ವುಬ್ಬಿನಿಂದಬ್ಬರಿಸೆ ಹಾರಿದುವು ತುರಗಗಳು ಮನೋವೇಗದಿ || ೧ || 538 ||

**ಭಾಮಿನಿ - ಅಬ್ಬರ**
ಭರಿತ ಗಮನಕೆ ಭೂಪ ಪಿಡಿದಿಹ | ಕರದ ವಸ್ತ್ರವು ಬೀಳಲಿಳೆಯಲಿ |
ಅರರೆ ಬಾಹುಕ ನಿಲ್ಲು ವಸನವು ತಪ್ಪಿ ಪೋದುದೆನೆ ||
ದೊರಕದಿನ್ನದು ನಿನಗೆ ಅರುವ | ತ್ತೆರಡು ಯೋಜನ ಹಿಂದೆಯುಳಿದುದು |
ಮರೆಯ ಮಾತೇನೆನಲು | ಮನದಲಿ ಬೆಚ್ಚಿ ಬೆರಗಾಗಿ || ೧ ||
ಮರಳದಿರು ತಡೆ ನಿಮಿಷ ನೀನಾ | ರರುಹು ವಂಚಿಸಬೇಡ ತ್ರೈಜಗ |
ದರಸು ನಳನೃಪನೋರ್ವನಲ್ಲದೆ ಹರಿಹರಾದ್ಯರಿಗೆ ||
ಬರದು ಈ ವೇಗಗಳು ಎನಲಾ | ಕಿರುನಗೆಯೊಳವನೆಂದನೀ ಪರಿ |
ಮರುಳುಗೊಂಬರೆ ರಾಯ ನೈಷಧನೆಲ್ಲಿ ತಾನೆಲ್ಲಿ || ೨ || 540 ||

**ಶಂಕರಾಭರಣ - ಏಕ**
ಬಾಳ ದೈನ್ಯದಿಂದ ನಾನು | ಕೇಳಿದರು ಒಳವ ನೀನು |
ಪೇಳದಿರ್ದ ಮೇಲೆ ನಿನ್ನ | ಕಾಲಿನೆಡೆಯೊಳು || ೧ ||
ನಾಲಿಗೆಯನಿರಿದುಕೊಂಡು | ಬೀಳುಗೊಡುವೆ ಪ್ರಾಣವೆಂದು |
ಭೂಲಲಾಮ ನಿರ್ಧರಿಸಿ | ಏಳಲಾಕ್ಷಣ || ೨ ||
ಪರಿಕಿಸುತ್ತ ಹಾ ಹಾ ಇಂತ | ತರಳ ಬುದ್ಧಿ ಯಾತಕೀಗ |
ಅರಿತುಕೊಳ್ಳೈ ನಾನೆ ನಳನು | ಪರಮ ಸಾಹಸಿ || ೩ ||
ಧುರದೊಳಿದಿರು ನಿಲ್ವರಿಲ್ಲ | ಸಿರಿಯೊಳ್ ಸುರಪನಿಂದ ಮಿಗಿಲು |
ಸ್ಮರನಾಕಾರವೆಲ್ಲ ಪೋದ | ಪರಿಗಳೇನಯ್ಯ || ೪ ||
ದುರುಳ ಶನಿಯು ಪಿಡಿದು ನಾನಾ | ತೆರದಿ ಭಂಗಪಡಿಸಿ ಮಂಕು |
ಮರುಳು ಮಾಡಿ ತೊರೆಸಿದನು | ತರುಣಿ ಮಕ್ಕಳ || ೫ ||
ಇರಲಿಯವನಿಂದಾಹುದೇನು | ಒರೆವೆ ಶನಿವಿಮೋಚನೆಯನು |
ಪರಮ ಮಂತ್ರ ಜಪಿಸುಯೆಂದು | ಅರುಹಲುಪದೇಶ || ೬ ||
ಉತ್ತಮವಾಗಿಹ ಮಂತ್ರ | ಅರ್ಥಿಯೊಳುಚ್ಚರಿಸೆ ಶನಿಯು |
ವಿಸ್ತರಿಸಲಾರದಾಗ | ಮತ್ತೆ ಭಯದೊಳು || ೭ ||
ಹೊತ್ತ ದುಗುಡದೊಳಗೆ ಪೋಪ | ಧೂರ್ತನ ಚಂಡಿಕೆಯ ಪಿಡಿದು ||
ಕತ್ತಿಯನ್ನು ಇಡಲು ಗಳಕೆ | ಪೃಥ್ವಿಪಾಲನು || ೮ || 548 ||

**ಸಾರಂಗ - ತ್ರಿವುಡೆ**
ನಳನ ರೌದ್ರಕೆ ಮನದಿ | ಮರುಗಿ ಶನಿ |
ಕಳವಳಿಸುತ ದೈನ್ಯದಿ ||
ನಿಲದೆ ಕೈಮುಗಿದು ಗೋಳಿಡುತ ಬಿನ್ನಯ್ಸಿದ |
ಬಲು ಕೃಪಾನಿಧಿಯೆ ನೀ ತಲೆಗಾಯ್ದು ಸಲಹೆಂದು || ೧ ||
ನೀನು ಕೊಲ್ಲುವದ್ಯಾಕಿನ್ನು | ಮೊದಲೆ ಎನ್ನ |
ಹೀನ ಕಾಳೋರಗನು |
ತಾನೆ ಕೊಂದಿಹನಯ್ಯ ವಿಷದ ಜ್ವಾಲೆಗೆ ಈಗ |
ಪ್ರಾಣ ಅರ್ಧಗಳಾಗಿ ಕ್ಷೀಣತ್ವ ಪಡೆದಿಹೆ || ೨ ||
ಎನ್ನಂಥವನ ಬಿಡದೆ | ಈ ಪರಿ ಕಷ್ಟ |
ವನ್ನು ಪಡಿಸಿದ ಮೇಲೆ ||
ಇನ್ನು ಪರರ ಜೀವ ಮಾತ್ರದಿ ಬಿಡುವೆಯ |
ಘನ್ನಘಾತಕ ನಿನ್ನ ಕಡಿದೊರಗಿಸುವೆನು || ೩ ||
ಹರಿಹರರಪ್ಪಣೆಯು | ತ್ರೈಜಗದೊಳ |
ಗಿರುವ ಮಹಾತ್ಮರನ್ನು ||
ಗರುವದೊಳ್ ಪೀಡಿಸೆನುತ ಅದರಿಂದಲೆ |
ಇರದೆ ಬಾಧಿಸುವೆನು ವರುಷ ಮೂವತ್ತನು || ೪ ||
ನರರು ಈ ಚರ್ಯವನ್ನು | ಸೈರಿಪರೆಂತು |
ದುರುಳ ಕೇಳೆಲವೊ ನೀನು ||
ಒರೆದ ವತ್ಸರಕೆ ತ್ಯಜಿಸು ಏಕಸೊನ್ನೆಯ |
ನೆರೆ ಪೀಡಿಸಬ್ದ ಮೂರರ ಗಣನೆಯೊಳ್ ಮುಂದೆ || ೫ || 553 ||

**ದ್ವಿಪದಿ**
ನಿನ್ನನುಜ್ಞೆಗಳಾದ ತೆರದಿ ಇರುತಿಹೆನು |
ಪುಣ್ಯನಿಧಿ ಬಿಡಬೇಕು ಧರ್ಮಸೆರೆಗಳನು || ೧ ||
ಇನ್ನು ಒಂದರೆದಿವಸ ಎನ್ನ ಮಾತಿನೊಳು |
ಮುನ್ನಿನಂದದೊಳಿರ್ದು ಕಡೆಗೆ ನೀ ತೆರಳು || ೨ ||
ಜೀಯ ಎನುತಲೆ ಪುನಃ ವಾಸವನು ಮಾಡೆ |
ರಾಯ ನೈಪದ ರಥವ ಹಾರಿಸಿದ ಕೂಡೆ || ೩ ||
ಕಾಯದಲಿ ಕಳವಳಿಸಿ ಬರಲು ಬಹುದೂರ |
ಪ್ರೀಯದಿಂ ಕಾಣಿಸಿತು ಕುಂಡಿನಾನಗರ || ೪ ||
ಪರಿಣಯಕೆ ಗೆಯ್ದಲಂಕಾರ ಸೊಬಗುಗಳು |
ನೆರೆದ ನೃಪರರಮನೆಗಳೆರಡು ಸಾಲಿನೊಳು || ೫ ||
ಕರಿ ತುರಗ ರಥ ಸೈನ್ಯ ಸಹಿತಲಲ್ಲಲ್ಲಿ |
ಇರುತಿರ್ದವೇನೆಂಬೆ ತಂಡತಂಡದಲಿ || ೬ ||
ಮೆರೆವ ಗುಡಿ ತೋರಣವು ಹೆಜ್ಜೆಹೆಜ್ಜೆಯಲಿ |
ಮೊರೆವುತಿರೆ ವಾದ್ಯಗಳು ಉದಧಿಘೋಷದಲಿ || ೭ ||
ಹರುಷದಿಂ ನೋಡುತಯ್ದುರುವ ಸಮಯದಲಿ |
ಚರರು ಬಂದರುಹಿದರು ಭೀಮರಾಯನಲಿ || ೮ ||
ತ್ವರಿತದಿಂದಿದಿರ್ಗೊಂಡು ಮನ್ನಿಸುತಲವರ |
ತರಳೆಯೊಡನುಸಿರಿದನು ಭರದೊಳೀ ವಿವರ || ೯ ||
ಪರಮ ಮಂಗಲೆ ಹಿಗ್ಗುತೇಕಾಂತದಿಂದ |
ಕರೆದು ಪಿತನೊಡನೊರೆದಳ್ ಕಡುಶಕ್ತಿಯಿಂದ || ೧೦ || 563 ||

**ಕಾಪಿ - ಅಷ್ಟ**
ಕೇಳಯ್ಯ ನಾನೆಂಬ ಸೊಲ್ಲ | ಭೂಮಿ |
ಪಾಲ ನಳನು ಬಂದ ಸಂದೇಹವಿಲ್ಲ ||
ಆಲೋಚಿಸಿದ ಕಾರ್ಯವೆಲ್ಲ | ಲಕ್ಷ್ಮೀ |
ಲೋಲನ ಕೃಪೆಯಿಂದ ಸರಿಗೂಡಿತಲ್ಲ || ೧ ||
ಆದರೆ ವೀಸದಷ್ಟಿನ್ನು | ಸಲೆ |
ಸಾಧಿಸಬೇಕು ಅದಕೆ ಮಾರ್ಗವನ್ನು ||
ಮೋದದೊಳುಸಿರುವೆ ನಾನು | ಸರ್ವ |
ಮೇದಿನೀಶ್ವರರಿಗೆ ಕೊಡಿಸೊಲುಪೆಯನು || ೨ ||
ಜಲ ವಹ್ನಿ ಎರಡುಗಳನ್ನು | ಪುರ |
ದೊಳಗೆಲ್ಲು ಕೊಡದಂತೆ ತಾಕೀದಿಯನ್ನು ||
ನಿಲದೆ ಮಾಡಿಸು ಮತ್ತೆ ನೀನು | ಬುದ್ಧಿ |
ತಿಳಿದಂತೆ ನೋಡುವೆ ಪತಿಚರಣವನು || ೩ || 566 ||

**ಕೇದಾರಗೌಳ - ಅಷ್ಟ**
ಮಗಳ ಮಾತಿಗೆ ನಸುನಗುತ ಭೂವರ ತನ್ನ | ನಗರಕಾಜ್ಞೆಯ ಗೆಯ್ಸಲು ||
ಮಿಗೆ ಧರಾಧಿಪರೆಲ್ಲ ಹಸಿತೃಷೆಯಿಂದಲಿ | ಮೊಗ ಬಾಡಿ ಸೊರಗಿದರು || ೧ ||
ಇತ್ತಲಾಯೋಧ್ಯ ಪುರೇಶನಾಲಯದೊಳ | ಗರ್ತಿಯಿಂ ಭೋಜನವ ||
ವರ್ತಿಸಿಕೊಂಡೆಲ್ಲ ತಾವಾನಂದದೊಳಿರ್ಪ | ವರ್ತಮಾನವ ಕೇಳುತ್ತ || ೨ ||
ಕರೆದು ಸುದೇವನೊಳರುಹಿದಳ್ ದಮಯಂತಿ | ತೆರಳಿ ನೀ ಯುಕ್ತಿಯಲಿ ||
ವರ ಋತುಪರ್ಣನಲ್ಲಿಹ ಪಾಕಕಾರಿಯ | ಕರೆತಂದು ತೋರೆಂದಳು || ೩ ||
ಅರೆನಿಮಿಷದಿ ನೋಳ್ಪೆನೀ ಕಾರ್ಯ ನೋಡೆಂದು | ತೆರಳಿ ಬಾಹುಕನ ಕಂಡು ||
ಪರಿಪರಿಯಿಂ ಮಾತನಾಡಿಸಿ ಮೆಲ್ಲನೆ | ಚಾರಿದನಾ ವಿಪ್ರನು ||
ಭೂರಿ ವಿಕಾರದೊಳಿಹ ತನುವೀಕ್ಷಿಸಿ | ಘೋರನೆ ಕೇಳ್ದಳೆಂದು || ೫ || 570 ||

**ತುಜಾವಂತು - ಝಂಪೆ**
ಧೀರ ನೀನ್ಯಾರು ತವ ಊರ್ ಯಾವುದೀಗ |
ಯಾರ ಚಾರಕ ನಾಮವೇನುಸಿರು ಬೇಗ || ಪ ||
ಈ ರೂಪು ಜನನಿಯಲಿ ಜನಿಸುವಾಗಲೆ ಇಹುದೊ |
ಸೇರಿಕೊಂಡುದೊ ಇತ್ತಲಾಗಿ ನಿನಗೆ ||
ನಾರಿಯಾವಳು ಮಕ್ಕಳೆಷ್ಟಿಹರು ಎನೆ ಗೊತ್ತು |
ದೋರದಂದದಿ ಪೇಳ್ದ ನೀರಜಾಕ್ಷಿಯೊಳು || ೧ ||
ಮೆರೆವ ಬಂಗಾಳದೇಶಗಳೆನಗೆ ಪೂರ್ವದಲಿ |
ವರಬಾಹುಕನು ಎಂಬ ಹೆಸರು ಕೇಳು ||
ಬರೆದ ವಿಧಿವಶದಿಂದ ದಾರಿದ್ರ್ಯ ಸಂಭವಿಸಿ |
ಇರುವೆ ಋತುಪರ್ಣನೊಳು ಪಾಕವೃತ್ತಿಯಲಿ || ೨ ||

ಅತಿನಿಪುಣ ಮಕ್ಕಳೀರ್ವರು ಸಹಿತ ಸೇರಿದಳು |
ಸತಿಯು ತವರ್ಮನೆಯೊಳಿಹರತಿಭಾಗ್ಯರು ||
ಸ್ಥಿತಿಯಿಂದಿಗೆನಲಾಗಿ ಮತಿವಂತೆ ನಸುನಗುತ |
ಪತಿಯೆಂಬ ನೆಲೆಯರಿತು ಹಿತದೊಳುಸಿರಿದಳು || ೩ ||
ಹಿಂದೆ ನಳನಿಗೆ ಮೆಚ್ಚಿ ಮದುವೆಯಾಗಿರೆ ಮೋಸ |
ದಿಂದ ವಂಚಿಸಿ ಪೋದನಡವಿಯೊಳಗೆ ||
ತಂದೆ ಬದಲಾಗಿ ಪರಿಣಯಗೈವೆನೆಂದು ನೃಪ |
ವೃಂದವನು ಕರೆಸಲಾ ಬಂದು ನೆರೆದಿಹರು || ೪ ||
ಆ ಗರ್ವದಲಿ ಮನವು ಸರ್ವಥಾ ಒಡಬಡದು |
ಈಗ ನಿನ್ನೊಳು ಮೋಹ ಮುಸುಕಿರ್ಪುದು ||
ಹೇಗೆ ನಿನ್ನಭಿಮತವು ವಂಚಿಸದೆ ಪೇಳುವುದು |
ಬೇಗಲೆನ್ನೊಳಗೆನಲು ನುಡಿದವನೊಲಿದು || ೫ || 575 ||

**ಸೌರಾಷ್ಟ್ರ - ಮಟ್ಟೆ**
ತರುಣಿ ಮೋಹ ಯಾಕೀಗ ಯೆನ್ನೊಳು |
ತಿರುಕರಿಂದತಿ ತಿರುಕ ಜಗದೊಳು ||
ದೊರೆಕುಮಾರಿ ಕೇಳ್ ನಿನಗೆ ಯೋಗ್ಯವೆ |
ಪರರ ಸೇವೆಯಿಂ ದಿನವ ಕಳೆಯುವೆ || ೧ ||
ಮೊದಲ ಸತಿಯನೆ ಪೊರೆಯಲಾರದೆ |
ಹದನಗೆಟ್ಟು ದೇಶಾಂತ್ರ ತಿರುಗುವೆ ||
ಮದುವೆ ಬೇಡ ನಾ ವೃದ್ಧನಾದೆನು |
ಮದನಕೇಳಿಗೆ ಒದಗಲಾರೆನು || ೨ ||
ನೀನೆ ಕಲಿಸಿದ ಜಾಣನುಡಿಗಳ |
ನೇಕವಿರ್ಪುದಂತಿರಲಿ ನಿಜಗಳ ||
ಕಾಣಿಸೈ ಬಹುಭಾಗ್ಯ ಉಣಿಸಿದೆ |
ಏನು ಧೃಡವೊ ಕಲ್ಮನಕೆ ಮೆಚ್ಚಿದೆ || ೩ ||
ರೂಢಿಯೊಳಗೆ ಈ ರೂಪ ಸೊಬಗನು |
ಮಾಡಲರಿಯ ಸೃಷ್ಟಿಯನೆ ಬ್ರಹ್ಮನು ||
ನೋಡಲಾರೆ ನಾ ಮುಗಿದು ಕೈಯನು |
ಬೇಡಿಕೊಂಬೆನು ತ್ಯಜಿಸು ಸಾಕಿನ್ನು || ೪ || 579 ||

**ವಾರ್ಧಕ**
ನಾರಿಯಾಡಿದ ನುಡಿಗೆ ಭೂರಿ ಲಜ್ಜೆಗಳಿಂದ |
ಧಾರಿಣಿಪ ಹೂಂಕರಿಸೆ ಕ್ರೂರ ಶನಿ ಬಿಟ್ಟಾಗ |
ಘೋರನೆರಗುತ ತೆರಳಲಾ ನಳಂ ರಂಜಿಸಿದ ವಾರಿಜಾಪ್ತನ ತೇಜದಿ ||
ಮಾರಸುಖಿಗಿಂತೆಂದು ಪತಿಚರಣಕೆರಗಲತಿ |
ಕಾರುಣ್ಯದಿಂದವಳ ಬಿಗಿಯಪ್ಪಿ ಚುಂಬಿಸುತ |
ಭಾರಿ ಕಷ್ಟವ ಪಡಿಸಿದೆನು ನಿನ್ನ ನಾನೆಂದು ಸೋರುವಶ್ರುವನೊರಸಿದ || ೧ || 580 ||

**ಭಾಮಿನಿ**
ಸಿರಿಮುಕುಂದರ ತೆರದೊಳಾ ವಧು | ವರರು ಒಪ್ಪಿರೆ ದಿವ್ಯತೇಜದಿ |
ವರ ಸುದೇವನು ಕಂಡು ತೆರಳುತ ಬಂದು ನೃಪನೊಡನೆ ||
ಅರುಹಿದನು ಯೆಲೆ ರಾಯ ನಿನ್ನಯ | ಕೊರತೆಯಂಬುಜಕೀಗ ಹರುಷದ |
ತರಣಿಯುದಿಸಿದ ನೋಡು ಮೆರೆದಿಹ ನಳನು ಸತಿಸಹಿತ || ೧ || 581 ||

**ಸೌರಾಷ್ಟ್ರ - ತ್ರಿವುಡೆ**
ಘನ ಪುರೋಹಿತನೆಂದ ಶುಭನುಡಿ |
ಜನಪ ಲಾಲಿಸುತಾಗ ಸಂತಸ |
ವನಧಿಯೊಳಗೋಲಾಡುತಾಕ್ಷಣ | ವನಿತೆಸಹಿತ || ೧ ||
ಮುದ್ದು ಅಳಿಯನ ಬಳಿಗೆ ಬರೆ ಕಂ |
ಡೆದ್ದು ನಮಿಸಿದನತ್ತೆಮಾವರಿಗ್ |
ಹೊದ್ದಿದಾನಂದದಲಿ ಪರಿಕಿಸಿ | ಬುದ್ಧಿಯುತನು || ೨ ||
ಬಂದೆಯೇನೈ ಶಶಿಕುಲಾಧಿಪ |
ಮಂದಗಮನೆಯ ಕಾಡೊಳ್ ವಂಚಿಸಿ |
ಒಂದೆ ಬುದ್ಧಿಯೊಳ್ ಪೋದ ಪ್ರೌಢ ನೀ | ನಿಂದು ದಯದಿ || ೩ ||
ಬರಿದೆ ಕೋಪಿಸಲೇಕೆ ತನ್ನನು |
ಇರದೆ ಸಕಲವ ತೊರೆಸಿ ಹೃದಯವ |
ಕರಡುಗೊಳಿಸುತ ತಿರುಗಿಸಿದ ಶನಿ | ಗರುಹಿಯವನು || ೪ ||

ಇರಲಿ ಹಿಂದಣ ಮಾತಿನಿಂದಲೆ |
ಬರುವ ಫಲವೇನಿನ್ನು ಕರೆಸಿದ |
ದೊರೆಗಳೆಲ್ಲರ ಕಳುಹಬೇಕೆಂ | ದರಸನಾಗ || ೫ ||
ಒರೆಯೆ ಮಂತ್ರಿಯೊಳಾ ತತಕ್ಷಣ |
ಕರವ ಮುಗಿದಲ್ಲಿಂದ ಬಂದತಿ |
ತ್ವರಿತದಿಂದುಸಿರಿದನು ಮಣಿಹಾ | ರಕರೊಳಂದು || ೬ || 587 ||

**ಭಾಮಿನಿ**
ಮೆರವಣಿಗೆಯಾಗುವುದು ನಳದಮ | ಯಂತಿಯರಿಗೀ ಕ್ಷಣದಿ ಸರ್ವರು |
ನೆರೆದು ಬಪ್ಪುದೆನುತ್ತ ಡಂಗುರ ಹೊಯ್ಸುದೆನೆ ಭರದಿ ||
ವರ ಸಚಿವನಾಜ್ಞೆಯಲಿ ಮೋದದೊ | ಳಿರದೆ ಸಾರಿದ ವಾಕ್ಯವಾಲಿಸಿ |
ಉರುತರದ ಚೋದ್ಯದಲಿ ಭೀತಿಯೊಳಖಿಲ ನೃಪವರರು || ೧ ||
ಮಾನನಿಧಿ ನೈಷಧನ ಬಳಿಗತಿ | ಸಾನುರಾಗದಿ ಗಮಿಸಿ ಚರಣಕೆ |
ಕಾಣಿಕೆಯ ಕೊಟ್ಟೆರಗಿ ನುಡಿದರು ಮುಗಿದು ಕೈಗಳನು ||
ಏನನೆಂಬೆನು ಜೀಯ ಬಹುತರ | ಕಾಣಿಸಿದ ಭವಣೆಯನು ಖೂಳನ |
ಶೋಣಿತವ ಚೆಲ್ಲುವೆವು ವೀಳ್ಯವ ಪಾಲಿಸೆನಲೆಂದ || ೨ || 589 ||

**ಬೇಗಡೆ - ಅಷ್ಟ**
ಉರ್ವಿಪಾಲರು ಕೇಳಿ ನಿಮಗಿದಿರ್ಯಾರು |
ಓರ್ವರಿಂದೋರ್ವರು ಘನಪರಾಕ್ರಮರು ||
ಗರ್ವದೊಳ್ ನೀವು ಮುನಿದು ನಿಂತರವನನ್ನು |
ನಿರ್ವಹಿಸುವುದುಂಟೆ ಜಗದೊಳಧಮನು || ೧ ||
ತೆರಳಿ ನೋಡುವ ಬಂದು ದೇಹಿ ಎನ್ನುವನೊ |
ಧುರದಿ ತನ್ನಯ ರಕ್ತಮದವ ತೋರುವನೊ ||
ಅರಿತ ಮೇಲಯ್ಯ ನಿಮ್ಮಯ ಸಾಹಸಗಳು |
ನೆರೆ ಸೈನ್ಯ ಸಹಿತಲೀಕ್ಷಣ ಯೇಳಿರೆನಲು || ೨ || 591 ||

**ಭೈರವಿ - ತ್ರಿವುಡೆ**
ಕೇಳು ಯಮಜಾ | ಶಶಿಕುಲ | ಮೌಳಿ ರಾಜಾ || ಪ ||
ಕೇಳು ನಳನೃಪ ಸಕಲ ರಾಯರ ಮೇಲದಿಂದಲೆ ಹೊರಡಲು |
ಪಾಳಯವು ನಡೆಯಲ್ಕೆ ಪ್ರಳಯದ ಶೂಲಿಚೂಣಿಯ ತೆರದೊಳು ||
ಮೇಲೆ ವರ ಭೀಮಾಖ್ಯ ಬೆಂಬಲವಾಗಿ ನಿಮಿಷದೊಳೇಳಲು |
ಸೂಳವಿಸೆ ನಿಸ್ಸಾಳ ವಾದ್ಯ ನಗಾರಿ ಜಯಭೇರಿ ರವಗಳು || ಕೇಳು || ೧ ||
ಕರಿ ತುರಗ ರಥನಿಕರ ಪರಿಪರಿ ಬಿರುದನೇಕಗಳೆಸೆಯಲು |
ತರುಣಿಯರ ವೊಗ್ಗಿನಲಿ ಘನ ದಮಯಂತಿಯಂದಣವೇರಲು ||
ತರಣಿ ನಭ ದಿಕ್ಕುಗಳು ಕಾಣಿಸದಂತೆ ಕೆಂಧೂಳಡರಲು |
ಭರದಿ ಪಯಣದ ಮೇಲೆ ಪಯಣದಿ ಮೆರೆವ ನೈಷಧಪುರವ ನೋಡಲು || ಕೇಳು || ೨ ||
ವಿರಚಿಸಲು ಡೇರೆಗಳ ಬಿಡದೀರೇಳು ಯೋಜನವಗಲದಿ |
ಮರುದಿವಸದುದಯದಲಿಯಾಪ್ತರ ಕರೆಸಿ ನಳನೇಕಾಂತದಿ ||
ಇರದೆಯಾಲೋಚನೆಯ ಗೆಯ್ದಾ ವರ ಸುದೇವನ ತ್ವರಿತದಿ |
ದುರುಳನಲ್ಲಿಗೆ ಸಂಧಿಗಟ್ಟಲು ತೆರಳಿ ಸಭೆಯನು ಪೊಕ್ಕ ವಹಿಲದಿ || ಕೇಳು || ೩ || 594 ||

**ವಾರ್ಧಕ**
ಪರಿಕಿಸುತ ವಿಪ್ರನಂ ಪರಿವಿಷ್ಕರವನಿಳಿದು |
ಎರಗಿ ಪುಷ್ಕರ ಬಹಳ ಸತ್ಕರಿಸಿ ಕೇಳಿದಂ |
ಪರಮಪಾವನನಿಲ್ಲಿಗಯ್ತಂದ ಹದನೇನು ಅರುಹೆನಲ್ಕಿವನೆಂದನು ||
ಅರಸನಾಗಿಹ ನಳಂ ಕಳುಹಿಸಿದ ನಿನ್ನೆಡೆಗೆ |
ನೆರೆಜೂಜಿನೊಳ್ ಸೋತ ಧರಣಿ ಭಂಡಾರಮಂ |
ಮರಳಿ ತಂದೀಯಲತಿ ಸುಖಮಹುದು ಅಲ್ಲದಿರೆ ಧುರಕೆ ಬರಹೇಳಿರುವನು || ೧ || 595 ||

**ಭಾಮಿನಿ**
ಕಡು ಅಧಮ ಸತಿಸಹಿತಲಡವಿಯೊ | ಳೊಡಲ ಹೊರೆಯದೆ ಮತ್ತೆ ಬಂದನೆ |
ಪೊಡವಿಯಾಳುವೆನೆಂಬ ಪಿತ್ತದ ತೊಡಕು ಮುಸುಕಿಹುದು ||
ಕೊಡುವೆನೇ ಗೋಷ್ಪಾದ ಭೂಮಿಯ | ಖಡುಗದಿರಿತವ ತೋರಿದಲ್ಲದೆ |
ರಡನೆ ನುಡಿಯಿನ್ನಿಲ್ಲವೆನಲಾ ಭೂಸುರನು ನಡೆದ || ೧ || 596 ||

**ಕೇದಾರಗೌಳ - ಅಷ್ಟ**
ಬಂದು ಸುದೇವ ನೈಷಧಮುಖ್ಯರಿಗೆ ಪೇಳ್ದ | ಸಂಧಿಯ ವೃತ್ತಾಂತವ ||
ಮಂದಮತಿಯು ರಣವಲ್ಲದೆ ಕ್ಷಮೆ ಕೊಡೆ | ನೆಂದು ಪೇಳಿದ ವಾಕ್ಯವ || ೧ ||
ಬೀಳಲಾನುಡಿ ಕರ್ಣದಲಿ ನಳ ಪ್ರಳಯದ | ಕಾಲಭೈರವನಂದದಿ ||
ಆಲಿಯೊಳ್ ಕಿಡಿಯುಗುಳುತ್ತ ಕೈ ಬೀಸಿದ | ಕಾಳಗಕಾ ಕ್ಷಣದಿ || ೨ ||
ಬತ್ತೀಸಾಯುಧಗಳ ಧರಿಸಿ ಭಾಪೆನುತಲೆ | ಹತ್ತಲು ಲಗ್ಗೆಯನ್ನು ||
ಇತ್ತ ಪುಷ್ಕರ ಸೈನ್ಯ ಸಹಿತ ಬಂದಾಗ ಮುಂ | ದೊತ್ತುವ ಸೈನ್ಯವನು || ೩ ||
ಸರಳ ಶರಧಿಯನ್ನು ಮುಸುಕಿ ಚೂಣಿಯನೆಲ್ಲ | ಸವರಿ ಮುಂದಕೆ ಬಹುದ ||
ಪರಿಕಿಸಿ ನೃಪವೃಂದ ಧರಿಸೆ ಶಸ್ತ್ರವ ಹಿಮ | ಕರಕುಲಾಧಿಪ ನುಡಿದ || ೪ ||
ಪರರಲ್ಲಿ ಗುಪಿತದೊಳಿದ್ದು ಕಾನನವನ್ನೆ | ಚರಿಸಿ ಬೇಸತ್ತಿಹೆನು ||
ಅರೆನಿಮಿಷದಿ ಕಾದಿ ನೋಳ್ಪ ಬೆಂಬಲವಾಗಿ | ಇರಿ ಸಾಕು ತನಗೆಂದನು || ೫ || 601 ||

**ಶಂಕರಾಭರಣ - ಮಟ್ಟೆ**
ಎನುತಲವರನೊಡಂಬಡಿಸಿ ವೀರಸೇನನ |
ತನಯ ರಥವನೇರಿ ಮೀಸೆ ತಿರುಹುತಾಕ್ಷಣ ||
ಕನಲಿ ಧನುವ ಪಿಡಿದು ಸಿಂಹನಾದವೆಸಗುತ |
ಬಣಗು ಪುಷ್ಕರಂಗೆ ಪೇಳ್ದ ಮೂದಲಿಸುತ || ೧ ||
ಪರಮಪಾಪಿ ನರಗುರಿಯೆ ಯಿತ್ತ ನೋಡೆಲಾ |
ಭರದಿ ನಿನ್ನ ಒಡಲ ಬಗಿವ ಧೀರ ನಾನೆಲಾ ||
ಗರುವವೆಲ್ಲ ತೋರು ಕಾಂಬೆ ಕ್ಷತ್ರಿ ಪಂಥವ |
ದುರುಳ ಶನಿಯ ಬಲದಿ ಮಲೆತು ಲೆತ್ತನಾಡಿದ || ೨ ||
ನಿನ್ನ ಮಹಿಮೆಯಿಂದ ಪೇಳ್ದ ನುಡಿಗಳಲ್ಲಿದು |
ಮುನ್ನ ವನದಿ ಗೆಡ್ಡೆ ಗೆಣಸು ತಿಂದ ಕೊಬ್ಬಿದು ||
ಇನ್ನು ನಿನಗೆ ತಿರುಗಿ ರಾಜ್ಯವೀಯಬಲ್ಲೆನೆ |
ಬೆನ್ನೊಳುಗಿದು ತೆಗೆವೆ ಕರುಳ ನೋಡು ಬಗೆಯನು || ೩ ||
ಕಡುಕಠೋರ ವಚನ ಕೇಳ್ದು ನೈಷಧೇಶನು |
ಕಿಡಿಯನುಗುಳುತಾಗ ಸುರಿದ ಸರಳ ಮಳೆಯನು ||
ತಡೆಯದವನು ಶೌರ್ಯದಿಂದ ಸವರುತೆಲ್ಲವ |
ಒಡನೆ ಹೂಂಕರಿಸುತ ಬಿಡಲು ಉರುತರಾಸ್ತ್ರವ || ೪ ||
ಕೆಂಡದಂತೆ ಗಮಿಸೆ ಬಲವು ಕಂಡು ಬೆದರಲು |
ಚಂಡ ಭುಜಬಲಾಢ್ಯ ನಳನು ಕಡಿದು ಭರದೊಳು ||
ರುಂಡಮಾಲವಿಶಿಖವೆಸೆಯೆ ಬಂದು ಖೂಳನ |
ಮಂಡೆಗೆರಗೆ ಮೂರ್ಛೆಗೊಂಡನಾ ತತುಕ್ಷಣ || ೫ || 606 ||

**ಕಂದ**
ಮಲಗಿದ ಪುಷ್ಕರನಂ ಕಾಣುತ |
ದಳ ಬೆದರುತಲೋಡಲ್ ನಾಲ್ದೆಸೆಗಂ ||
ಘಳಿಲನೆ ಕಾಲಿಂದೊದೆದೆಬ್ಬಿಸಿ |
ಗಳಕಿಡೆ ಕೂರಸಿಯಂ ನಳಿನಾಂಬಕಿ ನುಡಿದಳ್ ಪತಿಗೊಂದಿಸುತಂ || ೧ || 607 ||

**ಸಾವೇರಿ - ಅಷ್ಟ**
ಕೊಲ್ಲ ಬೇಡೀತನನು | ರಕ್ಷಿಸಬೇಕು |
ಖುಲ್ಲನ ದಯದಿ ನೀನು ||
ವಲ್ಲಭ ಕೇಳು ಜಂಬುಕನ ಸಿಂಹ ಮುರಿವುದು |
ಮಲ್ಲ ಸಾಹಸವಲ್ಲ ಪಾಲಿಸೆನ್ನಯ ಸೊಲ್ಲ || ೧ ||
ಈತನಿಂದೇನಹುದು | ನಿನ್ನನು ಗೆಲ್ಲ |
ಭೂತನಾಥಗೆ ತೀರದು ||
ಘಾತಕ ಶನಿ ಬುದ್ಧಿಗೆಡಿಸಿ ಭಯವ ಗಯ್ಸಿ |
ನೀತಿ ತಪ್ಪಿಸಿ ಅಪಕೀರ್ತಿಯ ಹೊರಿಸಿದ || ೨ ||
ಬಿಡು ಪರದೇಶಿಯನು | ಯೆಂದೆನೆ ಸತಿ |
ನುಡಿಗೆ ಮೆಚ್ಚುತ ನಳನು ||
ಖಡುಗವ ತೆಗೆಯೆ ಪುಷ್ಕರ ನಾಚಿ ಯೆರಗುತ್ತ |
ಒಡೆಯ ನಾ ಬಹುಪಾಪಿ ಹೊಡಿ ಶಿರವೆನುತಲಿ || ೩ ||
ಪೊರಳುತಿರಲು ಪಾದದಿ | ಪುಟ್ಟಿತು ಘನ |
ಕರುಣಗಳಾಕ್ಷಣದಿ ||
ಪರಿಪರಿಯಿಂದೊಡಂಬಡಿಸಿ ಸರ್ವರ ಕೂಡಿ |
ಪುರಪ್ರವೇಶವ ಗೆಯ್ದು ಭರಿತ ಸಂತೋಷದಿ || ೪ ||

ವರ ಸುಮೂಹೂರ್ತದೊಳು | ಸಿಂಹಾಸನ |
ಹರಿಕುಲಾಧಿಪನೇರಲು ||
ಅರಸುಗಳೆಲ್ಲ ಕಾಣಿಕೆಯಿತ್ತು ನಮಿಸುತ್ತ |
ಭರದೊಳಪ್ಪಣೆಗೊಂಡು ತೆರಳಿದರ್ ಗೆಲವಿಂದ || ೫ || 612 ||

**ಭಾಮಿನಿ**
ಕ್ಷಿತಿಯನಾಳಿದ ಮತ್ತೆ ನಳನೃಪ | ಸತಿಸುತರು ಪ್ರಜೆ ಬಂಧು ವರ್ಗವು |
ಅತಿ ನಿಪುಣ ಮಂತ್ರಿಗಳು ಸಹಿತಲೆ ಹಿತದಿ ಪೋಷಿಸುತ ||
ಜೊತೆಗಳಾರಾತಂಗೆ ಶೌರ್ಯೋ | ದ್ಧತನು ಗುಣಗಂಭೀರ ಶಾಂತಾ |
ರತುನ ಸತ್ಯವಿಚಾರನೆಂದೆನುತೆಸೆಯೆ ಕೀರ್ತಿಗಳು || ೧ || 613 ||

**ಸೌರಾಷ್ಟ್ರ - ತ್ರಿವುಡೆ**
ಇನಿತು ನಳ ಪೂರ್ವದಲಿ ಕಷ್ಟವ |
ನನುಭವಿಸಿ ಕಡೆಯಲ್ಲಿ ಸುಖದೊಳ |
ವನಿಯನಾಳಿದ ಕಥೆಯನೆಲ್ಲವ ವಿನಯದಿಂದ || ೧ ||
ಘನಮುನಿಪ ರೋಮಶನು ಸಾಂಗದಿ |
ಜನಪನಾಗಿಹ ಧರ್ಮರಾಯಗೆ |
ಅನುಗೊಳಿಸಿದಂದವನು ವನಜಾಂ | ಬಕನ ದಯದಿ || ೨ ||
ಪೃಥ್ವಿಯಮರರ ಕುಲದೊಳುದಿಸಿದ |
ಸತ್ಯಗುಣ ನಾರಾಯಣಾರ್ಯನ |
ಪುತ್ರ ನಾಗನು ವಿರಚಿಸಿಹ ಪಸು | ಳತ್ವದಿಂದ || ೩ ||
ಮತ್ತೆ ಯಿದರೊಳಗಿರಲು ತಪ್ಪಗ |
ಳುತ್ತಮರು ಸಮಗೆಯ್ದು ಯೆನ್ನ ಕೃ |
ತಾರ್ಥನನು ಮಾಡುವುದು ಜರೆಯದೆ | ಇತ್ತು ದಯವ || ೪ || 617 ||

**ಮಂಗಲ**
ಮಂಗಲಂ ಜಯ ಮಂಗಲಂ || ಪ ||
ಮಂಗಲ ಇನಶತಭಾಸನಿಗೆ |
ಮಂಗಲ ದನುಜಕುಲಾಂತಕಗೆ |
ಮಂಗಲ ಮನುಮುನಿವಂದಿತಗೆ |
ಮಂಗಲ ವನಜಾಸನಪಿತಗೆ ||
ಮಂಗಲಂ ಜಯ ಮಂಗಲಂ || ೧ ||
ಮತ್ಸ್ಯವತಾರಗೆ ಕಚ್ಛಪಗೆ |
ಅಚ್ಚ ಸೂಕರನಾಗಿ ಬಾಳಿದಗೆ ||
ವತ್ಸನ ರಕ್ಷಿಸಿದಾತನಿಗೆ ಶೌರ್ಯ |
ಹೆಚ್ಚಿ ಕ್ಷಮೆಯನಳೆದಾತನಿಗೆ ||
ಮಂಗಲಂ ಜಯ ಮಂಗಲಂ || ೨ ||
ಅಸಮ ಕ್ಷತ್ರಿಯರ ಸಂಹರಿಸಿದಗೆ |
ದಶಶಿರವಂಶಕುಠಾರನಿಗೆ |
ಪಶುಗಳ ಕಾಯ್ದಗೆ ಬೌದ್ಧಗೆ ಕಲ್ಕಿಗೆ |
ದಶಶತನಾಮ ಶ್ರೀವೆಂಕಟಗೆ ||
ಮಂಗಲಂ ಜಯ ಮಂಗಲಂ || ೩ || 620 ||

**ಭಾಮಿನಿ**
ತಾಳ ಲಯ ಸ್ವರಭೇದ ಕವಿತೆಯ | ಮೂಲ ವಿಷಮಾಕ್ಷರಗಳೊಂದನು |
ಬಾಲಕನು ನಾನರಿಯೆ ತಿಳಿದವರೊಲಿದು ತಿದ್ದುವುದು ||
ಶೂಲಧರ ಜಗದೀಶ ಗೌರೀ | ಲೋಲ ಧ್ವಜಪುರದೊಡೆಯ ಬುದ್ಧಿಯ |
ಪಾಲಿಸಿದ ತೆರನಂತೆ ರಚಿಸಿದೆನೀ ಮಹಾ ಕಥೆಯ || ೧ || 621 ||

**ಮಂಗಲ**
ಜಯ ಮಂಗಳಂ ನಿತ್ಯ ಶುಭಮಂಗಳಂ || ಪ ||
ಗಜಮುಖನ ತಾತನಿಗೆ ತ್ರೈಜಗದ್ವ್ಯಾಪ್ತನಿಗೆ |
ಗಜಗತಿಭೂಷಣಗೆ ವಿಜಯಾಪ್ತಗೆ || ೧ ||
ಘನತ್ರಿಪುರ ಘಾತನಿಗೆ ಮನುಮಥವಿನಾಶನಿಗೆ |
ಚಿನುಮಯಾತ್ಮಕ ಹರಗೆ ಇನತೇಜಗೆ ||
ಗುಣಭರಿತ ರುದ್ರನಿಗೆ ದನುಜಕುಲಶಿಕ್ಷನಿಗೆ |
ಅನವರತ ಭಕ್ತರನು ಪೋಷಿಸುವಗೆ || ೨ ||

ಭಸಿತಾಂಗಲೇಪನಿಗೆ ಪಶುಪತಿಯರೂಢನಿಗೆ |
ಬಿಸಜಾಂಬಕನ ಪ್ರಿಯಗೆ ಶಶಿಜೂಟಗೆ ||
ವಸುಧೆಗುತ್ತಮವಾದ ಧ್ವಜಪುರನಿವಾಸನಿಗೆ |
ಎಸೆವ ಕೋಟೇಶ್ವರ ಮಹಾಲಿಂಗಗೆ || ೩ || 624 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ

**ಪ್ರಸಂಗ ಪ್ರತಿ ಆಧಾರ:** ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಲ ನಾ ಭಟ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ಸುಬ್ರಮಣ್ಯ ಭಾಗವತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ಶಿವಕುಮಾರ ಬಿ. ಎ. ಅಳಗೋಡು, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ